ಚೆಗೆವಾರ

ಡಾ: ಜಿ.ರಾಮಕೃಷ್ಣ



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಚೆ ಗೆವಾರ

ಡಾ. ಜಿ. ರಾಮಕೃಷ್ಣ

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೧

CHEGEVARA—Written by Dr. G. Ramakrishna and Published by Karnataka Sahitya Akademy, Nrupatunga Road, Bangalore-560002.

First Publication 1994   Pages : viii+108

ಹಕ್ಕುಗಳು : ಲೇಖಕರವು

ಮೊದಲನೇ ಮುದ್ರಣ ೧೯೯೪

ನೆರವು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ನಾಲ್ಕು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು–೫೬೦೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ–ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ ; ಜಡಚೈಲುಗಳನ್ನು ನಿರ್ಮಿಸುವುದಿಲ್ಲ ; ಅಸಮಾನತೆಯನ್ನು

ಒಪ್ಪುವುದಿಲ್ಲ; ಅವಮಾನವೀಯತೆಯನ್ನು ಘೋಷಿಸುವುದಿಲ್ಲ. ಆದರೆ ಆದ್ಯತೆಗಳಲ್ಲಿ ಅಂತರವಿರಬಹುದು: ಚಿಂತನೆಯಲ್ಲಿ ವೈರಂಧ್ಯಗಳಿರಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯುವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕ ಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪ — ಬರಗೂರು ರಾಮಚಂದ್ರಪ್ಪ
ಬೆಂಗಳೂರು — ಅಧ್ಯಕ್ಷರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ಡಾ. ಜಿ. ರಾಮಕೃಷ್ಣ

ಚೆ ಗೆವಾರ

ಅಧ್ಯಾಯ ೧

ಹಿನ್ನೆಲೆ

ದಕ್ಷಿಣ ಅಮೆರಿಕಾದ ದೇಶಗಳಲ್ಲಿ 'ಗೆವಾರ' ಎಂಬುದು ಬಹಳ ವಾಗಿ ಕಂಡುಬರುವ ಹೆಸರಲ್ಲ. ಚೆ ಗೆವಾರಾನಿಂದಾಗಿ ಅದು ಸಾಕಷ್ಟು ಪ್ರಭಾವಶಾಲಿಯಾಗಿ ಕೇಳಿಬರುವ ಹೆಸರು. ಆತ ಪ್ರಸಿದ್ಧನಾದ ತರುವಾಯದಲ್ಲಿ ಮರಿಯಾ ರೊಸಾರಿಯೋ ಗೆವಾರ ಎಂಬಾಕೆ ತನಗೆ ಇವನೇನಾದರೂ ದೂರದ ಸಂಬಂಧಿಯೋ ಎಂದು ಭ್ರಮಿಸಿ ಆತನ ಪೂರ್ವಿಕರು ಸ್ಪೇನಿನ ಯಾವ ಭಾಗದಿಂದ ಬಂದಿದ್ದರೆಂದು ಕೇಳಿ ಪತ್ರ ಬರೆದಳು. ಇದರಲ್ಲಿ ಚೇಗೆ ಕುತೂಹಲ ಇರಲಿಲ್ಲ. ಆ ಬಗ್ಗೆ ಮಾಹಿತಿ ಯನ್ನೂ ಆತ ಸಂಗ್ರಹಿಸಿರಲಿಲ್ಲ. ಉತ್ತರದಲ್ಲಿ ಅವನು ಹೀಗೆಂದ; "ನಾವು ಹತ್ತಿರದ ಸಂಬಂಧಿಗಳೆಂದು ನಾನು ತಿಳಿದಿಲ್ಲ, ಆದರೆ ಈ ನಮ್ಮ ವಿಶ್ವದ ಯಾವುದೇ ಭಾಗದಲ್ಲಾದರೂ ಅನ್ಯಾಯವಾಗುತ್ತಿರು ವಾಗ ಅದರಿಂದ ಕೋಪ ಕೆರಳಿ ನೀವು ಸ್ಪಂದಿಸಬಲ್ಲಿರಾದರೆ ನಿಜಕ್ಕೂ ನಾವು ಸಂಗಾತಿಗಳೇ. ಅದೇ ಹೆಚ್ಚು ಮುಖ್ಯವಾದದ್ದು".

ಈ ಅರ್ಥದಲ್ಲಿ ವಿಶ್ವಮಾನವನೆನಿಸಿಕೊಂಡ ಚೆ ಗೆವಾರಾಗೆ ಅರ್ನೆಸ್ಟೊ ಎಂಬುದು ಕುಟುಂಬದಲ್ಲಿ ಕೊಡಲಾಗಿದ್ದ ಹೆಸರು. ಗೆವಾರ ಎಂಬುದು ಮನೆತನದ ಹೆಸರು. ತಾಯಿಯ ಕಡೆಯಿಂದ ಲಿಂಚ್ ಸೇರಿ ಕೊಂಡು ಆತ ಅರ್ನೆಸ್ಟೊ ಗೆವಾರ ಲಿಂಚ್ ಆಗಿದ್ದ, ಎಲ್ಲರೊಡನೆ ಕಲೆತು 'ನಮ್ಮವನು' ಎನಿಸಿಕೊಂಡದ್ದರಿಂದ ಆತ 'ಚೆ ಗೆವಾರ' ಆದ. ಹೀಗೆನಿಸಿ

ಕೊಂಡದ್ದು ಬರಿ ಕ್ಯೂಬಾ ಅಥವಾ ಬೇರಾವುದೋ ಒಂದು ದೇಶವಲ್ಲ. ವಿಶ್ವದ ಕ್ರಾಂತಿಕಾರಿ ಸಮುದಾಯ ಆತನನ್ನು ತನ್ನವನನ್ನಾಗಿಸಿಕೊಂಡಿದೆ. ಆತನ ಕಾರ್ಯಕ್ಷೇತ್ರ ವಿಶೇಷತಃ ದಕ್ಷಿಣ ಅಮೆರಿಕಾ ಆಗಿತ್ತಾದರೂ ಆಕಾಂಕ್ಷೆ ಮತ್ತು ಚಿಂತನೆ ಇಡೀ ಮಾನವಕುಲದ ಪರವಾಗಿದ್ದಿತು.

ದಕ್ಷಿಣ ಮತ್ತು ಉತ್ತರ ಅಮೆರಿಕಾಗಳನ್ನು ಭೂಪಟದಲ್ಲಿರುವಂತೆ ತೋರಿಸಿ ಅವುಗಳ ನಡುವಣ ಸಂಬಂಧವನ್ನು ವ್ಯಂಗ್ಯಚಿತ್ರವೊಂದು ಬಹಳ ಹಿಂದೆ ಮಾರ್ಮಿಕವಾಗಿ ಚಿತ್ರಿಸಿತ್ತು. ತೆಂಗಿನ ಮರವೊಂದರ ಬುಡ ದಕ್ಷಿಣದಲ್ಲಿದೆ. ಬಡ ರೈತನೊಬ್ಬ ಅದಕ್ಕೆ ಗೊಬ್ಬರ, ನೀರು ಕೊಟ್ಟು ಆರೈಕೆ ಮಾಡುತ್ತಿದ್ದಾನೆ. ತೆಂಗಿನಕಾಯಿ ಗೊಂಚಲುಗಳು ವಿಪುಲವಾಗಿ ಬೆಳೆದು ಉತ್ತರಕ್ಕೆ ಏರಿ ನಿಂತಿವೆ. ಇವನು ಮುಗಿಲಿನತ್ತ ತಲೆಯೆತ್ತಿ ಸೊಂಪಾಗಿ ಬೆಳೆದ ಕಾಯಿಗಳನ್ನು ವಿಸ್ಮಯದಿಂದ ನೋಡುತ್ತಿದ್ದಾನೆ. ಮೇಲೆ ಚುಕ್ಕಿ–ಗೀರುಗಳ ಟೊಪ್ಪಿಗೆ ಧರಿಸಿದ ಕೆಂಪುಕಣ್ಣುಗಳ ಧೂರ್ತನೊಬ್ಬ ಅಸಡ್ಡೆಯ ನಗೆ ಬೀರುತ್ತಾ ಕಾಯಿಗಳನ್ನು ಕೊಯ್ದು ಬುಟ್ಟಿಗೆ ತುಂಬಿಕೊಳ್ಳುತ್ತಿದ್ದಾನೆ. ಚೆ ಕಾಲದಲ್ಲಿ ಮಾತ್ರವೇಕೆ. ಇಂದಿಗೂ ಸಹ ಇದು ಕಡುವಾಸ್ತವ ಚಿತ್ರಣ. ಬೆಳೆ ಬೆಳೆಯುವವನೊಬ್ಬ. ಅದನ್ನು ಕಿತ್ತು ನುಂಗುವವನು ಮತ್ತೊಬ್ಬ !

ಒಂದು ಅಧ್ಯಯನದ ಪ್ರಕಾರ ೧೯೬೦ರ ಆರಂಭದಲ್ಲಿ ದಕ್ಷಿಣ ಅಮೆರಿಕಾದ ದೇಶಗಳಲ್ಲಿ ಹಸಿವು. ರೋಗ ಇತ್ಯಾದಿಗಳಿಂದ ನಿಮಿಷಕ್ಕೆ ನಾಲ್ಕು ಜನ, ಅಂದರೆ ವರ್ಷಕ್ಕೆ ಇಪ್ಪತ್ತು ಲಕ್ಷ ಮಂದಿ, ಅಸು ನೀಗುತ್ತಿದ್ದರು. ಆದರೆ ಅವೇ ದೇಶಗಳಿಂದ ಉತ್ತರ ಅಮೆರಿಕಾಕ್ಕೆ ನಿಮಿಷಕ್ಕೆ ನಾಲ್ಕು ಸಾವಿರ ಡಾಲರುಗಳು, ಅಂದರೆ ವರ್ಷಕ್ಕೆ ಇನ್ನೂರು ಕೋಟಿ ಡಾಲರುಗಳ ಮೊತ್ತದ ಸಂಪತ್ತು ಹರಿಯುತ್ತಿತ್ತು. ಒಂದು ಸಾವಿರ ಡಾಲರುಗಳ ಲೂಟಿಯಿಂದರೆ ಒಂದು ಹೆಣ ಬಿದ್ದಿತು, ಎಂದರ್ಥ. ಸಾಮ್ರಾಜ್ಯಶಾಹಿಯು ರೌದ್ರನರ್ತನದಲ್ಲಿ ತೊಡಗುವುದು ಹೀಗೆ. ದಕ್ಷಿಣ ಅಮೆರಿಕಾವು ಉತ್ತರ ಅಮೆರಿಕಾದ ಹಿತ್ತಲಿದ್ದಂತೆ. ಅಲ್ಲಿಯ

ಸಂಪತ್ತನ್ನು ಕಬಳಿಸುವುದು ಉತ್ತರದ ಕುಲೀನ ಸಮಾಜದ ಹೊಲಸು ಮನೋಧರ್ಮ.

ಪ್ರಜಾಪ್ರಭುತ್ವ ರೀತ್ಯಾ ಚಿಲಿಯಲ್ಲಿ ಅಧ್ಯಕ್ಷರಾಗಿ ಚುನಾಯಿತ ರಾಗಿದ್ದು ೧೯೭೩ರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರ್ಕಾರ ದಿಂದ ಹತ್ಯೆಗೊಳಗಾದ ಡಾ॥ ಸಾಲ್ವಡಾರ್ ಅಲೆಂಡೆ ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಒಮ್ಮೆ ಹೇಳಿದ್ದರು: "ಚಿಲಿಯ ಸಂದರ್ಭದಲ್ಲಿ ಶಾಂತಿ ಎಂದರೆ ತನ್ನ ದೇಶದ ಸಂಪತ್ತಾದ ತಾಮ್ರವನ್ನು ತಾನೇ ಭೋಗಿಸು ವುದು ಎಂದರ್ಥ". ಅದಕ್ಕೆ ತಕ್ಕುದಾದ ಕ್ರಮ ಕೈಗೊಂಡಾಗ ಲೂಟಿಯ ಫಲವನ್ನು ಬಿಟ್ಟುಕೊಡಲು ನಿರಾಕರಿಸಿದ ಅಮೆರಿಕಾದ ಅಧ್ಯಕ್ಷ ಅಲೆಂಡೆ ಯವರ ಕೊಲೆಗೆ ಆಜ್ಞೆನೀಡಿದ್ದು ಈಗ ಚರಿತ್ರೆಯ ದಾಖಲೆಗಳಲ್ಲಿ ಸೇರಿ ಹೋಗಿದೆ. ಸ್ವಯಮಿಚ್ಛೆಯಿಂದ ಇತರರ ಸಂಪತ್ತನ್ನು ಬಿಡುವುದಿರಲಿ ಆಯಾ ದೇಶಗಳ ಜನ ಸಾಮ್ರಾಜ್ಯಶಾಹಿಯು ತನ್ನ ಉಪಟಳವನ್ನು ನಿಲ್ಲಿಸಬೇಕೆಂದು ಒಕ್ಕೊರಲಿನಿಂದ ಕೂಗಿದಾಗಲೂ ಅದನ್ನು ನಿಲ್ಲಿಸಲು ಸಿದ್ಧವಿರುವುದಿಲ್ಲ. ಬದಲಾಗಿ ಎಲ್ಲಿಲ್ಲದ ಸಿಟ್ಟು, ಹಿಂಸೆ ಮತ್ತು ಕ್ರೌರ್ಯಗಳನ್ನು ಪ್ರದರ್ಶಿಸುವುದು ಅದರ ಜಾಯಮಾನ. ವಸಾಹತು ಶಾಹಿಯ ವಿರುದ್ಧ ಸುಮಾರು ಒಂದು ಶತಮಾನ ಹೋರಾಡಿದ ಭಾರತಕ್ಕೆ ಇದರ ಸಮಗ್ರ ಪರಿಚಯವಿದೆ ಮತ್ತು ಇನ್ನೊಮ್ಮೆ ಅಂತಹು ದರ ಪರಿಚಯ ಮಾಡಿಕೊಳ್ಳುವ ಉಗ್ರಕಾಲದ ಹೊಸ್ತಿಲಲ್ಲಿ ನಾವು ನಿಂತಿದ್ದೇವೆ. ೧೯೬೨ರ ಹವಾನಾದ ಎರಡನೆ ಘೋಷಣೆಯು ಹೇಳಿದಂತೆ. "ತಮ್ಮ ಬಾಗಿಲ ಬಳಿ ಕುಳಿತು ಸಾಮ್ರಾಜ್ಯಶಾಹಿಯ ಹೆಣ ಹೊರ ಹೋಗುವುದೆಂದು ನಿರೀಕ್ಷಿಸುವುದು ಕ್ರಾಂತಿಕಾರಿಗಳ ಕೆಲಸವಲ್ಲ; ಪ್ರತಿಯೊಬ್ಬ ಕ್ರಾಂತಿಕಾರಿಯ ಕರ್ತವ್ಯವೂ ಕ್ರಾಂತಿ ಮಾಡುವುದೇ ಆಗಿದೆ." ಚೆ ಮಾಡಬಯಸಿದ್ದು ಮತ್ತು ಮಾಡಿದ್ದು ಅದನ್ನೇ.

ಹತ್ತೊಂಭತ್ತನೆಯ ಶತಮಾನದ ಆದಿಭಾಗದಲ್ಲಿ ಕ್ಯೂಬಾ ಇನ್ನೂ ಸ್ಪೇನಿನ ಆಳ್ವಿಕೆಯಲ್ಲಿದ್ದಾಗ ಅಮೆರಿಕಾದ ಅಧ್ಯಕ್ಷ ಜಾನ್ ಕ್ವಿನ್ಸಿ

ಆಡಮ್ಸ್ ಈ ದ್ವೀಪದತ್ತ ಕಣ್ಣು ಹಾಯಿಸಿದ. ಅದು ಸೇಬಿನ ಹಣ್ಣಿನಂತೆ ಆತನಿಗೆ ಕಾಣಿಸಿತು. ಸ್ಪೇನಿನ ಮರದಿಂದ ಉದುರಿ ಆ ಹಣ್ಣು ಅವನ ಬುಟ್ಟಿಗೆ ಬೀಳುತ್ತದೆಂದು ಆತನ ನಿರೀಕ್ಷೆಯಾಗಿತ್ತು. ಹಾಗೆ ಅದನ್ನು ಉಪಯೋಗಿಸಿಕೊಂಡಾದ ಮೇಲೆ ಅಲ್ಲಿಯ ಸಂಪತ್ತನ್ನು ಸೂರೆ ಮಾಡು ವುದಕ್ಕೆ ಹೆಚ್ಚು ಸಮಯ ಹಿಡಿಯಲಿಲ್ಲ. ಸಿಯೆರ್ರಾ ಮೇಸ್ತ್ರಾದಲ್ಲಿ ಕದನ ಹೂಡಲು ತೆರಳಿದ್ದ ಚೆ ೧೯೫೭ರಲ್ಲಿ ಆ ಪ್ರದೇಶದ ಜನ ಬಿಳಿಚಿಕೊಂಡು ಸತ್ವಹೀನರಾಗಿದ್ದುದನ್ನು ಕಂಡ. ವೈದ್ಯನಾಗಿ ಅಲ್ಲಿಯ ಹಳ್ಳಿಗರಿಗೆ ಆರೋಗ್ಯ ತಪಾಸಣೆ ಮಾಡಲು ಗುಡಿಸಲೊಂದರಲ್ಲಿ ಕುಳಿತಿರುತ್ತಿದ್ದ. ಅಲ್ಲಿಗೆ ಬರುತ್ತಿದ್ದವರಿಗೆಲ್ಲಾ ಒಂದೇ ಕಾಯಿಲೆ, ಒಂದೇ ಔಷಧ: ಸತ್ವಹೀನತೆ ಒಳ್ಳೆಯ ಊಟ. ವೈದ್ಯನಿಗೆ ಒಂದು ಮಗು ಹೇಳಿತು ; "ಏನು, ಎಲ್ಲರಿಗೂ ಅದನ್ನೇ ಹೇಳುತ್ತೀರಲ್ಲಾ?"

ಈ ಪರಿಸ್ಥಿತಿ ಕ್ಯೂಬಾಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ದಕ್ಷಿಣ ಅಮೆರಿಕಾದ ಎಲ್ಲಾ ದೇಶದ ಬವಣೆಯೂ ಹೆಚ್ಚುಕಡಿಮೆ ಇದೇ ಆಗಿತ್ತು. ಚಿನ್ನ, ಎಣ್ಣೆ ಇತ್ಯಾದಿ ಅಗಾಧ ಸಂಪತ್ತಿನ ತವರಾದ ಬೊಲಿವಿಯಾ ಒಬ್ಬ ನಿರ್ಗತಿಕನಂತಿತ್ತು. ವಿದೇಶಿ ಬಂಡವಾಳಿಗರು ಬೇಕಾದಷ್ಟು ಲಾಭ ದೋಚುತ್ತಿದ್ದಾಗ ಆ ದೇಶದ ಜನ ಸೊರಗಿ ಸುಣ್ಣವಾಗಿದ್ದರು. ಗ್ವಾಟೆಮಾಲಾ ಪೂರ್ತಿ ಯುನೈಟೆಡ್ ಫ್ರೂಟ್ ಕಂಪನಿಯ ಸ್ವತ್ತಾಗಿತ್ತೆಂದರೆ ಅತಿಶಯೋಕ್ತಿಯಲ್ಲ. ಅಮೆರಿಕಾದ ಈ ಬಹುರಾಷ್ಟ್ರೀಯ ಕಂಪನಿಯನ್ನು ದಕ್ಷಿಣ ಅಮೆರಿಕಾದಲ್ಲಿ "ಹಸಿರು ಪಿಶಾಚಿ" ಎಂದು ಕರೆಯಲಾಗುತ್ತಿತ್ತು. ಚಿಲಿಯ ತಾಮ್ರ, ಮೆಕ್ಸಿಕೋದ ಎಣ್ಣೆ, ಬ್ರೆಜಿಲ್‌ನ ಕಾಡುಗಳು, ಪನಾಮಾದ ಹಣ್ಣುಗಳು, ಇತ್ಯಾದಿಗಳೆಲ್ಲಾ ವಾಷಿಂಗ್‌ಟನ್–ನ್ಯೂಯಾರ್ಕ್ ನಗರಗಳ ಅಧಿಪತಿಗಳ ಪಾಲು. ದಕ್ಷಿಣ ಅಮೆರಿಕಾದ ನಾಗರೀಕರಿಗೆ ಬಡತನ, ಅನಕ್ಷರತೆ, ಹೀನ ಜೀವನ ಸ್ಥಿತಿ, ನಿರ್ದಯ ಶೋಷಣೆ ಇತ್ಯಾದಿಗಳು ಪ್ರತಿಫಲ !

ಅಮೆರಿಕಾದ ಶ್ರೇಷ್ಠ ನ್ಯಾಯಾಲಯದ ಮೊದಲ ಮುಖ್ಯ ನ್ಯಾಯಾಧೀಶ ಜಾನ್ ಜೇ ಹೇಳುತ್ತಿದ್ದನಂತೆ: "ಯಾರು ದೇಶದ ಆಸ್ತಿಯ ಮಾಲಿಕರಾಗಿದ್ದಾರೋ ಅವರು ದೇಶದ ಆಡಳಿತ ಸೂತ್ರ ವಹಿಸಬೇಕು." ಅಂದರೆ, ನಾಗರೀಕರಿಗಿಂತಲೂ ಕೆಲವೇ ಮಂದಿ ಮಾಲಿಕರ ಅಧಿಕಾರ ಹಿರಿದು ಎಂದಾಯಿತು. ಆಸ್ತಿಯ ಹಕ್ಕು ಮತ್ತು ಪ್ರಭಾವಗಳು ಮಾನವೀಯ ಹಕ್ಕುಗಳನ್ನು ನೆಲಸಮ ಮಾಡಿದ್ದವು. ದಕ್ಷಿಣ ಅಮೆರಿಕಾ ಇಂತಹ ಸನ್ನಿವೇಶದಿಂದ ಪಾರಾಗಲು ಒಂದು ಶತಮಾನಕ್ಕೂ ಹೆಚ್ಚು ಕಾಲ ತಹತಹಿಸಿತ್ತು.

ಇದನ್ನೆಲ್ಲಾ ಗಮನಿಸಿದ್ದ ಚೆ ಗೆವಾರ ಒಂದು ತೀರ್ಮಾನಕ್ಕೆ ಬಂದರು: ಈ ಪಿಡುಗನ್ನು ಅಂತ್ಯಗೊಳಿಸಲು ಸಾಮಾಜಿಕ ಕ್ರಾಂತಿಯೊಂದೇ ಹಾದಿ. ತೋರಿಕೆಯ ಸ್ವಾತಂತ್ರ್ಯವು ನೈಜ ಸ್ವಾತಂತ್ರ್ಯವಾಗಬೇಕಾದಲೆ ಇಂತಹ ಕ್ರಮ ಅತ್ಯಗತ್ಯ. ಒಂದು ಕಡೆ ಶ್ರಮಿಕನಿಗೆ ದಕ್ಕಬೇಕಾದ ಕೂಲಿ ದೊರೆಯದಿರುವುದು ಮತ್ತು ಇನ್ನೂ ವ್ಯಾಪಕವಾಗಿ ರಾಷ್ಟ್ರದ ಮಟ್ಟದಲ್ಲಿ ನೋಡಿದರೆ ಇಡೀ ರಾಷ್ಟ್ರದ ಸಂಪನ್ಮೂಲಗಳನ್ನು ಬೇರೆಯವರು ರೂಢಿಸಿಕೊಂಡು ಭೋಗಿಸುವುದು. ಇದು ವ್ಯಕ್ತಿಗೆ ಹಾಗೂ ಸಮಷ್ಟಿಗೆ ನಷ್ಟದ ಹೊರೆಯಾಗಿ ಪರಿಣಮಿಸಿ ಕ್ರಮೇಣ ರಾಜಕೀಯ ದಾಸ್ಯಕ್ಕೆ ರಾಷ್ಟ್ರವನ್ನು ದಬ್ಬುತ್ತದೆ. ವಸಾಹತುಶಾಹಿ ಕ್ರಮದಲ್ಲಿ ಇರುವಂತೆ ವಿದೇಶಿ ಬಂಡವಾಳಿಗನು ಸೈನ್ಯವನ್ನು ತಂದು ತನ್ನ ಆಧಿಪತ್ಯ ಸ್ಥಾಪಿಸಿಕೊಳ್ಳುವ ಅಗತ್ಯ ಇದರಲ್ಲಿಲ್ಲ. ಆಧಿಪತ್ಯವನ್ನು ಸ್ಥಾನಿಕ ಬಂಡವಾಳಿಗರ ಮತ್ತು ರಾಜ್ಯ ಯಂತ್ರದ ಮೂಲಕ ಸ್ಥಾಪಿಸಿಕೊಳ್ಳಲು ವಿದೇಶಿ ಬಂಡವಾಳ ಬೇರೆಯೇ ದಾರಿಯನ್ನು ಕಂಡುಕೊಳ್ಳುತ್ತದೆ. ಇದನ್ನು ನವವಸಾಹತುಶಾಹಿ ಎನ್ನಬಹುದು. ಇದರ ಪರಿಸಮಾಪ್ತಿಯಾಗದೆ ದಕ್ಷಿಣ ಅಮೆರಿಕಾಕ್ಕೆ ಬಂಧನದಿಂದ ಬಿಡುಗಡೆ ಇಲ್ಲ. ಆ ಬಿಡುಗಡೆಯ ಹಾದಿಯನ್ನು ಕ್ರಮಿಸುವುದು ಕ್ರಾಂತಿಕಾರಿಯ ಕರ್ತವ್ಯ. ಜನ ಸಮುದಾಯವನ್ನು ಪ್ರಜ್ಞಾಪೂರ್ವಕವಾಗಿ ಇದರಲ್ಲಿ

ತೊಡಗಿಸಿಕೊಳ್ಳಬೇಕು ಮತ್ತು ಸಶಸ್ತ್ರ ಹೋರಾಟವೊಂದೇ ಬಿಡುಗಡೆಗೆ ಅಂತಿಮ ಸಾಧನ.

೧೯೫೩ರ ಜುಲೈ ೨೬ರಂದು ಫಿಡೆಲ್ ಕ್ಯಾಸ್ಟ್ರೋ ಮತ್ತು ಆತನ ತಂಡದವರು ಕ್ಯೂಬಾದಲ್ಲಿ ಮೋನ್‌ಕಾಡಾ ಅರಮನೆಯೆಂದು ಹೆಸರಾಗಿದ್ದ ಶಸ್ತ್ರಾಗಾರದ ಮೇಲೆ ದಾಳಿ ನಡೆಸಿ ವ್ಯಾಪಕ ಚಳುವಳಿಯೊಂದನ್ನು ಆರಂಭಿಸಿದರು. ಇದಕ್ಕೆ ಜುಲೈ ೨೬ರ ಚಳುವಳಿಯೆಂದೇ ಹೆಸರು ಬಂದಿದೆ. ಆ ಸಂಬಂಧದಲ್ಲಿ ಸೆರೆಮನೆಗೆ ದೂಡಲ್ಪಟ್ಟಿದ್ದ ಕ್ಯಾಸ್ಟ್ರೋ ಅವರ ವಿಚಾರಣೆಯು ಸ್ಯಾಂಟಿಯಾಗೋದ ಕ್ಯೂಬಾದಲ್ಲಿನ ಆಸ್ಪತ್ರೆಯಲ್ಲಿ ಜರುಗಿತು. ಕೋರ್ಟಿನ ಮುಂದೆ ಕ್ಯಾಸ್ಟ್ರೋ ನೀಡಿದ "ಇತಿಹಾಸವು ನನ್ನನ್ನು ನಿರ್ದೋಷಿಯನ್ನಾಗಿಸುತ್ತದೆ" ಎಂಬ ಹೇಳಿಕೆಯು ಪ್ರಸಿದ್ಧವಾಗಿದೆ. ಅದರಲ್ಲಿನ ಒಂದು ಭಾಗ ಹೀಗಿದೆ: "ಸೈನಿಕರನ್ನು ಯುದ್ಧದಲ್ಲಿ ಎದುರಿಸಬೇಕೆಂಬುದು ನಮ್ಮ ಉದ್ದೇಶವಾಗಿರಲಿಲ್ಲ. ಶಸ್ತ್ರಾಗಾರವನ್ನು ಆಕ್ರಮಿಸಿ ಶಸ್ತ್ರಗಳನ್ನು ಕೈವಶ ಮಾಡಿಕೊಳ್ಳಬೇಕೆಂಬುದು ನಮ್ಮ ಆಶಯವಾಗಿತ್ತು. ಆ ಮೂಲಕ ಜನರನ್ನು ಎಚ್ಚೆತ್ತುಕೊಳ್ಳುವಂತೆ ಮಾಡುವುದು ಮತ್ತು ಸೈನಿಕರು ದಬ್ಬಾಳಿಕೆಯ ದುರ್ವಾಸನೆಯಿಂದ ಕಲ್ಮಶಗೊಂಡಿರುವ ಹೊಲಸು ಧ್ವಜವನ್ನು ಬಿಸುಟು ಸ್ವಾತಂತ್ರ್ಯದ ಬಾವುಟವನ್ನು ಅತುಕೊಳ್ಳುವಂತೆ ಮಾಡುವುದು ನಮ್ಮ ಆಶಯವಾಗಿತ್ತು. ರಾಷ್ಟ್ರದ ಒಂದು ಚಿಕ್ಕ ಸಂಚುಕೂಟದವರ ಹಿತಾಸಕ್ತಿಗಳನ್ನು ರಕ್ಷಿಸುವುದರ ಬದಲು ಇಡೀ ದೇಶದ ಶ್ರೇಷ್ಠ ಹಿತಾಸಕ್ತಿಗಳನ್ನು ರಕ್ಷಿಸುವುದು ಸೈನಿಕರ ಕೆಲಸವಾಗಬೇಕು. ಅವರು ತಮ್ಮ ಬಂದೂಕುಗಳನ್ನು ಜನರ ವೈರಿಗಳತ್ತ ಗುರಿಯಿಡಬೇಕೇ ವಿನಾ ಜನಗಳತ್ತಲ್ಲ. ಸ್ವತಃ ಅವರ ತಂದೆ ತಾಯಂದಿರು ಮತ್ತು ಮಕ್ಕಳು ಸಹ ಈ ಜನ ವಿಭಾಗಕ್ಕೆ ಸೇರಿರುತ್ತಾರಲ್ಲವೆ ? ಆದ್ದರಿಂದ ಅವರು ಜನರೊಡನೆ ಐಕ್ಯಗೊಳ್ಳಬೇಕು. ಅವರನ್ನು ಸೋದರ ಭಾವದಿಂದ ಕಾಣಬೇಕು ಸರ್ಕಾರವು ಅಪೇಕ್ಷಿಸುವಂತೆ ಜನರನ್ನು ವೈರಿಗಳೆಂದು ತಿಳಿಯಬಾರದು, ವಿರೋಧಿಸಬಾರದು. ಸೈನಿಕರಿಗೆ ಮತ್ತು ಇತರರಿಗೆ

ಇರುವ ಒಂದೇ ಸುಂದರ ಆದರ್ಶವೆಂದರೆ ದೇಶದ ಹಿರಿಮೆ ಹಾಗೂ ಸೌಖ್ಯಕ್ಕಾಗಿ ಒಗ್ಗೂಡುವುದು. ಅನೇಕ ಸೈನಿಕರು ನಮ್ಮನ್ನು ಹಿಂಬಾಲಿಸುತ್ತಾರೆಂಬ ನಿರೀಕ್ಷೆ ನಮ್ಮದಾಗಿತ್ತು. ಕಾರಣ ಸ್ಪಷ್ಟವಿದೆ; ಕ್ಯೂಬಾದ ಯಾವ ಪ್ರಜೆ ತಾನೆ ದೇಶದ ಗರಿಮೆಯನ್ನು ಆಶಿಸು ವುದಿಲ್ಲ? ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಯಾವ ಹೃದಯ ಪ್ರಜ್ವಲ ವಾಗುವುದಿಲ್ಲ?"

ಜನ ಸಮುದಾಯ ಮತ್ತು ಸೈನಿಕ ದಳಗಳು ಒಗ್ಗೂಡಿ ದೈತ್ಯ ಉಪಜೀವಿಗಳನ್ನು ಕಿತ್ತುಹಾಕಬೇಕು, ಅವರ ಯಜಮಾನನಾದ ಅಮೆರಿಕಾದ ಸಾಮ್ರಾಜ್ಯಶಾಹಿಯನ್ನು ಹೊರದೂಡಬೇಕು, ನೂತನ ಸಾಮಾಜಿಕ-ಆರ್ಥಿಕ ವ್ಯವಸ್ಥೆಯಡಿಯಲ್ಲಿ ಸಮುದಾಯ ಜೀವನ ವಿಕಸಿಸಿ ಕಂಗೊಳಿಸಬೇಕು, ಸಮಾನಾವಕಾಶ ಅಸ್ತಿತ್ವಕ್ಕೆ ಬರಬೇಕು, ವ್ಯಕ್ತಿಯಲ್ಲಿ ಪ್ರತಿಭೆ ಅರಳುವಂತಾಗಬೇಕು, ಉತ್ತಮ ಸಾಂಸ್ಕೃತಿಕ ಪ್ರಕ್ರಿಯೆಗಳು ಜನರ ವ್ಯಕ್ತಿತ್ವದಲ್ಲಿ ಹಾಸುಹೊಕ್ಕಾಗಿ ಬೆರೆಯಬೇಕು, ಸುಖ–ಶಾಂತಿ–ಸಮೃದ್ಧತೆಗಳಿಗಾಗಿ ರಾಷ್ಟ್ರ ಸಜ್ಜಾಗಬೇಕು–ಇವು ಯಾವುದೇ ದಕ್ಷಿಣ ಅಮೇರಿಕಾ ದೇಶದ ಸನ್ನಿವೇಶಕ್ಕೆ ಅನ್ವಯವಾಗು ವಂತಿತ್ತು. ಹೊಸ ದಿಗಂತದತ್ತ ಕಣ್ಣುಹಾಯಿಸಿ ಯುವಕ ಚೆ ಅದನ್ನು ತನ್ನ ಜೀವನೋದ್ದೇಶವಾಗಿ ಮೈಗೂಡಿಸಿಕೊಂಡ.

೧೯೫೦ರ ದಶಕದ ಕ್ಯೂಬಾದ ಸ್ಥಿತಿಗಳನ್ನು ಪರಿಶೀಲಿಸಿದರೆ ಆಗ್ಗೆ ದಕ್ಷಿಣ ಅಮೆರಿಕಾದ ಇತರ ದೇಶಗಳ ಪರಿಸ್ಥಿತಿ ಹೇಗಿದ್ದಿತೆಂದು ತಿಳಿದು ಕೊಳ್ಳಬಹುದು: "ಸಣ್ಣ ರೈತರ ಪೈಕಿ ಶೇಕಡ ೮೫ರಷ್ಟು ಮಂದಿ ಬೇರೆಯವರ ಜಮೀನುಗಳಲ್ಲಿ ಕೃಷಿ ಮಾಡುತ್ತಿದ್ದವರು. ಅವರಿಗೆ ಯಾವಾಗ ಬೇಕಾದರೂ ಎತ್ತಂಗಡಿ ಆಗಬಹುದಿತ್ತು. ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳಲಾಗಿದ್ದ ಒಟ್ಟು ಜಮೀನಿನ ಸುಮಾರು ಅರ್ಧ ಭಾಗ ದಷ್ಟು ವಿದೇಶಿಯರ ಮಾಲಿಕತ್ವದಲ್ಲಿತ್ತು. ಓರಿಯಂಟ್ ಪ್ರಾಂತ್ಯದಲ್ಲಿ ಉತ್ತರದ ಸಮುದ್ರ ತೀರದಿಂದ ದಕ್ಷಿಣ ಸಮುದ್ರ ತೀರದವರೆಗಿನ ಇಡೀ

ಜಮೀನು ಅಮೇರಿಕಾದ ಯುನೈಟೆಡ್ ಫ್ರೂಟ್ ಕಂಪನಿ ಮತ್ತು ವೆಸ್ಟ್ ಇಂಡಿಯನ್ ಕಂಪನಿಗಳ ಅಧೀನವಲ್ಲಿತ್ತು. ಎರಡು ಲಕ್ಷ ರೈತಕುಟುಂಬಗಳಿಗೆ ತಮ್ಮದೆಂಬ ಜಮೀನೇ ಇಲ್ಲ; ಆ ಕುಟುಂಬಗಳ ಮಕ್ಕಳ ಹಸಿವಿಗೆ ಕೊನೆಯಿಲ್ಲ. ಇದಕ್ಕೆ ಪ್ರತಿಯಾಗಿ ಕೃಷಿ ಯೋಗ್ಯವಾದ ಮೂರು ಲಕ್ಷ ಎಕರೆಯಷ್ಟು ಜಮೀನನ್ನು ಪ್ರಬಲರು ಕೆಲವರು ತಮ್ಮ ಸುಬರ್ದಿನಲ್ಲಿಟ್ಟುಕೊಂಡಿದ್ದು ಅದನ್ನು ಉತ್ಪಾದನೆಗೆ ತೊಡಗಿಸಿಕೊಂಡೇ ಇಲ್ಲ. ಕ್ಯೂಬಾ ಪ್ರಮುಖವಾಗಿ ವ್ಯವಸಾಯವನ್ನು ಆಧರಿಸಿದ ದೇಶ. ಜನಸಂಖ್ಯೆಯ ಅಧಿಕ ಭಾಗ ಇರುವುದು ಹಳ್ಳಿಗಳಲ್ಲಿ. ನಗರಗಳು ಹಳ್ಳಿಗಳ ಭುಜದ ಮೇಲೆಯೇ ನಿಂತಿವೆ. ದೇಶದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕಾದವರು ರೈತಾಪಿ ಜನ. ಅವರೇ ದೇಶದ ಪ್ರಗತಿಗೆ ಮೂಲಾಧಾರ. ಆದ್ದರಿಂದ ಸದ್ಯದ ಪರಿಸ್ಥಿತಿಯನ್ನು ಮುಂದುವರಿಯಲು ಬಿಡಲಾಗದು. ಆಹಾರ, ದಿಮ್ಮಿ ಮತ್ತು ಬಟ್ಟೆ ಗಿರಣಿಗಳನ್ನು ಕೆಲವನ್ನು ಬಿಟ್ಟು ಕ್ಯೂಬಾದಲ್ಲಿ ಕಾರ್ಖಾನೆಗಳೇ ಇಲ್ಲ. ಮೂಲತಃ ಕಚ್ಚಾ ಪದಾರ್ಥಗಳ ಉತ್ಪಾದನೆಯೊಂದನ್ನೇ ಇಲ್ಲಿ ವೃದ್ಧಿಪಡಿಸಲಾಗಿದೆ. ಸಕ್ಕರೆ ರಫ್ತು ಮಾಡಿ ಕಲ್ಲುಸಕ್ಕರೆ, ಚರ್ಮ ರಫ್ತು ಮಾಡಿ ಪಾದರಕ್ಷೆ, ಮತ್ತು ಕಬ್ಬಿಣ ರಫ್ತು ಮಾಡಿ ನೇಗಿಲನ್ನು ಆಮದು ಮಾಡಿಕೊಳ್ಳುವ ದೇಶ ನಮ್ಮದು"—ಇದು ಕ್ಯಾಸ್ಟ್ರೋ ಅವರ ಹೇಳಿಕೆಯ ಒಂದು ಭಾಗ. ಇಂಥದೇ ಸನ್ನಿವೇಶ ದಕ್ಷಿಣ ಅಮೇರಿಕಾದ ಬಹುತೇಕ ರಾಷ್ಟ್ರಗಳಲ್ಲಿತ್ತು.

ಇದನ್ನು ಸರಿಪಡಿಸಲು ಜುಲೈ ೨೬ರ ಚಳುವಳಿಯು ಐದು ಕ್ರಾಂತಿಕಾರಿ ನಿಯಮಗಳನ್ನು ಜಾರಿಗೊಳಿಸುವ ಉದ್ದೇಶವನ್ನು ಹೊಂದಿತ್ತು: (ಅ) ರಾಜ್ಯಾಧಿಕಾರವನ್ನು ಜನರಿಗೆ ಹಿಂದಿರುಗಿಸಿ ೧೯೪೦ರ ಸಂವಿಧಾನಕ್ಕೆ ಮಾನ್ಯತೆ ನೀಡುವುದು; (ಆ) ಜಮೀನನ್ನು ಉಳುವವರಿಗೆ ಕೊಟ್ಟು ಅದು ಪರಭಾರೆಯಾಗುವುದನ್ನು ತಡೆಗಟ್ಟುವುದು ಮತ್ತು ಹಿಂದಿನ ಮಾಲಿಕರಿಗೆ ಹತ್ತು ವರ್ಷದಲ್ಲಿ ಜಮೀನಿನ ಕ್ರಯವನ್ನು ಪಾವತಿ ಮಾಡುವುದು. (ಇ) ಎಲ್ಲ ಉದ್ಯಮಗಳ

ಲಾಭಾಂಶದಲ್ಲಿ ಶೇಕಡ ಮೂವತ್ತರಷ್ಟನ್ನು ಅಲ್ಲಿಯ ಕಾರ್ಮಿಕರಿಗೆ ಮತ್ತು ನೌಕರರಿಗೆ ನೀಡುವುದು;(ಈ) ಕಬ್ಬಿನ ಬೆಳೆಗಾರರಿಗೆ ಸಕ್ಕರೆಯ ಉತ್ಪಾದನೆಯ ಶೇಕಡ ೫೫ ರಷ್ಟನ್ನು ವಿಲೇವಾರಿ ಮಾಡುವ ಹಕ್ಕು ನೀಡುವುದು; ಮತ್ತು (ಉ) ರಾಜ್ಯದ ಹಾಗೂ ರೈತ-ಕಾರ್ಮಿಕರ ಸಂಪತ್ತನ್ನು ದೋಚಿ ಶ್ರೀಮಂತರಾಗಿರುವವರಿಂದ ಆ ಸಂಪತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ಅವರಿಗೆ ಶಿಕ್ಷೆ ವಿಧಿಸಲು ವಿಶೇಷ ನ್ಯಾಯಾಲಯಗಳನ್ನು ರಚಿಸುವುದು.

ಒಟ್ಟಿನಲ್ಲಿ, ವಿದೇಶಿ ಬಂಡವಾಳದ ನೆರವಿಗೆ ನಿಂತು ಸರ್ವಾಧಿಕಾರವನ್ನು ಚಲಾಯಿಸುತ್ತಿದ್ದವರನ್ನು ಮೂಲೆಗುಂಪಾಗಿಸುವುದು ಅನಿವಾರ್ಯವೆನಿಸಿತ್ತು. ಅಂತಹ ದಮನಕಾರಿ ಸರ್ವಾಧಿಕಾರವನ್ನು ಕಿತ್ತುಹಾಕುವುದು ಜನರ ಹಕ್ಕೆಂದು ಪ್ರಾಚೀನ ಭಾರತದ ತತ್ವಜ್ಞಾನಿಯೊಬ್ಬ ಪ್ರತಿಪಾದಿಸಿರುವುದನ್ನು ಕ್ಯಾಸ್ಟ್ರೋ ತಮ್ಮ ಹೇಳಿಕೆಯಲ್ಲಿ ಉಲ್ಲೇಖಿಸಿದ್ದರು. ಆ ಸಂದರ್ಭದಲ್ಲಿ ಉದ್ಧರಿಸಲಾಗಿದ್ದ ಒಂದು ಪದ್ಯದ ಸಾರಾಂಶ ಇದು; "ಬಹುಮತವಿರುವ ಒಂದು ಅಭಿಪ್ರಾಯಕ್ಕೆ ರಾಜನ ಶಕ್ತಿಗಿಂತಲೂ ಹೆಚ್ಚಾದ ಬಲವಿದೆ. ಅನೇಕ ನೂಲುಗಳಿಂದ ಹೆಣೆಯಲಾದ ಹಗ್ಗವು ಒಂದು ಸಿಂಹವನ್ನು ಬೇಕಾದರೂ ಕಟ್ಟಿಹಾಕಲು ಸಮರ್ಥವಿರುತ್ತದೆ." ಜನರ ಪ್ರಾಕೃತಿಕ ಹಕ್ಕುಗಳಿಗೆ ಚ್ಯುತಿ ಬಂದಾಗ ಅದಕ್ಕೆ ಕಾರಣವಾದ ದುಂಡಾವರ್ತಿ ಸರ್ಕಾರವನ್ನು ಉತ್ಪಾದಿಸಬೇಕೆಂದು ಜಾನ್ ಲಾಕ್ ತನ್ನೊಂದು ಗ್ರಂಥದಲ್ಲಿ ಹೇಳಿದ್ದಾನೆ.

ದಕ್ಷಿಣ ಅಮೆರಿಕಾದ ರಾಷ್ಟ್ರಗಳಲ್ಲಿನ ವಿದ್ಯಮಾನವನ್ನು ಕಂಡು ವಿಶ್ಲೇಷಣೆಯಲ್ಲಿ ತೊಡಗಿದ್ದ ಚೆ ಗೆವಾರ ತನ್ನ ಮತಿ ಮತ್ತು ಆಯುಧಗಳನ್ನು ಮೊನಚು ಮಾಡಿಕೊಳ್ಳುವುದರಲ್ಲಿ ಉದ್ಯುಕ್ತನಾಗಿದ್ದ. ಇಡೀ ದಕ್ಷಿಣ ಅಮೆರಿಕಾದಲ್ಲಿ, ವಸಾಹತು ದರ್ಪದ ವಿರುದ್ಧವಾಗಿ ದನಿಯೆತ್ತಿ ಹೋರಾಟಗಳನ್ನು ನಡೆಸಿದ್ದ. ಜೋಸೆ ಮಾರ್ಟಿಯ ಹೆಸರು ಚಿರಪರಿಚಿತವಾಗಿತ್ತು. ಆ ಪರಂಪರೆಯನ್ನು ಮುಂದುವರಿಸಲು ಚೆ ಪಣ

ತೊಟ್ಟ. ಆ ಕಡೆ ಕ್ಯೂಬಾದಲ್ಲಿ ಕ್ಯಾಸ್ಟ್ರೋ ತಂಡದವರಿಗೂ ಮಾರ್ಟಿಯದೇ ಮೂಲ ಪ್ರೇರಣೆ. ಆಗ್ಗೆ ಅಮೆರಿಕಾ ಸಂಯುಕ್ತ ಸಂಸ್ಥಾನದ ಅಡಿಯಾಳಿನಂತೆ ವರ್ತಿಸುತ್ತಾ ಕ್ಯೂಬಾದಲ್ಲಿ ಅಧಿಕಾರದಲ್ಲಿದ್ದವನು ಬಟಿಸ್ಟಾ. ಅವನ ವಿರುದ್ಧ ನೇರ ಕ್ರಮದಲ್ಲಿ ತೊಡಗಿದವರಿಗೆ ಘೋರ ಹಿಂಸೆ ಕಾದಿರುತ್ತಿತ್ತು. ಎಷ್ಟೋ ವಿರೋಧಿ ನಾಯಕರನ್ನು ಹೀಗೆ ಹಿಂಸಿಸಿ, ಕೈಕಾಲುಗಳನ್ನು ಊನಗೊಳಿಸಿ, ಕಡೆಗೆ ಅವರನ್ನು ಬೀದಿಗೋ ಸಮುದ್ರಕ್ಕೋ ಎಸೆಯುತ್ತಿದ್ದುದು ಅಪರೂಪವೇನಲ್ಲ. ಆದರೂ ವಾಷಿಂಗ್‌ಟನ್ನಿನ ಶ್ವೇತಭವನದ ಪ್ರಕಾರ, ಅವನು 'ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಗಳ ವಿಶ್ವಾಸಾರ್ಹ ರಕ್ಷಕ' ಮತ್ತು ರಾಜಕೀಯ ಕ್ಷೇತ್ರದ 'ಅತ್ಯಂತ ಪ್ರಾಮಾಣಿಕ ವ್ಯಕ್ತಿ' ಹವಾನಾ ಬಂದರಿನ ಪ್ರವೇಶದ ಬಳಿ ಕ್ರಿಸ್ತನ ಬೃಹತ್ ಮೂರ್ತಿಯೊಂದನ್ನು ಕಡೆದು ನಿಲ್ಲಿಸಲು ಮುಂದಾಗಿದ್ದ ನೀತಿವಂತ ಈ ಫುಲ್‌ಗಾನ್ಸಿಯೋ ಬಟಿಸ್ಟಾ. ವಸಾಹತುಶಾಹಿಯನ್ನೆದುರಿಸಿ ಸೋಲಿಸಿದ್ದ ಏಷ್ಯಾ ಮತ್ತು ಆಫ್ರಿಕಾ ಖಂಡಗಳ ದೇಶಗಳೊಡನೆ ದಕ್ಷಿಣ ಅಮೆರಿಕಾದ ದೇಶಗಳು ಹೆಚ್ಚಿನ ಸಂಪರ್ಕ ಬೆಳೆಸಬಾರದೆಂದು ವಾಷಿಂಗ್‌ಟನ್ನಿನ ಪ್ರಭುಗಳು ಒಂದು ಬಿಗಿಯಾದ ಡಾಲರ್ ಪರದೆ ರಚಿಸಹೊರಟಿದ್ದರು. ಅದಕ್ಕೆ ಬಟಿಸ್ಟಾನಂತಹ ಜನ ವಿರೋಧಿ ನಾಯಕರ ಸಂಪೂರ್ಣ ಬೆಂಬಲವಿತ್ತು. ದಕ್ಷಿಣ ಅಮೆರಿಕಾ ಭೂ ಖಂಡದ ಮಾರುಕಟ್ಟೆಯನ್ನು ತನ್ನ ಕಪಿಮುಷ್ಟಿಯಲ್ಲಿರಿಸಿಕೊಳ್ಳಲು ಇದೊಂದು ದೊಡ್ಡ ಸಂಚಾಗಿತ್ತು. ಕಡಿಮೆ ಬೆಲೆಗೆ ಕಚ್ಚಾವಸ್ತುಗಳನ್ನು ಹೇರಲು ಇದರಿಂದ ಅನುಕೂಲವಾಗಿತ್ತು.

ಬಟಿಸ್ಟಾ ಅಧಿಕಾರದಲ್ಲಿದ್ದ ಏಳು ವರ್ಷಗಳಲ್ಲಿ ಇಪ್ಪತ್ತು ಸಾವಿರಕ್ಕೂ ಹೆಚ್ಚು ಕ್ಯೂಬಾದ ನಾಗರೀಕರ ಕೊಲೆ-ಚಿತ್ರಹಿಂಸೆಗಳಾಗಿದ್ದವು. ಈ ಕೊಲೆಗಳಲ್ಲಿ ಅಮೆರಿಕಾದ ಗೂಢಚಾರ ಸಂಸ್ಥೆಯ ಉನ್ನತ ಮಟ್ಟದ ಅಧಿಕಾರಗಳ ಕೈವಾಡವೂ ಸಾಕಷ್ಟಿತ್ತು. ಈ ರೀತಿಯ ಹಸ್ತಕ್ಷೇಪ ಪನಾಮಾ, ಪೆರು, ಬೊಲಿವಿಯ, ಅರ್ಜೆಂಟೈನಾ, ಬ್ರೆಜಿಲ್, ವೆನಿಜುವೆಲ,

ಇತ್ಯಾದಿ ರಾಷ್ಟ್ರಗಳಲ್ಲೂ ಇದ್ದುದನ್ನು ಚೆ ತನ್ನ ಪರ್ಯಟನೆಯ ದಿನಗಳಲ್ಲಿ ಕಂಡುಕೊಂಡಿದ್ದ. ಆದ್ದರಿಂದಲೇ ಆತನ ದೃಕ್ಪಥ ಯಾವಾಗಲೂ ಇಡೀ ದಕ್ಷಿಣ ಅಮೆರಿಕಾದ ಐಕ್ಯ ಹೋರಾಟದತ್ತಲೇ ಹೊರಳುತ್ತಿತ್ತು. ಅದಕ್ಕೆ ತನ್ನದೇ ಆದ ಮಾರ್ಗವೊಂದನ್ನು ಕಂಡುಕೊಳ್ಳಲು ಯುವಕ ಚೆ ಚಡಪಡಿಸುತ್ತಿದ್ದ. ಫಿಡೆಲ್ ಕ್ಯಾಸ್ಟ್ರೋ ಮತ್ತು ಆತನ ಗೆರಿಲ್ಲಾ ತಂಡದವರನ್ನು ಬಟಿಸ್ಟಾ ಒಮ್ಮೆ "ಶಕ್ಕರ ದಂಡು" ಎಂದು ದೂಷಿಸಿದಾಗ ಚೇಗೆ ಕೋಪ ಉಕ್ಕಿಬಂದದ್ದು ಸಹಜವಾಗಿದೆ. ಏಕೆಂದರೆ ದಕ್ಷಿಣ ಅಮೆರಿಕಾದ ವಿಮೋಚನೆಗೆ ಕ್ಯೂಬಾ ನಾಂದಿಯನ್ನು ಹಾಡುತ್ತಿದೆ ಯೆಂಬುದು ಚೇನ ಅಭಿಪ್ರಾಯವಾಗಿತ್ತು.

ಇದಕ್ಕೆ ಬಲವಾದ ಪುರಾವೆ ಇಲ್ಲದಿರಲಿಲ್ಲ. ೧೯೫೯ರ ಮುಂಚೆ ಇದ್ದ ಕ್ಯೂಬ ಮತ್ತು ಆ ವರ್ಷದ ಕ್ರಾಂತಿಕಾರಿ ಬೆಳವಣಿಗೆಯ ನಂತರದ ಕ್ಯೂಬ ಗುಣಾತ್ಮಕವಾಗಿ ತೀರಾ ಭಿನ್ನವಾದ ಚಿತ್ರಗಳನ್ನು ಮೂಡಿಸುತ್ತಿತ್ತು. ತನ್ನ ಕನಸಿನ ಸಮಾನತೆಯ ಸಮಾಜವು ಅಂಕುರಿಸುತ್ತಿದ್ದು ದನ್ನು ಚೆ ಕ್ಯೂಬಾದಲ್ಲಿ ಕಂಡ. ಕೊಲೆ, ಸುಲಿಗೆ, ದುಷ್ಟತನ, ಭ್ರಷ್ಟಾಚಾರ, ಪಾರತಂತ್ರ್ಯ, ಇತ್ಯಾದಿಗಳು ಬೇರುಬಿಟ್ಟಿದ್ದ ನೆಲದಲ್ಲಿ ಈಗ ಹೂವುಗಳು ಅರಳುತ್ತಿದ್ದವು, ತಂಗಾಳಿ ಬೀಸುತ್ತಿತ್ತು, ಮತ್ತು ಹೊಸ ಪ್ರಾತಃಕಾಲದ ಶುಭ್ರ ಕಿರಣಗಳು ಎಲ್ಲೆಡೆ ಪಸರಿಸುತ್ತಿದ್ದವು. ಅದು ದಕ್ಷಿಣ ಅಮೆರಿಕಾದ ಉದ್ದಗಲಕ್ಕೂ ವಿಸ್ತರಿಸಿ ನಿಲ್ಲಬೇಕೆಂಬುದು ಚೇಯ ಮಹದಾಕಾಂಕ್ಷೆಯಾಗಿತ್ತು.

ಈ ದೃಷ್ಟಿಯಿಂದ ಚೆ ಹೊಸ ಆಕಾಂಕ್ಷೆಗಳ, ಸ್ವಾತಂತ್ರ್ಯದ ಮತ್ತು ನವಜೀವನದ ಪ್ರತೀಕವಾದ. ತಾನು ಹುಟ್ಟಿರದ ದೇಶವೊಂದರಲ್ಲಿ ಪರಕೀಯತೆ ಎಂಬುದು ಲವಲೇಶವೂ ಇಲ್ಲದಷ್ಟು ಮಟ್ಟಿಗೆ ಆತ ವಿಶ್ವಪ್ರಜೆಯಾಗಿರಲು ಸಾಧ್ಯಮಾಡಿಕೊಂಡ ಅಕ್ಟೋಬರ್ ೧೯೬೭ರಲ್ಲಿ ಆತನನ್ನು ಪ್ರಶಂಸಿಸುತ್ತಾ ಫಿಡೆಲ್ ಕ್ಯಾಸ್ಟ್ರೋ ಹೇಳಿದ ಮಾತಿದು; "ಅತ್ಯಪಾಯಕಾರಿ ಕೆಲಸಗಳಿಗೆ ಸ್ವಯಂ ತನ್ನನ್ನು

ತಾನು ತೊಡಗಿಸಿಕೊಳ್ಳಲು ಯಾವಾಗಲೂ ಚೆ ಸಿದ್ಧನಿರುತ್ತಿದ್ದ. ಇದು ಆತನ ಬಗ್ಗೆ ನಮ್ಮ ಗೌರವ-ವಿಶ್ವಾಸಗಳು ಇಮ್ಮಡಿಯಾಗಲು ಕಾರಣ ವಾಗುತ್ತಿತ್ತು. ನಮ್ಮೊಡನೆ ಹೋರಾಟದ ರಂಗದಲ್ಲಿದ್ದ ಈತ, ಗಾಢ ಪ್ರಜ್ಞೆಯ ಆಗರವಾಗಿದ್ದ ಈತ, ನಮ್ಮ ದೇಶದಲ್ಲಿ ಹುಟ್ಟಿದವನಲ್ಲ. ನಮ್ಮ ಖಂಡದ ಇತರ ಭಾಗಗಳಲ್ಲಿಯೂ ಹೋರಾಟಕ್ಕಿಳಿಯಬೇಕೆಂಬ ಕನಸನ್ನು ಹೊತ್ತಿದ್ದ ಚೆ ಎಂದಿಗೂ ನಿಸ್ವಾರ್ಥಿ. ಆತನದು ಅಪ್ರತಿಮ ವ್ಯಕ್ತಿತ್ವ." ಆತನಲ್ಲಿ ಆಳವಾದ ಚಿಂತನೆ ಮತ್ತು ಕ್ರಿಯಾಶೀಲತೆ ಎರಡೂ ಸಾಂದ್ರವಾಗಿ ಬೆರೆತುಕೊಂಡಿದ್ದವು. ಏಷ್ಯಾ-ಆಫ್ರಿಕಾ-ದಕ್ಷಿಣ ಅಮೆರಿಕಾ ಗಳ ಕ್ರಾಂತಿಕಾರಿ ಯುವಕರ ಸಮ್ಮೇಳನಕ್ಕೆ ಒಮ್ಮೆ ಚೆ ಕಳಿಸಿದ್ದ ಸಂದೇಶ ಭಾಗಶಃ ಹೀಗಿದೆ; "ನಮ್ಮ ಪ್ರತಿಯೊಂದು ಕ್ರಿಯೆಯೂ ಸಾಮ್ರಾಜ್ಯಶಾಹಿಯ ವಿರುದ್ಧದ ಘೋಷಣೆ...ನಾವೆಲ್ಲೇ ಮಡಿಯ ಬೇಕಾಗಿ ಬಂದರೂ ಅದನ್ನು ಸ್ವಾಗತಿಸೋಣ.ಅದಕ್ಕೆ ಒಂದೇ ಷರತ್ತು: ನಮ್ಮ ಯುದ್ಧದ ಘೋಷಣೆಯು ಇನ್ನೊಂದು ಗ್ರಹಣಯೋಗ್ಯವಾದ ಕಿವಿಗೆ ಬಿದ್ದಿರಬೇಕು, ಮತ್ತು ನಮ್ಮ ಅಸ್ತ್ರಗಳನ್ನು ಹಿಡಿಯಲು ಇನ್ನೊಂದು ಕೈ ಮುಂದೆ ಬಂದಿರಬೇಕು." –ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ಚೇಗಿದ್ದ ಆಸಕ್ತಿ ಅಷ್ಟು ವಿಶಿಷ್ಟವಾಗಿದ್ದಿತು. ಅಥವಾ, ಜನರ ಸ್ವಾತಂತ್ರ್ಯ ಮತ್ತು ಜನಪರ ಹೊರಾಟಗಳಲ್ಲಿ ಆತನಿ ಗಿದ್ದ ನಿಷ್ಠೆ ಅಷ್ಟು ಅಪಾರವಾದದ್ದೆಂದು ಬೇಕಾದರೂ ಹೇಳಬಹುದು. ಇದನ್ನೇ ಒತ್ತಿಹೇಳುತ್ತಾ ಫಿಡೆಲ್ ಕ್ಯಾಸ್ಟ್ರೋ ೧೯೬೮ರಲ್ಲಿ ನುಡಿದಿದ್ದರು: "ದಕ್ಷಿಣ ಅಮೆರಿಕಾದ ಜನಸಂಖ್ಯೆ ಮೂವತ್ತುಕೋಟಿ. ಇಪ್ಪತ್ತೈದು ವರ್ಷಗಳಲ್ಲಿ ಅದು ಅರವತ್ತುಕೋಟಿಯಾಗಬಹುದು. ಅದರಲ್ಲಿ ಅತಿ ಹೆಚ್ಚಿನ ಸಂಖ್ಯೆಯವರು ಕಡು ಬಡವರು. ಅವರಿಗೂ ಒಳ್ಳೆಯ ಜೀವನ ಸಂಸ್ಕೃತಿ, ಮತ್ತು ನಾಗರೀಕತೆಗಳ ಹಕ್ಕಿದೆ. ಇವರ ಸಮಸ್ಯೆಗೆ ನಿಜ ವಾದ ಪರಿಹಾರವೇನು ? ಅವರ ಜೀವನಕ್ಕೂ ಉಸಿರು ತುಂಬುವಂತಹ ಕ್ರಿಯೆ ಯಾವುದು? ಬೊಲಿವಿಯಾದಲ್ಲಿ ಚೆ ಮಾಡಿದ್ದು ಧೈರ್ಯದ

ಕೆಲಸ. ಅದನ್ನು ಟೀಕಿಸುವುದಕ್ಕಿಂತ ಮೆಚ್ಚಿಕೊಳ್ಳಬೇಕಾದ್ದು ಹೆಚ್ಚಿದೆ. ಆತನೊಡನಿದ್ದ ಕೆಲವೇ ಮಂದಿಗೆ ಒಂದು ಇಡೀ ಖಂಡದ ಬಿಡುಗಡೆಗಾಗಿ ಚೆ ಹೋರಾಡಿದ. ಅದೊಂದು ಉನ್ನತ ಆದರ್ಶದ ಆಶಯ. ಧೃತಿಗೆಡದ ಮನಸ್ಸು, ಧೈರ್ಯ ಮತ್ತು ಮಾನವನ ಉನ್ನತ ವ್ಯಕ್ತಿತ್ವ ಏನು ಸಾಧಿಸ ಬಹುದೆಂಬುದಕ್ಕೆ ಚೆ ಒಂದು ನಿದರ್ಶನ."

ಇಂತಹ ವ್ಯಾಪಕ ಹೋರಾಟವು ಸುಲಭ ಸಾಧ್ಯವಲ್ಲ. ಅದರಲ್ಲಿ ಅಂಕು-ಡೊಂಕುಗಳಿರುತ್ತವೆ, ಏರಿಳಿತಗಳಿರುತ್ತವೆ. ಆದ್ದರಿಂದ ಹಾದಿ ದುರ್ಗಮ. ಹೋರಾಟವೇ ಅಸಾಧ್ಯವೆಂಬಷ್ಟು ಕಠಿಣವಾದ ಸನ್ನಿವೇಶ ಸಹ ಇರಬಹುದು. ಹಾಗೆಂದು ಸುಮ್ಮನಿದ್ದರೆ ಬಿಡುಗಡೆ ಎಲ್ಲಿಂದ ಬರುತ್ತದೆ, ಸ್ವಾತಂತ್ರ್ಯ ಹೇಗೆ ದಕ್ಕುತ್ತದೆ? ಚೆ ಗೆವಾರ ಅದಮ್ಯ ಚೇತನದ ಸೆಲೆಯಾಗಿರುವುದು ಇಂತಹ ದುರ್ಗಮದ ಹಾದಿಯಲ್ಲಿ ಅಚಲ ವಾದ ನಿಷ್ಠೆಯಿಂದ ಹೋರಾಟಕ್ಕೆ ಇಳಿದಿದ್ದರಿಂದ ಮತ್ತು ಬಲಿದಾನ ಮಾಡಲು ಅಂಜದೆ ಕೆಚ್ಚೆದೆಯಿಂದ ಹೆಜ್ಜೆ ಹಾಕಿದ್ದರಿಂದ. ವಿಶ್ವದ ಯುವಜನಾಂಗ ಈತನಿಂದ ಪಡೆಯಬಹುದಾದ ಸಾಮಾಜಿಕ ಪ್ರಜ್ಞೆ ಮತ್ತು ಸ್ಫೂರ್ತಿಗೆ ಎಣೆಯಿಲ್ಲ.

ಅಧ್ಯಾಯ ೨

ಜೀವನ

ಆರ್ನೆಸ್ಟೋ ಗೆವಾರ ಲಿಂಚ್ ಹುಟ್ಟಿದ್ದು ಅರ್ಜೆಂಟೈನಾದ ರೊಸಾರಿಯೋದಲ್ಲಿ, ೧೯೨೮ರ ಜೂನ್ ೧೪ ರಂದು. ಡಾನ್ ಅರ್ನೆಸ್ಟೋ ಗೆವಾರ ಲಿಂಚ್ ಆತನ ತಂದೆ, ಸೀಲಿಯಾ ದ ಲ ಸೆರ್ನಾ ಆತನ ತಾಯಿ. ಮಗುವನ್ನು ಮೊದಲಿನಿಂದಲೂ 'ಟೆ ಟೆ' ಎಂದು ಕರೆಯುವುದು ರೂಢಿಯಾಗಿತ್ತು. ವಿಶ್ವಕ್ಕೆ ಆತ ಪರಿಚಯವಾಗಿರುವುದು "ಚೆ ಗೆವಾರ" ಎಂದು. ತನ್ನ ಜೀವನದ ಪ್ರಮುಖ ಹಾಗೂ ಮಹತ್ವದ ಘಟನೆಗಳನ್ನೆಲ್ಲಾ ತನ್ನ ಹೆಸರಿಗೆ ಸೇರಿಕೊಂಡ 'ಚೆ' ಪ್ರತಿನಿಧಿಸುತ್ತದೆಂದು ಗೆವಾರ ಆಗಾಗ್ಗೆ ಹೇಳುತ್ತಿದ್ದದುಂಟು. ಡಾನ್ ಅರ್ನೆಸ್ಟೋ ಕುಟುಂಬದ ಹಿಂದಿನ ತಲೆಮಾರಿನವರು ಯಾವಾಗಲೋ ಸ್ಪೈಯಿನ್ ಮತ್ತು ಐರ್ಲೆಂಡ್‌ಗಳಿಂದ ಅರ್ಜೆಂಟೈನಾಕ್ಕೆ ತೆರಳಿದ್ದವರು. ಅರ್ಜೆಂಟೈನಾ ಮತ್ತು ಪರಾಗ್ವೆ ದೇಶಗಳ ಗಡಿಯ ಬಳಿ ಮಿಸಿಯೋನ್ಸ್ ಎಂಬಲ್ಲಿ ಟೀ ತೋಟವೊಂದನ್ನು ಹೊಂದಿದ್ದ ಡಾನ್ ಅರ್ನೆಸ್ಟೋ ನಂತರದ ವರ್ಷಗಳಲ್ಲಿ ಕಾರ್ಡೋಬಾ, ಬೋನಸ್ಸೈರಿಸ್ ಮುಂತಾದೆಡೆಗಳಲ್ಲಿ ಕಟ್ಟಡ ನಿರ್ಮಾಣ ಮಾಡಿಸುವ ಕೆಲಸಕ್ಕೆ ಕೈ ಹಾಕಿ ಕೈ ಸುಟ್ಟುಕೊಂಡಿದ್ದ. ಬೋನಸ್ಸೈರಿಸ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ವಾಸ್ತುಶಿಲ್ಪ ಅಧ್ಯಯನ ಮಾಡಿದ್ದುದು ಈ ವ್ಯವಹಾರದಲ್ಲಿ ತೊಡಗಲು ಕಾರಣವಿದ್ದಿರಬೇಕು. ಸರ್ವಾಧಿಕಾರದ ವಿರೋಧವಾಗಿ ಡಾನ್ ಅರ್ನೆಸ್ಟೋ

ಹಿಂದಿನ ಪೀಳಿಗೆಯವರು ಅರ್ಜೆಂಟೈನಾದಲ್ಲಿ ಹೋರಾಟ ನಡೆಸಿ ಒಂದು ಪರಂಪರೆ ಸ್ಥಾಪಿಸಿದ್ದರು. ೧೯೩೦ರ ದಶಕದಲ್ಲಿ ಹಿಟ್ಲರನ ಯೆಹೂದಿ ವಿರೋಧದ ಭಾವನೆಯನ್ನು ಖಂಡಿಸುವ ಚಳುವಳಿಯಲ್ಲಿ ಸ್ವತಃ ಡಾನ್ ಅರ್ನೆಸ್ಟೋ ದಂಪತಿಗಳು ಭಾಗವಹಿಸಿದ್ದರು. ರೊಸಾರಿಯೋದಲ್ಲಿ ಕಾರ್ಖಾನೆಯೊಂದನ್ನು ಆರಂಭಿಸಬೇಕೆಂದಿದ್ದ ಕಾಲಕ್ಕೆ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ಮಾರುಕಟ್ಟೆಯು ಕುಸಿದು ಬಿದ್ದಿದ್ದರಿಂದ ಡಾನ್ ಅರ್ನೆಸ್ಟೋ ಮತ್ತು ಮಿಸಿಯಾನ್ಸ್ ಟೀ ತೋಟಕ್ಕೆ ಹಿಂದಿರುಗಬೇಕಾಯಿತು.

ಆಗಿನ್ನೂ ಮಗುವಿಗೆ ಎರಡು ವರ್ಷವೂ ತುಂಬಿರಲಿಲ್ಲ. ತಾಯಿ ಒಳ್ಳೆಯ ಈಜುಗಾರ್ತಿ. ಮಗುವನ್ನು ಕರೆದುಕೊಂಡು ದಂಪತಿಗಳು ಈಜುಕೊಳಕ್ಕೆ ಹೋಗಿದ್ದರು. ಶೀತಗಾಳಿಯ ಪರಿಣಾಮವಾಗಿ ಹಠಾತ್ತನೆ ಕೆಮ್ಮು ಮತ್ತು ಉಬ್ಬಸ ಪ್ರಾರಂಭವಾಯಿತು. ವೈದ್ಯರು ಅದನ್ನು ಗೂರಲು ರೋಗದ ಚಿಹ್ನೆಯೆಂದು ತಿಳಿಸಿದರು. ಟೆ ಟೆ ಬೆಳೆದು ಚೆ ಆದಾಗಲೂ ಈ ಖಾಯಿಲೆ ಅತನನ್ನು ಬಿಡಲಿಲ್ಲ. ಬೆಟ್ಟಗುಡ್ಡಗಳಲ್ಲಿ ಅತ್ಯಂತ ಘೋರ ಕದನಗಳಲ್ಲಿ ಭಾಗಿಯಾಗಿರುತ್ತಿದ್ದಾಗಲೂ ಈ ಖಾಯಿಲೆ ಆತನ ಬೆಂಬತ್ತಿತ್ತು. ಎಷ್ಟೋ ಬಾರಿ ಇದರಿಂದಾಗಿ ಭಾರವನ್ನು ಹೊರಲಾರದೆ ಸೈನಿಕ ಚೆ ತನ್ನನ್ನು ತಾನು ಶಪಿಸಿಕೊಳ್ಳುತ್ತಿದ್ದ, ಆದರೆ ಕದನದಿಂದ ಎಂದೂ ಹಿಂದೆಗೆಯಲಿಲ್ಲ.

ಮಗುವಿನ ಆರೋಗ್ಯವು ಕ್ಷೀಣಿಸದಿರಲೆಂದು ಬೇರೆ ಹವೆಯಿದ್ದ ಕಾರ್ಡೋಬಾಕ್ಕೆ ಹೋಗಲು ಡಾನ್ ಅರ್ನೆಸ್ಟೋ ದಂಪತಿಗಳು ತೀರ್ಮಾನಿಸಿದರು. ಅದು ಪರ್ವತ ಪ್ರದೇಶ. ಹೆಚ್ಚಿನ ಸ್ವಚ್ಛತೆಯ ಗಾಳಿ ಅಲ್ಲಿ ಲಭ್ಯವಿತ್ತು. ನಗರದ ಬಳಿ ಆಲ್ಟಾ ಗ್ರೇಸಿಯಾದಲ್ಲಿ ಒಂದು ಮನೆಯನ್ನು ಕೊಂಡು ಡಾನ್ ಮತ್ತೆ ಮನೆ ಕಟ್ಟಿಕೊಡುವ ವ್ಯವಹಾರಕ್ಕಿಳಿದ. ತಾಯಿಗೆ ಟೆ ಟೆಯ ಆರೈಕೆಯೇ ಕೆಲಸವಾಗಿತ್ತು. ಏಕೆಂದರೆ ಮಗುವಿನ ಆರೋಗ್ಯ ಅಷ್ಟು ಹದಗೆಟ್ಟಿತ್ತು. ಪ್ರತಿದಿನವೂ ರಾತ್ರಿಯ

ವೇಳೆಯಲ್ಲಿ ಮಗುವಿಗೆ ಉಬ್ಬಸ ಬಂದು ಎಲ್ಲರೂ ಕಂಗಾಲಾಗುತ್ತಿದ್ದರು. ಬಹುಶಃ ಬೆಳಗಿನ ಜಾವದ ವೇಳೆಗೆ ಮಾತ್ರವೇ ಮಗುವಿಗೆ ನಿದ್ದೆ ಹತ್ತುತ್ತಿದ್ದುದು.

ಟೆ ಟೆಯ ನಂತರ ಕುಟುಂಬದಲ್ಲಿ ಇನ್ನೂ ನಾಲ್ಕುಮಕ್ಕಳು ಜನಿಸಿದರು. ಎಲ್ಲರೂ ಉನ್ನತ ಶಿಕ್ಷಣ ಪಡೆದು ಮೇಲೆ ಬಂದರು. ಟೆಟೆ ಮಾತ್ರ ಶಾಲೆಗೆ ಸೇರುವುದೂ ದುಸ್ತರವಾಗಿತ್ತು. ಜೊತೆಗೆ ಹುಡುಗನಾಗಿದ್ದಾಗಿನಿಂದಲೂ ಉಡಿಗೆ–ತೊಡಿಗೆಗಳಿಗೆ ಲಕ್ಷ್ಯ ಕೊಡದಿದ್ದಂತಹವನು ಬೇರೆ. ಸುಕ್ಕುಸುಕ್ಕಾದ ಅಂಗಿ, ವಕ್ರ ನಡಿಗೆ, ಹರಿದ ಪಾದರಕ್ಷೆ ಮತ್ತು ಕೆದರಿದ ಕೂದಲು,- ಇವು ಅವನನ್ನು ಬೇರೆ ಹುಡುಗರಿಂದ ತೀರಾ ಭಿನ್ನವಾಗಿಸಿದ್ದುವು. ಅಂತೂ ಅವನಿಗೆ ಮೊದಲ ವಿದ್ಯಾಭ್ಯಾಸವೆಲ್ಲಾ ಮನೆಯಲ್ಲಿ ತಾಯಿಯಿಂದಲೇ ದೊರಕಬೇಕಾಯಿತು. ಇನ್ನೂ ನಾಲ್ಕು ವರ್ಷದವನಿದ್ದಾಗಲೇ ಓದುವುದನ್ನು ಕಲಿತಿದ್ದ ಟೆ ಟೆ ಪುಸ್ತಕಗಳನ್ನು ತನ್ನ ಎಡೆಬಿಡದ ಸ್ನೇಹಿತರನ್ನಾಗಿಸಿಕೊಂಡ. ಬಾಲ್ಯದಲ್ಲಿ ಮಾತ್ರವೇ ಏಕೆ, ತನ್ನ ಜೀವನದುದ್ದಕ್ಕೂ ಪುಸ್ತಕಗಳೆಂದರೆ ಸಹಚರರು ಎನ್ನುವಂತೆ ಅವನ್ನು ಹತ್ತಿರಕ್ಕೆ ಬರಮಾಡಿಕೊಂಡ. ಉಬ್ಬಸದಂತೆ ಪುಸ್ತಕಗಳೂ ಅವನಿಗೆ ಇಡೀ ಜೀವನಪರ್ಯಂತ ಜೊತೆಗಾರನ ಸ್ಥಾನವನ್ನು ತುಂಬಿದುವು.

ಸಂಪ್ರದಾಯದಂತೆ ಶಾಲೆಗೆ ಹೋಗಿ ಕಲಿಯದಿದ್ದರೂ ಟೆ ಟೆಯ ಪ್ರತಿಭೆ ಅರಳಲು ಬಹುಕಾಲ ಹಿಡಿಯಲಿಲ್ಲ. ಅಲ್ಟಾ ಗ್ರೇಸಿಯಾ ಶಾಲೆಯಲ್ಲಿ ದಾಖಲಾಗಿ ಅನಾರೋಗ್ಯದಿಂದ ಬಳಲಿದಾಗೆಲ್ಲಾ ಶಾಲೆಗೆ ಹೋಗದೆ ಮನೆಯಲ್ಲೇ ಉಳಿಯುವುದು ರೂಢಿಯಾಯಿತು. ತನ್ನ ಹದಿಮೂರನೆ ವಯಸ್ಸಿನಲ್ಲಿ ಕಾರ್ಡೋಬಾದ ಡೀನ್ ಫ್ಯೂನ್ಸ್ ಸ್ಟೇಟ್ ಕಾಲೇಜನ್ನು ಸೇರಿದಾಗ ತಾಯಿ ಪ್ರತಿದಿನ ಒಂದು ಹಳೆಯ ಕಾರಿನಲ್ಲಿ ಅವನನ್ನು ಕಾಲೇಜಿಗೆ ಬಿಟ್ಟು ಬರುತ್ತಿದ್ದಳು. ಎಲ್ಲೂ ಎಡವದೆ ನಾಲ್ಕು ವರ್ಷಗಳಲ್ಲಿ ಆ ಕಾಲೇಜಿನಲ್ಲಿ ಅಭ್ಯಾಸ ಮುಗಿಸುವ

ದಕ್ಕೂ ಅವನ ಕುಟುಂಬ ೧೯೪೭ರಲ್ಲಿ ಬೋನಸ್ಐರಿಸ್‌ಗೆ ಸ್ಥಳಾಂತರಗೊಳ್ಳುವುದಕ್ಕೂ ಸರಿಯಾಯಿತು. ಅರ್ನೆಸ್ಟೋ ಗೆವಾರ ವಿಶ್ವವಿದ್ಯಾಲಯದ ವೈದ್ಯಕೀಯ ವಿಭಾಗದಲ್ಲಿ ವಿದ್ಯಾರ್ಥಿಯಾಗಿ ಸೇರಿಕೊಂಡ. ಅದು ೧೯೪೮ರಲ್ಲಿ ಆದದ್ದು.

ಅಭ್ಯಾಸದ ಜೊತೆಗೆ ಹಲವು ಹವ್ಯಾಸಗಳನ್ನು ಅರ್ನೆಸ್ಟೋ ಈ ಅವಧಿಯಲ್ಲಿ ಬೆಳೆಸಿಕೊಂಡ. ಅನಾರೋಗ್ಯದಿಂದ ಪೀಡಿತನಾಗಿದ್ದರೂ ಕಾಲ್ಚೆಂಡು, ಇತ್ಯಾದಿ ಆಟಗಳಲ್ಲಿ ಪಾಲ್ಗೊಳ್ಳುವುದನ್ನು ಕಾರ್ಡೋಬಾದ ಶಾಲೆಯಲ್ಲೇ ಆರಂಭಿಸಿದ್ದ. ಇತರರೊಡನೆ ಲವಲವಿಕೆಯಿಂದ ಸಂಭಾಷಿಸುವುದು, ಬೇರೆ ಬೇರೆ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗುವುದು, ಆಗಾಗ್ಗೆ ತುಂಟತನ ಮಾಡುವುದು- ಹೀಗೆ ಯಾವುದಕ್ಕೂ ಕಡಿಮೆ ಮಾಡಿರದ ಈ ಹುಡುಗ ಫೆಬ್ರುವರಿ ೧೯೫೦ರಲ್ಲಿ ಒಂದು ದ್ವಿಚಕ್ರ ವಾಹನವನ್ನೇರಿ ಅರ್ಜೆಂಟೈನಾದ ಹನ್ನೆರಡು ಪ್ರಾಂತ್ಯಗಳಲ್ಲಿ ನಾಲ್ಕು ಸಾವಿರ ಕಿಲೋಮೀಟರ್ ದೂರವನ್ನು ಕ್ರಮಿಸಿದ. ಮೈಕ್ರಾನ್ ಮೊಪೆಡ್ ಸಂಸ್ಥೆ ಇದಕ್ಕಾಗಿ ಅವನಿಗೆ ಒಂದು ವಾಹನವನ್ನೂ ದಾರಿಯ ವೆಚ್ಚಕ್ಕೆ ಸ್ವಲ್ಪ ಹಣವನ್ನು ಕೊಟ್ಟಿತ್ತು. ನಂತರ ಆತನ ಪ್ರವಾಸವನ್ನು ತನ್ನ ವಾಹನದ ಪ್ರಚಾರಕ್ಕಾಗಿ ಬಳಸಿಕೊಂಡಿತ್ತು ಈ ಕಂಪೆನಿ. ಆ ಸಂಬಂಧದಲ್ಲೇ ಇರಬೇಕು ಅರ್ನೆಸ್ಟೋ ಗೆವಾರ ಮೊಟ್ಟಮೊದಲ ಬಾರಿಗೆ ವೃತ್ತಪತ್ರಿಕೆಗಳಲ್ಲಿ ಕಾಣಸಿಕೊಂಡಿದ್ದು. ನಂತರದ ವರ್ಷಗಳಲ್ಲಿ ಪ್ರಪಂಚದ ಎಲ್ಲ ದೇಶಗಳಲ್ಲೂ ಆತ ಸುದ್ದಿಯ ವಿಷಯವಾದದ್ದು ಬೇರೆ ವಿಚಾರ.

ವಿದ್ಯಾರ್ಥಿಯಾಗಿದ್ದಾಗ ಆತ ಕೈಗೊಂಡ ಇನ್ನೊಂದು ಸ್ವಾರಸ್ಯಕರ ಪ್ರಯಾಣವೆಂದರೆ ಸರಕು ಸಾಗಣೆಗೆ ಮೀಸಲಾಗಿದ್ದ ಒಂದು ಹಡಗಿನಲ್ಲಿ ಕೆಲಸಕ್ಕೆ ಸೇರಿ ಟ್ರಿನಿಡಾಡ್, ಬ್ರಿಟಿಷ್ ಗಯಾನಾ, ಇತ್ಯಾದಿ ದ್ವೀಪಗಳನ್ನು ನೋಡಿಬಂದದ್ದು. ಜೊತೆಗೆ ಗ್ರಾನಡೋ ಎಂಬ ಸ್ನೇಹಿತನೊಡನೆ ಇಡೀ ಅರ್ಜೆಂಟೈನಾ ಸುತ್ತಿಬಂದ. ಇನ್ನೂ ಹನ್ನೊಂದು

ವರ್ಷದವನಿದ್ದಾಗ ಒಮ್ಮೆ ಇವನು ಮನೆಯಿಂದ ಕಾಣೆಯಾಗಿದ್ದ. ಅವನಿಗಿಂತಲೂ ಮೂರು ವರ್ಷ ಕಿರಿಯವನಾಗಿದ್ದ ರಾಬರ್ಟೋನನ್ನು ಕರೆದುಕೊಂಡು ಒಂದು ಲಾರಿಯ ಹಿಂಭಾಗದಲ್ಲಿ ಕದ್ದು ಕುಳಿತು ಎಂಟು ನೂರು ಕಿಲೋಮೀಟರ್ ದೂರದ ಒಂದು ಊರಿಗೆ ಕಾರ್ಡೋಬಾದಿಂದ ಪರಾರಿಯಾಗಿದ್ದ. ಹೀಗೆ ಸಾಹಸಕಾರ್ಯಗಳಲ್ಲಿ ತೊಡಗುವುದು ಅವನ ಜೀವನದಲ್ಲಿ ಸಹಜವಾಗಿ ಮೂಡಿ ಬಂದಿತ್ತು.

ಚಿಕ್ಕವನಿದ್ದಾಗ ಮನೆಯಲ್ಲಿದ್ದ ದೊಡ್ಡ ಪುಸ್ತಕ ಭಂಡಾರ ಅವನಲ್ಲಿ ಓದುವ ಹುಚ್ಚನ್ನು ವಿಶಾಲವಾಗಿ ಹಬ್ಬಿಸಿತ್ತು. ಅನೇಕ ಭಾಷೆಗಳ ಪುಸ್ತಕಗಳು ಇಲ್ಲಿದ್ದವು. ತಾಯಿ ಇವನಿಗೆ ಫ್ರೆಂಚ್ ಭಾಷೆಯನ್ನು ಕಲಿಸಿದ್ದಳು ಮತ್ತು ಸ್ಪ್ಯಾನಿಷ್ ಮನೆಯ ಮಾತಾಗಿತ್ತು. ಇತಿಹಾಸ, ತತ್ತ್ವಶಾಸ್ತ್ರ, ಮನಃಶಾಸ್ತ್ರ, ಕಲೆ, ಸಾಹಿತ್ಯ, ಇತ್ಯಾದಿ ಎಲ್ಲದರಲ್ಲೂ ಆಸಕ್ತಿ ಕೆರಳಿಸಿಕೊಂಡಿದ್ದ ಅರ್ನೆಸ್ಟೋ ತನ್ನ ಪ್ರೈಮರಿಯಲ್ಲಿ ಒಂದಿಲ್ಲೊಂದು ಪುಸ್ತಕವನ್ನು ತುರುಕಿಕೊಂಡೇ ತಿರುಗಾಡಲು ಹೋಗುತ್ತಿದ್ದ. ಸಾಲ್ಗರಿ, ಜೂಲ್ಸ್ ವರ್ನ್, ಡ್ಯೂಮಾ, ಹ್ಯೂಗೋ, ಜಾಕ್ ಲಂಡನ್ ಇತ್ಯಾದಿ ಲೇಖಕರು ಅರ್ನೆಸ್ಟೋಗೆ ಮೆಚ್ಚಿನ ಸಾಹಿತಿಗಳಾಗಿದ್ದರು. ಆಮೇಲೆ ಟಾಲ್‌ಸ್ಟಾಯ್, ದಸ್ತೋಯೆವ್ಸ್ಕಿ, ಗಾರ್ಕಿ ಇತ್ಯಾದಿ ರಷ್ಯನ್ ಲೇಖಕರ ಪರಿಚಯ ಮಾಡಿಕೊಂಡ. ದಕ್ಷಿಣ ಅಮೆರಿಕಾದ ಸಾಹಿತಿಗಳನ್ನಂತೂ ಆಮೂಲಾಗ್ರವಾಗಿ ಓದಿಕೊಂಡಿದ್ದ. ವಿಶೇಷವಾಗಿ ಅವನ ವ್ಯಕ್ತಿತ್ವ ರೂಪಿಸಿದ ಇವರ ಪೈಕಿ ಸೈರೋ ಅಲೆಗ್ರಿಯಾ (ಪೆರುವಿನವನು) ಜೋರ್ಗ ಇಕಾಜ (ಈಕ್ವೆಡಾರ್‌ನವನು), ಮತ್ತು ಜೋಸ್ ಯುಸ್ಟಾಸಿಯೋ ರಿವ್ಯೇರಾ (ಕೊಲಂಬಿಯಾದವನು) ಸೇರಿದ್ದರು. ಇವರೆಲ್ಲಾ ಪ್ರಮುಖವಾಗಿ ನೀಡಿದ್ದ ಚಿತ್ರಣ ಆಯಾ ದೇಶಗಳಲ್ಲಿನ ಭಾರಿ ಭೂಮಾಲಿಕರು ಮತ್ತು ತೋಟಗಳ ಯಜಮಾನರು ಕೆಲಸಗಾರರನ್ನು ಉಗ್ರವಾಗಿ ದಂಡಿಸುತ್ತಿದ್ದ ಬಗೆಯನ್ನು ಕುರಿತಾದವು. ಅಂತೆಯೇ ಸ್ಥಳೀಯ ಇಂಡಿಯನ್ನರು ಎಂತೆಂತಹ ಉಪದ್ರವಗಳನ್ನು

ಅನುಭವಿಸಬೇಕಾಗಿ ಬಂದಿತ್ತೆಂಬುದನ್ನೂ ಈ ಸಾಹಿತಿಗಳು ವಿಸ್ತಾರವಾಗಿ ಬಣ್ಣಿಸಿದ್ದರು. ಇದು ಅವನ ಮನಃಪಟಲದಲ್ಲಿ ಅಚ್ಚಳಿಯದೆ ನಿಂತಿತು.

ಇದರೊಟ್ಟಿಗೆ ಅವನು ಕಾವ್ಯಪ್ರೇಮಿಯಾಗಿ ವಿಕಸಿಸಿದ. ಬೋದ-ಲೇರ್, ಲೋರ್ಕಾ, ಮಚಾಡೋ, ಇವರ ಕೃತಿಗಳೆಲ್ಲಾ ಅವನಿಗೆ ಸಂಪೂರ್ಣವಾಗಿ ಗೊತ್ತಿತ್ತು. ನೆರುದಾ ಅವರ ಕಾವ್ಯವಂತೂ ಅವನಿಗೆ ಕರತಲಾಮಲಕವಾಗಿತ್ತು. ದಕ್ಷಿಣ ಅಮೆರಿಕಾದ ಸೊಗಡನ್ನು ಕಂಡು ಕೊಂಡದ್ದು ಈ ಕವಿಯ ಮೂಲಕ ಎಂದರೂ ತಪ್ಪಾಗುವುದಿಲ್ಲ. "ಎಂದಿಗೂ ಕವಿಯಾಗದ ಒಬ್ಬ ಬಂಡಾಯಗಾರ" ಎಂದು ತನ್ನನ್ನು ತಾನು ಕರೆದುಕೊಂಡ ಅರ್ನೆಸ್ಟೋ ಸ್ವತಃ ಕವನ ರಚಿಸಲು ಯತ್ನಿಸಿ ಕೈಬಿಟ್ಟ. ಕಾವ್ಯಲೋಕದಲ್ಲಿ ಅವನೆಷ್ಟು ವಿಹರಿಸುತ್ತಿದ್ದನೆಂದರೆ ಕೊನೆಯ ಬಾರಿಗೆ ಕ್ಯೂಬಾ ಬಿಟ್ಟು ತೆರಳುವಾಗ ಸ್ನೇಹಿತನೊಬ್ಬನಿಂದ ಒಂದು ಕವನ ಸಂಕಲನವನ್ನು ಎರವಲು ಪಡೆದು ನೆರುದಾ ಅವರ "ವಿದಾಯ" ಎಂಬ ಕವನವನ್ನು ಪ್ರತಿ ಮಾಡಿಕೊಂಡನೆಂದು ಹೇಳ ಲಾಗಿದೆ.

ಸಾಹಿತ್ಯದಲ್ಲಿ ಆಸಕ್ತಿ ಇದ್ದಂತೆ. ಆತನಿಗೆ ವರ್ಣಚಿತ್ರಗಳ ಬಗೆಗೂ ಸ್ವಲ್ಪ ತಿಳುವಳಿಕೆ ಇತ್ತು. ವೈಯಕ್ತಿಕ ಭಾವನೆಗಳ ಸಂಕುಚಿತ ಅಭಿವ್ಯಕ್ತಿಗಿಂತಲೂ ಅವನಿಗೆ ರುಚಿಸುತ್ತಿದ್ದುದು ಸಮಷ್ಟಿಯ ಚಲನೆಗೆ ಅನುವಾಗುವಂತಹ ಪರಿಣಾಮಕಾರಿ ಚಿತ್ರಣಗಳು. ಆದರೆ ಈ ಅಭಿರುಚಿ ಯನ್ನು ಅಷ್ಟಾಗಿ ಬೆಳೆಸಿಕೊಳ್ಳಲು ಆತನಿಗೆ ಅವಕಾಶ ದೊರೆಯಲಿಲ್ಲ ವೆಂದು ತೋರುತ್ತದೆ. ಸಾಹಿತ್ಯದ ಬಗೆಗಾದರೆ ಹಾಗಲ್ಲ. ಪುಸ್ತಕ ಪ್ರದರ್ಶನವೊಂದು ನಡೆಯುತ್ತಿದ್ದಾಗ ಅಲ್ಲಿಗೆ ಹೋಗಿ ಯುವಕ ಅರ್ನೆಸ್ಟೋ ರಾತ್ರಿ ಕಾವಲುಗಾರನಾಗಿ ಕೆಲಸಕ್ಕೆ ಸೇರಿಕೊಂಡ. ಹೊಸ ಪುಸ್ತಕಗಳ ಮೇಲೆಲ್ಲಾ ಕಣ್ಣಾಡಿಸಲು ಹುಡುಕಿಕೊಂಡ ಉಪಾಯ ಅದು. ಇನ್ನೊಮ್ಮೆ ಪುಸ್ತಕ ಭಂಡಾರವೊಂದರ ನೌಕರನಾಗಿಯೂ ಕೆಲಸ ಮಾಡಿದ. ಗುಡ್ಡಗಾಡುಗಳಲ್ಲಿ ಯೋಧನಾಗಿ ಅಲೆಯುತ್ತಿದ್ದಾಗಲೂ

ಸಾಹಿತ್ಯವು ಆತನ ಸನಿಹದಲ್ಲಿದ್ದು ರಂಜಿಸುತ್ತಿತ್ತು. ಬೋಧಿಸುತ್ತಿತ್ತು, ಕಣ್ತೆಗೆಸುತ್ತಿತ್ತು. ಹೀಗೆ ಬೆಟ್ಟ ಪ್ರದೇಶದಲ್ಲಿದ್ದಾಗಲೇ "ಕ್ಯೂಬಾದ ವಿಮೋಚನೆ" ಎಂಬ ಪತ್ರಿಕೆಯ ಸಂಪಾದಕನಾಗಿ ಕೆಲಸ ಮಾಡಿದ್ದು ಅರ್ನೆಸ್ಟೊ ಗೆವಾರ.

ಬಟಿಸ್ಟಾ ಸರ್ಕಾರದ ಸೈನ್ಯದ ವಿರುದ್ಧ ಗುಂಡಿನ ಕಾಳಗವೊಂದು ಜಾರಿಯಲ್ಲಿದ್ದಾಗ ಅಸ್ತಮಾದಿಂದ ಬೇನೆ ಹೆಚ್ಚಾಗಿ ಹತ್ತಿರದ ರೈತನ ಗುಡಿಸಲೊಂದರಲ್ಲಿ ವಿಶ್ರಮಿಸಿಕೊಳ್ಳಬೇಕಾಗಿಬಂದಾಗ ಲುಡ್ವಿಗ್ ಬರೆದ ಗಯಟೆಯ ಜೀವನ ಚರಿತ್ರೆಯನ್ನು ಚೆ ಗೆವಾರ ಓದಿದ್ದೆಂದು ದಾಖಲಾಗಿದೆ. ಅಂತೆಯೇ ತನ್ನ ಸುತ್ತಮುತ್ತ ನಡೆಯುತ್ತಿದ್ದ ಘಟನೆಗಳನ್ನು ಟಿಪ್ಪಣಿ ಮಾಡಿಕೊಂಡು ಎಷ್ಟೋ ದಿನಗಳ ನಂತರ "ಕ್ಯೂಬಾದ ಕ್ರಾಂತಿಕಾರಿ ಯುದ್ಧದ ನೆನಪುಗಳು" ಎಂಬ ಅಮೂಲ್ಯ ಗ್ರಂಥರಚನೆ ಕೂಡ ಚೆ ಮಾಡಿದ್ದಾರೆ. ಕ್ರಾಂತಿಕಾರಿ ಸಹಚರರ ಪೈಕಿ ಕ್ಯಾಲಿಕ್ಸ್ಟೋ ಎಂಬಾತ ಒಬ್ಬನಿದ್ದ. ಯಾವುದೋ ಗುಪ್ತಕಾರ್ಯದ ನಿಮಿತ್ತ ಆತನನ್ನು ಸಿಯೆರ್ರಾ ಮೇಸ್ಟ್ರಾದ ಬೆಟ್ಟಗಳಿಂದ ದೂರದ ಸ್ಯಾಂಟಿಯಾಗೋ ನಗರಕ್ಕೆ ಕಳಿಸುವುದಿತ್ತು. ನಗರದಿಂದ ಹಿಂದಿರುಗುವಾಗ ಎರಡು ಪುಸ್ತಕಗಳನ್ನು ತರಲು ಚೆ ಆತನಲ್ಲಿ ಕೇಳಿಕೊಂಡರು : ಒಂದು ನೆರುದಾ ಅವರ ಕೃತಿ. ಇನ್ನೊಂದು ಮಿಗುಯೆಲ್ ಹೆರ್ನಾಂಡೆಜ್‌ನ ಒಂದು ಕವನ ಸಂಗ್ರಹ.

ಇಷ್ಟೊಂದು ಅಧ್ಯಯನಶೀಲನಾಗಿದ್ದ ಚೆ ಅನೇಕ ಉತ್ತಮ ಕೃತಿಗಳ ರಚನೆ ಮಾಡಿರುವುದು ಆಶ್ಚರ್ಯವೇನಲ್ಲ. ಅವರ ಲೇಖನಗಳಲ್ಲಿ ಸಾಹಿತ್ಯ ಮತ್ತು ರಾಜಕೀಯಗಳೆರಡರ ಚರ್ಚೆಯೂ ಇದೆ. ಗೆರಿಲ್ಲಾ ಯುದ್ಧತಂತ್ರದ ಬಗೆಗೂ ಅವರದೊಂದು ಪುಸ್ತಕವಿದೆ. "ಬೊಲಿವಿಯಾ ದಿನಚರಿ"ಯಂತೂ ಅವರ ಅತ್ಯಂತ ಪ್ರಸಿದ್ಧ ಕೃತಿಯಾಗಿದೆ. ಗುಪ್ತನಾಮವಿರಿಸಿಕೊಂಡು ಆತ ಬರೆದ ರಾಜಕೀಯ ಮತ್ತು

ಇತಿಹಾಸದ ವಿಶ್ಲೇಷಣೆಗೆ ಸಂಬಂಧಿಸಿದ ಲೇಖನಗಳಿಗೆ ಲೆಕ್ಕವಿಲ್ಲ. ಮೊದಲು ಯುದ್ಧ ಮತ್ತು ಆಮೇಲೆ ಪುನರ್ರಚನೆಯ ಕೆಲಸಗಳಲ್ಲಿ ಮಗ್ನನಾಗಿದ್ದ ಈತನ ಪ್ರಕಟಿತ ಕೃತಿಗಳು ನೂರಕ್ಕೂ ಹೆಚ್ಚಾಗಿವೆ ಯೆಂದರೆ ಬಹುಶಃ ಬಂದೂಕವನ್ನು ಹಿಡಿದ ಕೈ ಲೇಖನಿಯನ್ನೂ ಸಮ ರ್ಥವಾಗಿ ಹಿಡಿಯುತ್ತಿತೆಂಬುದು ಸ್ಪಷ್ಟವಾಗುತ್ತದೆ.

ಯುವಕ ಅರ್ನೆಸ್ಟೋಗೆ ಇಬ್ಬರು ಹತ್ತಿರದ ಸ್ನೇಹಿತರಿದ್ದರು: ಆಲ್ಬರ್ಟೋ ಗ್ರಾನಡೋಸ್ ಮತ್ತು ಚಿಂಚಿನಾ ಕಾರ್ಡೋಬಾದಲ್ಲಿದ್ದ ಒಬ್ಬ ಶ್ರೀಮಂತ ಜಮೀನುದಾರನ ಮಗಳು. ಅವರ ಮನೆಗೆ ತನ್ನ ಹರಕು ಬಟ್ಟೆಗಳಲ್ಲೇ ಹೋಗುತ್ತಿದ್ದ ಅರ್ನೆಸ್ಟೋ ಆಕೆಯನ್ನು ತನ್ನೊ ಡನೆ ವೆನಿಜ್ಯೂಲಾಕ್ಕೆ ಹೋಗಿ ಕುಷ್ಠರೋಗಿಗಳ ಸೇವೆಯಲ್ಲಿ ತೊಡಗ ಬೇಕೆಂದು ಕೋರಿದ. ಆಲ್ಬರ್ಟೋ ಗ್ರಾನಡೋಸ್ ಅಲ್ಲಿಗೆ ತೆರಳುವ ವನಿದ್ದ. ಇದಕ್ಕೆ ಸಮ್ಮತಿಸದಿದ್ದ ಚಿಂಚಿನಾ ತನ್ನ ಮೋಹವನ್ನು ದೂರಮಾಡಿ ಅರ್ನೆಸ್ಟೋನಿಂದಲೂ ದೂರವಾದಳು. ತನಗಿಂತಲೂ ಆರು ವರ್ಷ ಹಿರಿಯವನಾಗಿದ್ದ ಆಲ್ಬರ್ಟೋನನ್ನು ಚೆ ಬಹುವಾಗಿ ಹಚ್ಚಿಕೊಂಡಿದ್ದ. ಆತನನ್ನು ಸ್ನೇಹಿತರೆಲ್ಲಾ ಮಿಯಾಲ್ ಎಂದು ಕರೆಯುವುದು ರೂಢಿ. ವಿಶ್ವವಿದ್ಯಾಲಯದಲ್ಲಿ ಫಾರ್ಮಸಿ ಶಿಕ್ಷಣ ವನ್ನು ಮುಗಿಸಿದ್ದ ಆತ ಕುಷ್ಠರೋಗಿಗಳ ಸೇವೆಗೆ ತೆರಳುವ ಮುನ್ನ ಜೀವರಸಾಯನ ಶಾಸ್ತ್ರವನ್ನೂ ಅಭ್ಯಾಸ ಮಾಡಿದ್ದ. ಕಾರ್ಡೋಬಾ ದಿಂದ ಸುಮಾರು ಇನ್ನೂರು ಕಿಲೋಮೀಟರ್ ದೂರದಲ್ಲಿದ್ದ ಕುಷ್ಠ ರೋಗಿಗಳ ವಸತಿಯೊಂದರಲ್ಲಿ ಕೆಲಸ ಮಾಡಲು ೧೯೪೫ರಲ್ಲಿ ತೆರಳಿದ ಆತನಿಗೆ ಅಗ್ಗೆ ನಾಲ್ಕು ವರ್ಷಗಳ ಮೊದಲೇ ಚೆ ಪರಿಚಯವಾಗಿತ್ತು. ಆಲ್ಬರ್ಟೋನ ಸೋದರ ಥಾಮಸ್ ಮತ್ತು ಅರ್ನೆಸ್ಟೋ ಗೆಳೆಯರು ಸಹಪಾಠಿಗಳು. ಆ ಮೂಲಕವೇ ಅವರಿಬ್ಬರಿಗೂ ಸ್ನೇಹ ಬೆಳೆದದ್ದು. ಇಬ್ಬರೂ ಓದುವುದರಲ್ಲಿ ಗಟ್ಟಿಗರು, ಅಭಿರುಚಿಯುಳ್ಳವರು. ಎಷ್ಟೋ ಸಾಹಿತಿಗಳ ಬಗ್ಗೆ ದಿನವಿಡೀ ಇಬ್ಬರೂ ಕುಳಿತು ಚರ್ಚಿಸುತ್ತಿದ್ದು

ದುಂಟು. ಇಬ್ಬರೂ ಇನ್ನಷ್ಟು ಹುಡುಗರನ್ನು ಕೂಡಿಕೊಂಡು ಬೆಟ್ಟಗಳಲ್ಲಿ ಅಲೆಯುವುದನ್ನು ಒಂದು ಅಭ್ಯಾಸ ಮಾಡಿಕೊಂಡಿದ್ದರು. ಅಸ್ತಮಾಕ್ಕೆ ಈ ರೀತಿಯ ದೈಹಿಕ ಪರಿಶ್ರಮ ಒಳ್ಳೆಯದೆಂದು ಇಬ್ಬರ ಇಂಗಿತವೂ ಆಗಿತ್ತು. ಆ ಕಾಲದ ಅನುಭವ ಬಹುಶಃ ನಂತರ ಸಿಯೆರ್ರಾ ಮೇಸ್ತ್ರಾದಲ್ಲಿ ಕಾದಾಡುವ ಸಂದರ್ಭ ಬಂದಾಗ ಅಪಾರವಾದ ಅನುಕೂಲ ಮಾಡಿಕೊಟ್ಟಿರಬೇಕು.

ದಕ್ಷಿಣ ಅಮೇರಿಕಾದ ಇತಿಹಾಸ ಮತ್ತು ಪ್ರಸಕ್ತ ರಾಜಕೀಯ ಪರಿಸ್ಥಿತಿ ಕುರಿತು ಇಬ್ಬರೂ ಅವಿರತವಾಗಿ ಅಭ್ಯಾಸ ಮಾಡುತ್ತಿದ್ದರು ಮತ್ತು ಚರ್ಚಿಸುತ್ತಿದ್ದರು. ಮೆಕ್ಸಿಕೋ ಮತ್ತು ನಿಕರಾಗ್ವಗಳಲ್ಲಿ ಗೆರಿಲ್ಲಾ ಹೋರಾಟವು ಹೇಗೆ ಸ್ವಾತಂತ್ರ್ಯಪ್ರಾಪ್ತಿಗೆ ಸಾಧನವಾಗಿತ್ತು ಎಂಬುದನ್ನು ಪರಿಶೀಲಿಸಿದ್ದ ಈ ಯುವಕರು ಚೈನಾದ ಗೆರಿಲ್ಲಾ ಯುದ್ಧಗಳ ಪರಿಚಯವನ್ನೂ ಮಾಡಿಕೊಂಡರು. ವಿದ್ಯಾರ್ಥಿಗಳಾಗಿ ಇವರು ಸಾಮ್ರಾಜ್ಯಶಾಹಿ ಮತ್ತು ಸರ್ವಾಧಿಕಾರಗಳ ವಿರುದ್ಧ ಪ್ರತಿಭಟನೆಗಳನ್ನು ಸಹ ಸಂಯೋಜಿಸಿದ್ದರು. ೧೯೪೩ರಲ್ಲಿ ನಡೆದ ವಿದ್ಯಾರ್ಥಿ ಆಂದೋಳನದ ಸಮಯದಲ್ಲಿ ಕಾರ್ಡೋಬಾ ವಿಶ್ವವಿದ್ಯಾಲಯದ ಆವರಣದೊಳಗೆ ಪೊಲೀಸರ ಪ್ರವೇಶವಾಯಿತು. ಆಗ ನಾಯಕತ್ವದಲ್ಲಿದ್ದ ಗ್ರಾನಡೋಸ್ ಬಂಧಿಸಲ್ಪಟ್ಟ. ಅವನ ತಮ್ಮ ಥಾಮಸ್ ಮತ್ತು ಅರ್ನೆಸ್ಟೋ ಗೆವಾರ ಆತನನ್ನು ನೋಡಲು ಬಂದೀಖಾನೆಗೆಹೋಗಿದ್ದರು. ಅಲ್ಲೊಂದು ಸ್ವಾರಸ್ಯಕರ ಸಂಭಾಷಣೆ ನಡೆಯಿತು. ಬಂಧಿತರ ಬಿಡುಗಡೆಗಾಗಿ ಒತ್ತಾಯಿಸಿ ವಿದ್ಯಾರ್ಥಿಗಳು ಬೀದಿಗೆ ಬರಬೇಕೆಂದು ಗ್ರಾನಡೋಸ್ ಆಗ್ರಹ ಪಡಿಸಿದ್ದಕ್ಕೆ ಚೆ ಉತ್ತರಿಸಿದ: "ಪೊಲೀಸರಿಂದ ತಲೆ ಚಚ್ಚಿಸಿಕೊಳ್ಳಲು ನಾವು ಬೀದಿಗಿಳಿಯಬೇಕೆ ? ಅವರನ್ನೆದುರಿಸಲು ನಮಗೆ ಪಿಸ್ತೂಲುಗಳು ಬೇಕು. ಅವು ಸಿಕ್ಕಿದಾಗ ಬೀದಿಗೆ ಇಳಿಯೋಣವಂತೆ."

ಇದಾದ ಎಷ್ಟೋ ದಿನಗಳ ನಂತರ ಮಿತ್ರರಿಬ್ಬರೂ ದಕ್ಷಿಣ ಅಮೆರಿಕಾದಲ್ಲಿ ಸುತ್ತಾಡ ಹೊರಟಿದ್ದರು. ಪೆರುವಿನಲ್ಲಿ ಮಾಚುಪಿಚ್ಚು ವಿನ ಪ್ರಾಚೀನ ಇಂಕಾ ನಗರಕ್ಕೆ ಭೇಟಿ ನೀಡಿ ಅಲ್ಲಿನ ಅವಶೇಷಗಳನ್ನೆಲ್ಲಾ ಕಂಡರು. ಹಿಂದೆ ಅಲ್ಲಿನ ದೇವಾಲಯಗಳಲ್ಲಿ ಮಾನವ ಬಲಿ ಕೊಡುತ್ತಿದ್ದ ರೆಂಬ ಐತಿಹ್ಯವನ್ನು ಗಮನದಲ್ಲಿರಿಸಿ ಗ್ರಾನಡೋಸ್ ಹೇಳಿದ: "ನಾವಿಲ್ಲೇ ಇದ್ದುಬಿಡೋಣ. ಇಲ್ಲಿನ ಇಂಕಾ ಕುಟುಂಬದ ಯುವತಿ ಯೊಬ್ಬಳನ್ನು ಮದುವೆಯಾಗಿ ನಾನೇ ರಾಜನೆಂದು ಘೋಷಿಸಿಕೊಳ್ಳುವೆ ಮತ್ತು ನಿನ್ನನ್ನು ಮಂತ್ರಿಯನ್ನಾಗಿ ಮಾಡುತ್ತೇನೆ. ಇಬ್ಬರೂ ಸೇರಿ ಒಂದು ಸಾಮಾಜಿಕ ಕ್ರಾಂತಿಯನ್ನು ಮಾಡೋಣ." ಅದಕ್ಕೆ ಚೆ ಉತ್ತರಿ ಸಿದ: "ಅಯ್ಯೋ ಹುಚ್ಚೇ ! ಗುಂಡು ಹಾರಿಸದೆ ಎಲ್ಲಾದರೂ ಕ್ರಾಂತಿ ಜರುಗುತ್ತದೆಯೆ ?"

ಈ ಅಲೆದಾಟವನ್ನು ಕೈಗೊಂಡಿದ್ದು ಚೆ ವೈದ್ಯಕೀಯ ವಿದ್ಯಾರ್ಥಿ ಯಾಗಿದ್ದಾಗ. ಫೆಬ್ರುವರಿ ೧೯೫೧ ರಿಂದ ಆಗಸ್ಟ್ ೧೯೫೨ರವರೆಗೆ; ಅಂದರೆ, ಒಂದೂವರೆ ವರ್ಷಗಳ ಕಾಲ. ಚಿಲಿ, ಪೆರು. ಕೊಲಂಬಿಯಾ, ವೆನಿಜ್ಯೂಲಾಗಳಿಗೆ ಭೇಟಿ ನೀಡಿಯಾದ ಮೇಲೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಮಿಯಾಮಿ ಮುಖಾಂತರ ಚೆ ಬೋನಸ್ಐರಿಸ್‌ಗೆ ಹಿಂದಿ ರುಗಿದ್ದ. ಗ್ರಾನಡೋಸ್ ಬಳಿ ಒಂದು ಮೋಟಾರ್ ಸೈಕಲ್ ಇತ್ತು. ಅದನ್ನು ದುರಸ್ತಿ ಮಾಡಿಕೊಳ್ಳುತ್ತಾ ಹೇಗೋ ಮುಂದಕ್ಕೆ ಹೋಗುತ್ತಿ ರುವುದೆಂದು ಅವನ ಆಶಯವಾಗಿತ್ತು. ಗೆವಾರ ಕುಟುಂಬ ಆಗ್ಗ ಕಷ್ಟದ ಪರಿಸ್ಥಿತಿಯಲ್ಲಿತ್ತು. ಚೆ ಪುರಸಭಾ ಗ್ರಂಥಭಂಡಾರದಲ್ಲಿ ಕೆಲಸ ಮಾಡುತ್ತಿದ್ದ. ಅದೂ ರಜೆಗಾಗಿ ಬೋನಸ್ಐರಿಸ್‌ನಿಂದ ಕಾರ್ಡೋಬಾಕ್ಕೆ ಬಂದಿದ್ದಾಗ. ವಿಶ್ವವಿದ್ಯಾನಿಲಯದಲ್ಲಿ ಡಾ॥ ಪಿಸಾನಿ ಎಂಬುವರ ಮಾರ್ಗದರ್ಶನದಲ್ಲಿ "ಅಲರ್ಜಿ" ಬಗ್ಗೆ ಸಂಶೋಧನೆ ನಡೆಸುತ್ತಿದ್ದ ಚೆ ಕೂಡಲೆ ಗ್ರಾನಡೋಸ್ ಜೊತೆ ಹೊರಡಲು ಅನುವಾದ.

ಜ್ಞಾನಪಿಪಾಸುವಾಗಿದ್ದ ಚೆ ಯಾವಾಗಲೂ ಜನರ ಜೀವನದ ಬಗ್ಗೆ ಹೆಚ್ಚುಹೆಚ್ಚು ತಿಳಿಯಲು ಕಾತುರನಾಗಿದ್ದ. ಪುಸ್ತಕಗಳಿಂದ ತಿಳಿಯುವುದಕ್ಕಿಂತಲೂ ನೇರವಾಗಿ ತಿಳಿಯುವ ಅವಕಾಶಕ್ಕಾಗಿ ಆತ ಹಂಬಲಿಸುತ್ತಿದ್ದ. ತನ್ನ ಅರ್ಜೆಂಟೈನಾದ ವಿಶಾಲ ಪ್ರದೇಶದ ವೈವಿಧ್ಯ, ಜನರ ಜೀವನ ಶೈಲಿ, ಅವರ ಸಂಕಷ್ಟಗಳು, ಅದಕ್ಕೆ ಪರಿಹಾರ ಮಾರ್ಗ, ಇವನ್ನೆಲ್ಲಾ ತಿಳಿಯಲು ಪ್ರವಾಸವು ಅನುಕೂಲ ಮಾಡಿಕೊಡುತ್ತದೆಂದು ಅವನ ನಂಬಿಕೆ. ಅಂತೆಯೇ ಇತರ ರಾಷ್ಟ್ರಗಳ ಜನ ಹೇಗೆ ಕಾರ್ಪಣ್ಯದಲ್ಲಿ ಸಿಲುಕಿಕೊಂಡಿದ್ದಾರೆ, ಅವನ್ನು ಪರಿಣಾಮಕಾರಿಯಾಗಿ ಬದಲಾಯಿಸುವುದು ಹೇಗೆ ಎಂಬ ಪ್ರಶ್ನೆಗಳೂ ಅವನನ್ನು ಕಾಡುತ್ತಿದ್ದುವು. ಅವರ ಬಡತನ, ಅನಕ್ಷರತೆ, ರೋಗರುಜಿನಗಳಿಗೆ ಕೊನೆ ಯಾವಾಗ ಮತ್ತು ಹೇಗೆ ? ಅವರು ಯಾರಿಂದ ಕಿರುಕುಳಕ್ಕೆ ಬಲಿಯಾಗಿದ್ದಾರೋ ಆ ಜಮೀನ್ದಾರರು, ಬಂಡವಾಳಿಗರು ಮತ್ತು ಸಾಮ್ರಾಜ್ಯಶಾಹಿ ಕಂಟಕಕಾರಿಗಳಿಂದ ಅವರಿಗೆ ಬಿಡುಗಡೆ ಸಾಧ್ಯವೆ ?

ವೈದ್ಯಕೀಯ ಅಂತಿಮ ಪರೀಕ್ಷೆಯ ವೇಳೆಗೆ ಹಿಂದಿರುಗುವುದಾದರೆ ಪ್ರವಾಸ ಕೈಗೊಳ್ಳಲು ಅಡ್ಡಿಯಿಲ್ಲವೆಂದು ಡಾನ್ ಅರ್ನೆಸ್ಟೋ ಮತ್ತು ಸೀಲಿಯಾ ಹೇಳಿದರು. ಅಂದರೆ, ಒಂದು ವರ್ಷದೊಳಗಾಗಿ ವಾಪಸ್ಸಾಗಬೇಕು ಎಂಬುದು ಅವರ ಅಣತಿ. ಸುತ್ತಾಟದ ವಿವರಗಳನ್ನು ಮುಂದಿನ ಅಧ್ಯಾಯದಲ್ಲಿ ನೋಡೋಣ. ಸದ್ಯದಲ್ಲಿ ಆತನ ಜೀವನದ ಇನ್ನೊಂದು ಘಟ್ಟವನ್ನು ಅವಲೋಕಿಸುವುದು ಅಗತ್ಯ.

೧೯೫೩ರ ಅಂತ್ಯದ ವೇಳೆಗೆ ಚೆ ವೈದ್ಯಕೀಯ ಪದವೀಧರನಾಗಿ ಆಗಲೇ ಎರಡನೆ ಬಾರಿಗೆ ದಕ್ಷಿಣ ಅಮೆರಿಕಾದಲ್ಲಿ ಪರ್ಯಟನೆಗೆ ಹೊರಟಿದ್ದ. ಪದವಿ ಪಡೆಯುವುದು ಪ್ರಯಾಸವೆನಿಸಲಿಲ್ಲ. ಏಕೆಂದರೆ ವ್ಯಾಸಂಗದಲ್ಲಿ ನಿಷ್ಣಾತನಾಗಿದ್ದ ಅರ್ನೆಸ್ಟೋ ಕೆಲಕಾಲ ಗ್ರಾನಾಡೋಸ್ ಜೊತೆಯಲ್ಲಿ ಕುಷ್ಠರೋಗಿಗಳ ವಸತಿ ಸ್ಥಾನದಲ್ಲಿ ಕೆಲಸ ಮಾಡಿ ವೈದ್ಯಕೀಯ ಅನುಭವವನ್ನೂ ಪಡೆದಿದ್ದ. ತನ್ನ ಕಾಯಿಲೆಯಿಂದಾಗಿ ಮತ್ತು

ಅವನ ಪ್ರೀತಿಯ ಅಜ್ಜಿ ಅರ್ಬುದ ರೋಗಕ್ಕೆ ತುತ್ತಾಗಿ ಮರಣ ಹೊಂದಿದ್ದುದರಿಂದ ತಾನು ವೈದ್ಯಕೀಯ ವಿದ್ಯಾರ್ಥಿಯಾಗಿದ್ದ ಚೆ ಆ ವ್ಯಾಸಂಗದಲ್ಲಿ ಹಾಗೂ ವೃತ್ತಿಯಲ್ಲಿ ಎಂದೂ ಹಿಂದೇಟು ಹಾಕಲಿಲ್ಲ. ೧೯೫೩ರ ಮಾರ್ಚ್ ತಿಂಗಳಲ್ಲಿ (ಅಂದರೆ ವ್ಯಾಪಕ ಪ್ರವಾಸ ಮುಗಿಸಿ ಬಂದ ಏಳು ತಿಂಗಳ ನಂತರ) ಅರ್ನೆಸ್ಟೋ ಶಸ್ತ್ರ ವೈದ್ಯನಾಗಿ ಮತ್ತು ಚರ್ಮರೋಗ ತಜ್ಞನಾಗಿ ಪದವಿ ಪಡೆದ. ಆಗ್ಗೆ ಅರ್ಜೆಂಟೈನಾದಲ್ಲಿ ಜಾರಿಯಲ್ಲಿದ್ದ ನಿಯಮದ ಪ್ರಕಾರ ವೃತ್ತಿಗಿಳಿಯುವ ಮುನ್ನ ಒಂದು ವರ್ಷವಾದರೂ ಸೈನ್ಯದಲ್ಲಿ ಭರ್ತಿಯಾಗಿ ಸೇವೆ ಸಲ್ಲಿಸಬೇಕಾಗಿತ್ತು. ಯುವಕ ಚೆ ಇದಕ್ಕೆ ಸಿದ್ಧನಿರಲಿಲ್ಲ. ರೈತಾಪಿ ಜನರ ಮರ್ದನದಲ್ಲಿ ತೊಡಗಿದ್ದ ಸೇನೆಗೆ ಹೇಗೆ ತಾನೆ ಸೇರುವುದು ! ಸೈನ್ಯಾಧಿಕಾರಿಗಳ ಮುಂದೆ ಹಾಜರಾಗುವ ದಿನ ತಣ್ಣೀರಿನಲ್ಲಿ ಸ್ನಾನ ಮಾಡಿ ಅಸ್ತಮಾ ಉಲ್ಬಣಿಸುವಂತೆ ಮಾಡಿಕೊಂಡ. ಅಧಿಕಾರಿಯು ತಪಾಸಣೆ ಮಾಡಿ ಅರ್ನೆಸ್ಟೊ ಸೈನ್ಯದಲ್ಲಿ ಭರ್ತಿಯಾಗಲು ಸರಿಯಾದ ವ್ಯಕ್ತಿಯಲ್ಲವೆಂದು ತೀರ್ಮಾನ ನೀಡಿದ. ಈ ಅನರ್ಹತೆ ಅವನಿಗೆ ವರದಾನವಾಯಿತಾದರೂ ಮುಂದಿನ ಹಲವು ವರ್ಷಗಳನ್ನು ತಾನೇ ಆಯ್ಕೆ ಮಾಡಿಕೊಂಡ ಸೈನ್ಯದಲ್ಲಿಯೇ ಕಳೆದನೆನ್ನುವುದು ಸ್ವಾರಸ್ಯದ ವಿಷಯ. ಕುಷ್ಠರೋಗಿಗಳ ವಸತಿಸ್ಥಾನದಲ್ಲಿ ಒಳ್ಳೆಯ ಸಂಬಳ ಕೊಟ್ಟು ವೈದ್ಯನ ಸ್ಥಾನ ನೀಡಲು ಅಲ್ಲಿಯ ಮೇಲ್ವಿಚಾರಕರು ಸಿದ್ಧರಿದ್ದರು. ಅಂತೆಯೇ ವೆನಿಝೂಲಾದ ಕ್ಯಾರಕಾಸ್‌ನಲ್ಲಿ ಸಹ ಕುಷ್ಠರೋಗ ತಜ್ಞನ ಹುದ್ದೆ ಅವನಿಗಾಗಿ ಸಿದ್ಧವಾಗಿತ್ತು. ಆಲ್ಬರ್ಟೊ ಗ್ರಾನಡೋಸ್‌ಗೆ ಈ ವೃತ್ತಿ ಕೂಡಿಬಂತಾದರೂ ಚೆ ಅದಕ್ಕೆ ಒಲಿದು ಒಂದೆಡೆ ನೆಲೆಯೂರಲು ಸಿದ್ಧನಿರಲಿಲ್ಲ. ಆಗೊಮ್ಮೆ ಈಗೊಮ್ಮೆ ಆ ವೃತ್ತಿಗೆ ಇಳಿದನಾದರೂ ಆತ ವೈದ್ಯಕೀಯವನ್ನು ಉದ್ಯೋಗವನ್ನಾಗಿ ಮಾಡಿಕೊಳ್ಳಲಿಲ್ಲ. ಆತನ ಮೊದಲ ಹೆಂಡತಿ ಹಿಲ್ಡಾ ಗೇಡಿಯಾ ಹೇಳುವಂತೆ ಅವನು "ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಕೆಲಸ ಮಾಡಲು ಯತ್ನಿಸಿದ ಮತ್ತು ಜನ

ಸಾಮಾನ್ಯರಿಗೆ ಉಚಿತವಾಗಿ ಚಿಕಿತ್ಸೆ ನೀಡಲು ಮುಂದಾದ. ವೈದ್ಯಕೀಯವನ್ನು ಅವನೆಂದೂ ಉಪೇಕ್ಷೆಯಿಂದ ಕಾಣಲಿಲ್ಲ. ಬದಲಾಗಿ ಅವರ ಬಗ್ಗೆ ಅವನಿಗೆ ಗಾಢವಾದ ಒಲವಿತ್ತು. ದಕ್ಷಿಣ ಅಮೆರಿಕಾ ಪ್ರವಾಸದಲ್ಲಿ ಅವನು ಅನೇಕ ರೋಗಗಳ ಭಯಂಕರ ಪರಿಣಾಮವನ್ನು ಕಣ್ಣಾರೆ ನೋಡಿದ್ದ. ಆ ಕೊಳಕು, ಆ ಬಡತನ, ಆ ಹಿಂಸೆ, ಎಲ್ಲಾ ಅವನಿಗೆ ಸಿಟ್ಟು ಬರಿಸುತ್ತಿದ್ದವು. ಅವನ ಅಭಿಪ್ರಾಯದಲ್ಲಿ ನಮ್ಮ ದೇಶಗಳಲ್ಲಿ ವೈದ್ಯನಾಗಲು ವಿಶೇಷ ಪರಿಣತಿ ಪಡೆಯಬೇಕಾಗಿಲ್ಲ. ಮೇಲಿನ ವರ್ಗಗಳ ಸೇವೆ ಸಲ್ಲಿಸುತ್ತಾ ರೋಗದ ಭ್ರಾಂತಿ ಇರುವವರಿಗೆ ಅನುಪಯುಕ್ತ ಔಷಧಿಗಳನ್ನು ಕೊಡುವ ಗೊಡವೆ ಅವನಿಗೆ ರೋಸಿಸಿತ್ತು. ಅದರ ಬದಲು ಬಡವರ ಸಾಮಾನ್ಯ ರೋಗಗಳಿಗೆ ಉಪಚಾರ ನೀಡುವುದರಲ್ಲಿ ಅವನಿಗೆ ಹೆಚ್ಚು ಸಂತೋಷವಿತ್ತು. ಪೌಷ್ಟಿಕ ಆಹಾರದ ಕೊರತೆಯೇ ಆ ಬಡವರಿಗೆ ಮೂಲಭೂತವಾದ ರೋಗವಾಗಿತ್ತು. ಆ ಅನಿಷ್ಟದ ಪರಿಹಾರವಾದರೆ ರೋಗವೂ ಮಾಯವಾಗುತ್ತದೆಂದು ಅವನ ದೃಢವಾದ ನಿಶ್ಚಯವಾಗಿತ್ತು."

ಅಲ್ಲೂ ಬಂಡವಾಳಶಾಹಿ–ಸಾಮ್ರಾಜ್ಯಶಾಹಿಯ ಬಾಧೆ ಅವನ ಗಮನಕ್ಕೆ ಬಂದಿತು. ಶ್ರಮ ಮಾಡಿ ಉತ್ಪಾದನೆ ಮಾಡುವ ರೈತನಿಗೆ ಆಹಾರವಿಲ್ಲ. ಅದರಿಂದಾಗಿ ರೋಗ. ರೋಗಕ್ಕೆ ಮದ್ದು ತಿಳಿದಿದೆ. ಆದರೆ ಅದು ಅವನಿಗೆ ದಕ್ಕುವಂತಿಲ್ಲ. ಇಕ್ಕಳದಲ್ಲಿ ಸಿಕ್ಕಿಕೊಂಡು ವಿಲಿವಿಲಿ ಒದ್ದಾಡುವ ರೈತನ ಮೇಲಿನ ದೌರ್ಜನ್ಯ ಅರ್ನೆಸ್ಟೋಗೆ ಸಹಿಸಲಾಗದ ವ್ಯಾಧಿಯಾಗಿತ್ತು. ಅನಭಿವೃದ್ಧ ರಾಷ್ಟ್ರಗಳಲ್ಲಿ ಮೊದಲು ಈ ವ್ಯಾಧಿಗೆ ಸಿದ್ಧೌಷಧ ಕಂಡುಹಿಡಿದು ಪ್ರಯೋಗಿಸಬೇಕೆಂದು ಚೆ ಬೇಗನೆ ಮನಗಂಡ. ಗ್ವಾಟೆಮಾಲಾದಲ್ಲಿ ಅವನು ನೋಡಿದ್ದ ಸನ್ನಿವೇಶವನ್ನು ಮುಂದಿನ ದಿನಗಳಲ್ಲಿ ಮನಸ್ಸಿಗೆ ತಂದುಕೊಂಡು ಅವನೆನ್ನುತ್ತಿದ್ದ: "ಒಬ್ಬ ಕ್ರಾಂತಿಕಾರಿ ವೈದ್ಯನಾಗಬೇಕಾದರೆ ಮೊದಲು ಒಂದು

ಕ್ರಾಂತಿಯ ಅವಶ್ಯಕತೆ ಇದೆಯೆಂಬುದು ಅಲ್ಲಿ ನನಗೆ ಚೆನ್ನಾಗಿ ವೇದ್ಯ ವಾಯಿತು."

ಈ ಸಂಬಂಧದಲ್ಲಿ ಇನ್ನೊಂದು ಘಟನೆಯನ್ನು ನೆನಪಿಸಿಕೊಳ್ಳ ಬಹುದು. ೧೯೬೪ರ ಕ್ರಾಂತಿಯ ನಂತರದ ಕ್ಯೂಬಾದಲ್ಲಿ ಎಲ್ಲವನ್ನೂ ಮಿತವಾಗಿ ಬಳಸಬೇಕೆಂದು ಮೀಸಲಿಟ್ಟ ವರ್ಷ. ಆಗ್ಗೆ ಚೆ ಗೆವಾರ ಕ್ಯೂಬಾದಲ್ಲಿ ಒಬ್ಬ ಪ್ರಮುಖ ಮಂತ್ರಿ. ಮೇ ತಿಂಗಳಲ್ಲಿ ವೈದ್ಯಕೀಯ ನಿಯತಕಾಲಿಕವೊಂದು ಹವಾನಾದ ಮನೋರೋಗ ಚಿಕಿತ್ಸಾಲಯದಿಂದ ಅವರಿಗೆ ಬಂದಿತು. ಕೂಡಲೆ ಮೇ ೨೬ ರಂದು ಆ ಆಸ್ಪತ್ರೆಯ ನಿರ್ದೇಶಕರಿಗೆ ಚೆ ಒಂದು ಪತ್ರ ಬರೆದರು. ಮುದ್ರಣವು ಎಷ್ಟು ಕೆಟ್ಟದ್ದಾಗಿತ್ತೆಂದು ಟೀಕಿಸುತ್ತಾ ಚೆ ಲೇವಡಿ ಮಾಡಿದ್ದು ಹೀಗೆ: "ನೀವು ಕಳಿಸಿದ ನಿಯತಕಾಲಿಕ ತಲುಪಿದೆ. ಸಮಯದ ಅಭಾವದಿಂದ ಅದನ್ನು ಓದಲಾರೆನೋ ಏನೋ. ಆದರೂ ವಿಷಯದಲ್ಲಿ ಆಸಕ್ತಿ ಇರುವುದ ರಿಂದ ಓದಲು ಯತ್ನಿಸುತ್ತೇನೆ. ಒಂದು ಕುತೂಹಲದ ಸಂಗತಿ ಇದೆ. ನಿಯತಕಾಲಿಕದ ೬೩೦೦ ಪ್ರತಿಗಳನ್ನು ಮುದ್ರಣ ಮಾಡಿದ್ದಾದರೂ ಏಕೆ ? ಜನಸಾಮಾನ್ಯರಿಗೆ ಅದು ಪ್ರಸ್ತುತ ಕೂಡ ಅಲ್ಲ. ಕ್ಯೂಬಾದಲ್ಲಿ ಅಷ್ಟೊಂದು ಮಂದಿ ವೈದ್ಯರು ಎಲ್ಲಿದ್ದಾರೆ ?.... ಇಲಿಗಳೇನಾದರೂ ತಮ್ಮ ಮನೋವಿಜ್ಞಾನದ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಿವೆಯೋ ಅಥವಾ ಹಸಿವು ಇಂಗಿಸಿಕೊಳ್ಳಲು ಇವನ್ನು ಉಪಯೋಗಿಸುತ್ತಿ ವೆಯೋ ?"- ಅರ್ಥಾತ್, ಜನಸಾಮಾನ್ಯರನ್ನು ತಲುಪಲು ವೈದ್ಯ ಕೀಯ ಮೊದಲು ಸಜ್ಜಾಗಬೇಕು. ಅಪವ್ಯಯದಿಂದ ರೋಗಗಳನ್ನು ತಡೆಗಟ್ಟಲು ಆಗುವುದಿಲ್ಲ !

ಗೆರಿಲ್ಲಾ ಯುದ್ಧದಲ್ಲಿ ತೊಡಗಿದ್ದಾಗ ಅವರ ತಂಡದಲ್ಲಿ ಬೇರೊಬ್ಬ ವೈದ್ಯನಿಲ್ಲದಿದ್ದುದರಿಂದ ಸ್ವತಃ ಚೆ ಗೆವಾರ ವೈದ್ಯನಾಗ ಬೇಕಾಗಿ ಬಂತು. ಅಲ್ಲದೆ ಉಬ್ಬಸದಿಂದ ಬಳಲಿದಾಗಲೂ ಯೋಧನ ಬದಲು ಚೆ ವೈದ್ಯನಾಗುತ್ತಿದ್ದ.

ಅಂತಹ ಒಂದು ಸಂದರ್ಭದಲ್ಲಿ ಆತನ ಅನುಭವವನ್ನು ಆತನ ಮಾತುಗಳಲ್ಲೇ ಕೇಳಬಹುದು: "ನಾನು ವೈದ್ಯಕೀಯಕ್ಕೆ ಹಿಂದಿರುಗಿದಾಗ ಕೆಲವು ಭಾವನಾತ್ಮಕ ಕ್ಷಣಗಳನ್ನು ಕಂಡೆ. ನನ್ನ ಮೊದಲ ರೋಗಿ ಸಂಗಾತಿ ಸಿಲೆರೋ. ಅವನ ಬಲತೋಳಿಗೆ ಗುಂಡು ತಾಗಿ ಅದನ್ನು ಸೀಳಿಹಾಕಿತ್ತು. ಅಲ್ಲಿಂದ ಶ್ವಾಸಕೋಶವನ್ನು ಭೇದಿಸಿತ್ತು. ಕಡೆಗೆ ಹೋಗಿ ಅದು ಬೆನ್ನುಹುರಿಯಲ್ಲಿ ಅದುಗಿಕೊಂಡಿತ್ತು. ಎರಡು ಕಾಲುಗಳೂ ಬಿದ್ದು ಹೋಗಿದ್ದುವು. ಅವನ ಸ್ಥಿತಿ ಚಿಂತಾಜನಕವಾಗಿತ್ತು. ನಾನು ಏನು ತಾನೆ ಮಾಡುವಂತಿತ್ತು ? ನೋವು ನುಂಗಿಕೊಳ್ಳುವಂತೆ ಒಂದು ಮಾದಕ ಔಷಧಿ ಕೊಟ್ಟೆ ಮತ್ತು ಎದೆಯನ್ನು ಬಿಗಿಯಾಗಿ ಕಟ್ಟಿದೆ. ಅದರಿಂದ ಸ್ವಲ್ಪ ಸುಲಭವಾಗಿ ಉಸಿರಾಟ ಸಾಧ್ಯವಾಗಿತ್ತು. ಆಗಿನ ಸಂದರ್ಭದಲ್ಲಿ ಅವನನ್ನು ಉಳಿಸಲು ಇದ್ದ ಏಕೈಕ ಮಾರ್ಗವನ್ನು ನಾವು ಆರಿಸಿಕೊಂಡೆವು, ಶತ್ರುಸೈನ್ಯದ ಹದಿನಾಲ್ಕು ಮಂದಿ ನಮ್ಮ ಕೈವಶವಾಗಿದ್ದರು, ನಮ್ಮ ಗೆರಿಲ್ಲಾಗಳ ಪೈಕಿ ಲೀಲ್ ಮತ್ತು ಸಿಲೆರೊ ಗಾಯಗೊಂಡಿದ್ದರು. ಅವರಿಬ್ಬರನ್ನೂ ಶತ್ರುಗಳ ವಶಕ್ಕೆ ಒಪ್ಪಿಸಿದೆವು. ಅವರಿಗೆ ಉಪಚಾರ ನೀಡಲಾಗುವುದೆಂಬ ಭರವಸೆ ಕೊಟ್ಟಿದ್ದುದರಿಂದ ನಾವು ಹಾಗೆ ಮಾಡಿದೆವು. ಸಿಲೆರೋಗೆ ಈ ವಿಷಯ ತಿಳಿಸಿದೆ. ಏನೇನೋ ಸಾಂತ್ವನದ ಮಾತುಗಳನ್ನಾಡಿದೆ. ಸಂಕಟದ ನಗೆ ನಕ್ಕ. ಯಾವ ಮಾತಿಗಿಂತಲೂ ಹೆಚ್ಚು ಭಾವನೆ ಆ ನಗೆಯಲ್ಲಿ ಪ್ರಕಟವಾಗಿತ್ತು. ತಾನಿನ್ನು ಉಳಿಯುವ ಸಂಭವವಿಲ್ಲವೆಂದು ಅವನು ತೀರ್ಮಾನಿಸಿಕೊಂಡಿದ್ದ, ಅದು ನಮಗೂ ತಿಳಿದಿತ್ತು. ವಿದಾಯ ಹೇಳಲು ಅವನ ನೆತ್ತಿಯ ಮೇಲೆ ಒಂದು ಮುತ್ತಿಡಬೇಕೆನ್ನಿಸಿತು. ಹಾಗೆ ಮಾಡಿದ್ದರೆ ತಾನು ಸಾವನ್ನಪ್ಪುವುದು ಇನ್ನೂ ಖಚಿತವೆಂದು ಅವನು ದೃಢಮಾಡಿಕೊಳ್ಳುತ್ತಿದ್ದ. ಅವನ ಕಡೆಯ ನಿಮಿಷಗಳನ್ನು ಹಾಗೆ ಹಾಳುಗೆಡವುವುದು ಸರಿಯಲ್ಲವೆಂದು ಯೋಚಿಸಿದ. ವೈದ್ಯನಾಗಿ ಅದು ನನ್ನ ಕರ್ತವ್ಯವೆನ್ನಿಸಿತು. ಎಷ್ಟು ಪ್ರೀತ್ಯಾದರಗಳಿಂದ ಅವನನ್ನು ಬೀಳ್ಕೊಡಲು

ಸಾಧ್ಯವಿತ್ತೋ ಅಷ್ಟರಿಂದ ಬೀಳ್ಕೊಟ್ಟೆ, ಮನಸ್ಸಿನಲ್ಲಿ ದುಗುಡ ಮತ್ತು ನೋವು ವಿಪರೀತವಾಗಿತ್ತು. ಶತ್ರುವಿನ ಕೈಗಳಲ್ಲಿದ್ದ ಇಬ್ಬರನ್ನೂ ಹೀಗೆ ಬೀಳ್ಕೊಡುತ್ತಿದ್ದಾಗ ಅವರ ಮನಸ್ಸಿನಲ್ಲಿ ಏನಿತ್ತು? ಶತ್ರುಗಳ ಆಶ್ರಯದಲ್ಲಿ ಸಾಯುವುದಕ್ಕಿಂತ ಸಂಗಾತಿಗಳ ನಡುವೆ ಸಾಯುವುದು ಉತ್ತಮವೆಂದು ಅವರ ಅಭಿಪ್ರಾಯವಾಗಿತ್ತು. ಆದರೆ ಅವರನ್ನು ಉಳಿಸಲು ಕಟ್ಟಕಡೆಯ ಪ್ರಯತ್ನವೊಂದನ್ನು ಮಾಡುವುದು ಸಹ ನಮ್ಮ ಕರ್ತವ್ಯವಾಗಿತ್ತು."

ವೈದ್ಯಕೀಯ ಪದವಿ ಪಡೆದನಂತರ ಚೆ ದಕ್ಷಿಣ ಅಮೆರಿಕಾದ ಪರ್ಯಟನೆಗೆ ಹೊರಟನೆಂದು ಹಿಂದೆಯೇ ಹೇಳಿದೆ. ೧೯೫೩ರ ಡಿಸೆಂಬರ್ ೨೪ ರಂದು ಚೆ ಗ್ವಾಟೆಮಾಲಾ ನಗರವನ್ನು ಮುಟ್ಟಿದ. ಅಲ್ಲಿಯ ಪರಿಶುದ್ಧ ಗಾಳಿಯಿಂದಾಗಿ ಆತನಿಗೆ ಹಾಯೆನಿಸಿತು. ನಗರದ ಹಲವರಿಗೆ ಅವನಲ್ಲಿ ಪರಿಚಯ ಪತ್ರಗಳಿದ್ದವು. ಲಿಮಾದಲ್ಲಿ ಒಬ್ಬರು ಹಾಗೆ ಬರೆದುಕೊಟ್ಟಿದ್ದ ಪತ್ರ ಹಿಲ್ಡಾ ಗೇಡಿಯಾ ಎಂಬಾಕೆಗೆ. ಆಕೆ ಲಿಮಾದಲ್ಲಿ ವಿಶ್ವವಿದ್ಯಾಲಯವನ್ನು ಪ್ರವೇಶಿಸಿ ಅರ್ಥಶಾಸ್ತ್ರದಲ್ಲಿ ಪದವಿ ಪಡೆದಿದ್ದಳು. ಎಡಪಂಥದ ಪಕ್ಷವೊಂದರ ಕಾರ್ಯಕರ್ತೆಯಾಗಿ ಭೂಗತ ವಾಸ ಕಂಡಿದ್ದ ಈಕೆ ಗ್ವಾಟೆಮಾಲಾದಲ್ಲಿ ಆಗ್ಗೆ ಅಧಿಕಾರದಲ್ಲಿದ್ದ ಅರ್ಬೆಂಜ್ ಸರ್ಕಾರಕ್ಕೆ ಬೆಂಬಲವಾಗಿ ಹೋರಾಟಕ್ಕೆ ಸಿದ್ಧವಾಗಿ ಬಂದಿದ್ದಳು. ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರ್ಕಾರ ಅರ್ಬೆಂಜ್‌ನನ್ನು ಪದಚ್ಯುತಗೊಳಿಸಲು ಸನ್ನಾಹ ನಡೆಸಿತ್ತು, ಏಕೆಂದರೆ, "ಹಸಿರು ಪಿಶಾಚಿ" (ಯುನೈಟೆಡ್ ಫ್ರೂಟ್ ಕಂಪನಿಯ ವಿರುದ್ಧ ಅವನು ಅನೇಕ ಪ್ರತಿಬಂಧಕಗಳನ್ನು ಹೇರಲು ಮುಂದಾಗಿದ್ದು. ವಾಷಿಂಗ್‌ಟನ್ ಯಜಮಾನರ ಕಣ್ಣು ಕೆಂಪಾಯಿತು. ಅನೇಕ ರಾಷ್ಟ್ರಗಳಿಂದ ವಲಸೆ ಬಂದವರು ಗ್ವಾಟೆಮಾಲಾದಲ್ಲಿ ನೆಲೆಸಿದ್ದರು. ದಕ್ಷಿಣ ಅಮೇರಿಕಾದ ಸರ್ವಾಧಿಕಾರಿ ಸರ್ಕಾರಗಳು ಇದನ್ನು ಸಹಿಸದಾಗಿದ್ದರು.

ಸೆರ್ವಾಂಟಿಸ್ ಒಬ್ಬ ಪ್ರಸಿದ್ಧ ಸ್ಪ್ಯಾನಿಷ್ ಸಾಹಿತಿ. ಅವನ ಹೆಸರಿನ ಒಂದು ವಸತಿಗೃಹವನ್ನು ವಲಸೆಗಾರರು ಸ್ಥಾಪಿಸಿಕೊಂಡಿ

ದ್ದರು. ಹಿಲ್ಡಾಳನ್ನು ಚೆ ಮೊದಲು ಸಂಧಿಸಿದ್ದು ಅಲ್ಲಿ. ಚೇಯಂತೆ ಆಕೆಯೂ ಪ್ರವಾಸ ಧುರೀಣಳು. ಜೊತೆಗೆ ಕಲಾ ಪ್ರೇಮಿ. ಒಂದೆರಡು ದಿನಗಳಲ್ಲಿ ಇಬ್ಬರಲ್ಲೂ ವಿಶ್ವಾಸ ಇಮ್ಮಡಿಯಾಗಿ ಅನುರಾಗಕ್ಕೆ ತಿರುಗಿತು. ಕ್ಯೂಬಾದಿಂದ ವಲಸೆ ಬಂದಿದ್ದ ಅನೇಕರನ್ನು ಆಕೆ ಚೇಗೆ ಪರಿಚಯ ಮಾಡಿಸಿದಳು. ಮುಂದೆ ಅವರೆಲ್ಲಾ "ಗ್ರಾನ್ಮಾ" ಯಾತ್ರೆ ಹೊರಟವರು. ಬಟಿಸ್ಟಾ ಸರ್ಕಾರದ ಬರ್ಬರತೆಯು ಮುಖಾಮುಖಿ ಆಗಲು ಈ ಭೇಟಿಗಳು ಅನುವಾದವು. ಆರ್ಬೆಂಜ್ ಸರ್ಕಾರವನ್ನು ಉಳಿಸುವುದು ಬಟಿಸ್ಟಾ ಸರ್ಕಾರವನ್ನು ಉರುಳಿಸುವುದಕ್ಕೆ ಪೂರಕವಾದುವೆಂದು ಚೇಗೆ ತಿಳುವಳಿಕೆ ಮೂಡಿತು. ವೈಯಕ್ತಿಕವಾಗಿ ಅವನಿಗೊಂದು ಮಾನಸಿಕ ಉಲ್ಲಾಸ ಉಂಟಾಗಿತ್ತು. ತನ್ನಂತೆ ಕಳಕಳಿ ಇರುವ ಅನೇಕರ ಭೇಟಿ, ಸಾಮ್ರಾಜ್ಯಶಾಹಿಗೆ ತೀವ್ರ ವಿರೋಧ, ಹಿಲ್ಡಾಳಪ್ರೇಮ-ಇವೆಲ್ಲಾ ಅದಕ್ಕೆ ಕಾರಣ. ಆದರೆ ಕ್ರಾಂತಿಕಾರಿ ಕ್ರಮ ಎನಿಸಿಕೊಳ್ಳಬಹುದಾದ ಯಾವ ಕ್ರಿಯೆಯೂ ಅವನಿಗೆ ಗೋಚರಿಸಲಿಲ್ಲ. ಆರ್ಬೆಂಜ್ ಸರ್ಕಾರವು ಅಮೇರಿಕಾದ ಅಧಿಪತ್ಯವನ್ನು ತಿರಸ್ಕರಿಸಿದ್ದುದು ಸ್ವಾಗತಾರ್ಹವಾಗಿತ್ತು, ನಿಜ. ಆದರೆ ಆ ಸರ್ಕಾರ ಕಾರ್ಯಗತಗೊಳಿಸಿದ್ದ ಯಾವ ನಿಯಮವೂ ನೇರವಾಗಿ ಜನಸಾಮಾನ್ಯರ ಏಳಿಗೆಗೆ ಸಹಾಯಕವಾಗಿರಲಿಲ್ಲ. ಭೂ ಸುಧಾರಣೆ ಮತ್ತು ಯುನೈಟೆಡ್ ಫ್ರೂಟ್ ಕಂಪನಿ ವಿರುದ್ಧದ ಕ್ರಮಗಳೆರಡನ್ನೂ ಚೆ ಹೃತ್ಪೂರ್ವಕವಾಗಿ ಬೆಂಬಲಿಸಿದ. ಅಮೇರಿಕಾದ ಅಧ್ಯಕ್ಷ ಐಸೆನ್ ಹೋವರ್ ಮತ್ತು ವಿದೇಶಾಂಗ ಕಾರ್ಯದರ್ಶಿ ಡಲೆಸ್ ಇಬ್ಬರೂ ಈ ಕಂಪನಿಯ ಷೇರುದಾರರು. ಅವರಿಬ್ಬರಿಗೂ ಪಿತ್ತ ನೆತ್ತಿಗೇರಿತು. ಆರ್ಬೆಂಜ್‌ನನ್ನು ಕೆಳಗಿಳಿಸಬೇಕೆಂದು ಒಳಸಂಚುಗಳ ಷಡ್ಯಂತ್ರ ರಚನಾಸಂಸ್ಥೆ ಸಿ.ಐ.ಎ.ಗೆ ಆಜ್ಞೆ ಹೋಯಿತು. ಆರ್ಬೆಂಜ್ ಒಬ್ಬ ಕಮ್ಯುನಿಸ್ಟ್, "ಟೆಕ್ಸಾಸ್ ಮತ್ತು ಪನಾಮಾ ಕಾಲುವೆ ಮಧ್ಯೆ ಒಂದು ಸೋವಿಯೆತ್ ಗಣರಾಜ್ಯ ಕೂಡದು" ಇತ್ಯಾದಿಯಾಗಿ ಹುಯಿಲೆಬ್ಬಿಸಿ ಇಡೀ ದಕ್ಷಿಣ ಅಮೇರಿಕಾ ಗ್ವಾಟೆಮಾಲಾದ ವಿರುದ್ಧ

ತಿರುಗಬೇಕೆಂಬ ಹುನ್ನಾರ ನಡೆಯಿತು. ಚುನಾವಣೆಯಲ್ಲಿ ಗೆದ್ದಿದ್ದ ಅರ್ಬೆಂಜ್‌ನನ್ನು ಪ್ರಗತಿಪರನಾಗಿದ್ದನೆಂಬ ಕಾರಣದಿಂದ ಹೊಡೆದೋಡಿಸಬೇಕೆಂಬ ಕಾತುರಕ್ಕೆ ಒಂದೇ ಕಾರಣ ಆತ ಅಮೇರಿಕಾದ ಬಂಡವಾಳಶಾಹಿಗೆ ಮಣ್ಣುಮುಕ್ಕಿಸಲು ಹೊರಟಿದ್ದದ್ದು, ಅವನು ಕಮ್ಯುನಿಸ್ಟ್ ಆಗಬೇಕೆಂದು ಕನಸಿನಲ್ಲೂ ಎಣಿಸಿರಲಿಲ್ಲ. ಬಹುಮಟ್ಟಿಗೆ ಅವನು ಸಂಪ್ರದಾಯವಾದಿಯೇ ಆಗಿದ್ದ.

ಅರ್ಬೆಂಜ್ ಸರ್ಕಾರಕ್ಕೆ ಬೆಂಬಲ ನೀಡುವುದು ಕಾರ್ಯತಃ ವ್ಯಕ್ತವಾಗಬೇಕಾಗಿತ್ತು, ಆದ್ದರಿಂದ ಚೆ ವೈದ್ಯನಾಗಿ ಯಾವುದಾದರೂ ಬಡವರ ವಸತಿಯಲ್ಲಿ ಕೆಲಸ ಮಾಡಲು ಮುಂದಾದ. ಗ್ವಾಟೆಮಾಲಾದ ಅಧಿಕಾರಶಾಹಿ ಈ ರೀತಿಯ ಸಹಕಾರ ಸ್ವೀಕರಿಸಲು ಹಿಂದೇಟು ಹಾಕಿತು. ತನ್ನ ವೈದ್ಯಕೀಯ ಪದವಿಯ ಯೋಗ್ಯತಾಪತ್ರ ತೋರಿಸಬೇಕೆಂದು ಅವರು ಹಠ ಹಿಡಿದರು ! ಈ ರೀತಿ ತನ್ನ ಪಾಲ್ಗೊಳ್ಳುವಿಕೆಯು ಅಸಾಧ್ಯವಾದಾಗ ಚೆ ಪತ್ರಿಕೆಗಳಲ್ಲಿ ರಾಜಕೀಯ ವಿಶ್ಲೇಷಣೆಯ ಲೇಖನಗಳನ್ನು ಬರೆಯುವುದು, ಪುಸ್ತಕಗಳನ್ನು ಹೊತ್ತು ಮಾರುವುದು. ಇತ್ಯಾದಿಗಳಲ್ಲಿ ನಿರತನಾದ. "ಮಾರಿದ್ದಕ್ಕಿಂತ ಓದಿದ್ದೇ ಹೆಚ್ಚು," ಎಂದು ಹಿಲ್ಡಾ ಗೇಲಿ ಮಾಡಿದಳು.

ಅನೇಕ ಬಿಕ್ಕಟ್ಟುಗಳ ಸರಪಳಿಯಿಂದ ಗ್ವಾಟೆಮಾಲಾವನ್ನು ಬಂಧಿಸಿ ಕಡೆಗೆ ೧೯೫೪ರ ಜೂನ್ ಅಂತ್ಯದ ವೇಳೆಗೆ ಅರ್ಬೆಂಜ್ ತನ್ನ ಅಧ್ಯಕ್ಷಸ್ಥಾನಕ್ಕೆ ರಾಜಿನಾಮೆ ನೀಡುವಂತೆ ಮಾಡುವಲ್ಲಿ ಅಮೆರಿಕಾ ಸರ್ಕಾರ ಯಶಸ್ವಿಯಾಯಿತು, ಈ ರೀತಿಯ ಸಾಮ್ರಾಜ್ಯಶಾಹಿಯ ಹಸ್ತಕ್ಷೇಪವನ್ನು ದಕ್ಷಿಣ ಅಮೇರಿಕಾದ ಒಂದು ಅನಭಿವೃದ್ಧ ರಾಷ್ಟ್ರದಲ್ಲಿ ಪ್ರತ್ಯಕ್ಷವಾಗಿ ಕಂಡ ಚೆ ಇದು ಪರಿಸಮಾಪ್ತಿಯಾಗಲು ಯಾವುದು ನೇರಮಾರ್ಗವೆಂದು ತನಗೆ ತಾನು ಖಚಿತಪಡಿಸಿಕೊಂಡ. ಅರ್ಬೆಂಜ್ ಇನ್ನೂ ಅಧಿಕಾರದಲ್ಲಿದ್ದಾಗ ಗೃಹರಕ್ಷಕ ದಳವೊಂದನ್ನು ಸಜ್ಜು ಮಾಡಬೇಕೆಂದು ಚೆ ಯತ್ನಿಸಿದ. ಪ್ರತಿಗಾಮಿಗಳನ್ನು ಎದುರಿಸಲು ಇದು ಅಗತ್ಯವಾಗಿತ್ತು.

ಇದಕ್ಕೆ ಬೆಂಬಲ ಸಿಗದಿದ್ದಾಗ ಹೋರಾಟದ ಪ್ರದೇಶಕ್ಕೆ ತನ್ನನ್ನು ಕಳಿಸಬೇಕೆಂದು ಕೇಳಿದ. ಆತನ ಇಚ್ಛೆ ಈಡೇರುವಂತಿರಲಿಲ್ಲ. ಸಶಸ್ತ್ರ ಪಡೆಗಳನ್ನು ಹಿಮ್ಮೆಟ್ಟಿಸಲು ಸನ್ನದ್ಧವಾಗಿವೆಯೆಂದು ಆರ್ಬೆಂಜ್ ಪ್ರಕಟಪಡಿಸಿದ್ದ. ಕಡೆಗೆ ಬೇರಾವ ರೀತಿಯಲ್ಲೂ ಸಹಾಯ ನೀಡಲು ಸಾಧ್ಯವಿಲ್ಲದಾಗ ಶಸ್ತ್ರಾಸ್ತ್ರ ಸಾಗಾಣಿಕೆಯಲ್ಲಿ ಚೆ ನೆರವು ನೀಡಿದ. ಒಬ್ಬ ಯುವಕ ಹೀಗೆ ಗ್ವಾಟೆ ಮಾಲಾದಲ್ಲಿ ಕ್ರಿಯಾಶೀಲನಾಗಿರುವುದನ್ನು ಅಮೆರಿಕೆಯ ಗೂಢಚಾರರು ಗಮನಿಸದೆ ಹೋಗಲಿಲ್ಲ, ಅವನನ್ನು "ಅಪಾಯಕಾರಿ ಕಮ್ಯೂನಿಸ್ಟ್" ತಂಡದವನೆಂದು ಹಣೆಪಟ್ಟಿ ಕಟ್ಟಿ ದಸ್ತಗಿರಿ ಮಾಡಲು ತಯಾರಿ ನಡೆದಿತ್ತು. ಇದನ್ನು ಹೇಗೋ ತಿಳಿದುಕೊಂಡ ಅರ್ಜೆಂಟೈನಾದ ರಾಯಭಾರಿ ಕೂಡಲೆ ಸೆರ್ವಾಂಟಿಸ್ ವಸತಿಗೃಹಕ್ಕೆ ತೆರಳಿ ಚೆ ಗವಾರನನ್ನು ತನ್ನ ಕಚೇರಿಗೆ ಕರೆದೊಯ್ದು ರಕ್ಷಣೆ ನೀಡಿದ. ಆ ಕಚೇರಿಯಲ್ಲಿ ಇನ್ನೂ ಎಷ್ಟೋ ಮಂದಿ ಹೀಗೆ ಆಶ್ರಯ ಪಡೆದಿದ್ದರು.

ಈ ಅನಿರೀಕ್ಷಿತ ಬೆಳವಣಿಗೆಯಿಂದ ಚೆ ಕಂಗಾಲಾಗಲಿಲ್ಲ. ಸರ್ಕಾರದ ಖರ್ಚಿನಲ್ಲಿ ಅವನನ್ನು ಅರ್ಜೆಂಟೈನಾಕ್ಕೆ ವಾಪಸ್ಸು ಕಳಿಸಲು ರಾಯಭಾರಿ ಸಿದ್ಧನಿದ್ದ. ಕ್ಯೂಬಾದ ಕ್ರಾಂತಿಕಾರಿಗಳು ಮೆಕ್ಸಿಕೋಕ್ಕೆ ಹೋಗುವವರಿದ್ದರಾದ್ದರಿಂದ ತಾನೂ ಅಲ್ಲಿಗೇ ಹೋಗುವುದು ಸೂಕ್ತವೆಂದು ಅವನ ತೀರ್ಮಾನವಾಗಿತ್ತು. ಆದ್ದರಿಂದ ರಾಯಭಾರಿಯು ತಾನೇ ಒಂದು ರೈಲು ಟಿಕೆಟ್ ಕೊಂಡುತಂದು ಚೇನನ್ನು ರೈಲಿನಲ್ಲಿ ಕುಳ್ಳಿರಿಸಿದನು. ಹೋಗುತ್ತಿದ್ದೆಡೆಗಳಲ್ಲಿ ಗ್ವಾಟೆಮಾಲಾ ಆಗಲೇ ಸೈನ್ಯದ ಆಡಳಿತದಲ್ಲಿದ್ದುದನ್ನು ಬಹಿರಂಗಪಡಿಸುತ್ತಿತ್ತು. ಎಲ್ಲಿ ನೋಡಿದರೂ ಸೈನ್ಯದ ತುಕಡಿಗಳು. ರೈಲಿನಲ್ಲಿ ಪಟಾಜೋ ಎಂಬೊಬ್ಬನ ಪರಿಚಯವಾಯಿತು. ಅವನು ಪತ್ರಕರ್ತನಾಗಿದ್ದು ಗ್ವಾಟೆಮಾಲಾದ ಲೇಬರ್ ಪಕ್ಷದವನು. ಮಿಲಿಟರಿ ಆಡಳಿತದ ಕಿರುಕುಳವನ್ನು ತಪ್ಪಿಸಿಕೊಳ್ಳಲು ಅವನೂ ಮೆಕ್ಸಿ

ಕೋಗೆ ಹೊರಟಿದ್ದ. ೧೯೫೪ರ ಸೆಪ್ಟೆಂಬರ್ ೨೧ ರಂದು ಇಬ್ಬರೂ ಮೆಕ್ಸಿಕೋ ನಗರ ತಲುಪಿದರು. ಹೇಗೋ ಮಾಡಿ ಜಾನ್ ಜುಯರ್ಬೆ ಎಂಬ ಪೋರ್ಟೋರಿಕಾದ ಕ್ರಾಂತಿಕಾರನ ಸ್ನೇಹ ಬೆಳೆಸಿ ಅವನ ಮೂಲಕ ಪೆರುವಿನ ಲುಪೋ ಎಂಬ ಯುವಕನನ್ನು ಸಂಧಿಸಿದರು. ಮುಂದಿನ ದಿನಗಳಲ್ಲಿ ಆತ ಕ್ಯೂಬಾದ ಕ್ರಾಂತಿಯ ಹೋರಾಟಗಾರನಾದ, ತನ್ನ ದೇಶದ ವಿಮೋಚನೆಗಾಗಿ ಸಶಸ್ತ್ರ ಹೋರಾಟ ನಡೆಸಿದ.

ಹೊಟ್ಟೆಹೊರೆಯಲು ಚೆ ಒಂದು ಕ್ಯಾಮರಾ ಹಿಡಿದು ಮೆಕ್ಸಿಕೋದ ಉದ್ಯಾನವನಗಳಲ್ಲಿ ಅಲೆದು ತಾಯಂದಿರನ್ನು ಒಲಿಸಿ ಅವರ ಮಕ್ಕಳ ಛಾಯಾಚಿತ್ರ ತೆಗೆಯುವ ಕೆಲಸಕ್ಕೆ ಕೈ ಹಚ್ಚಿದ. ಪಟಾಜೋ ಸಹ ಅವನ ಜೊತೆಗಿರುತ್ತಿದ್ದ. ಅರ್ಬೆಂಜ್ ಪತನಕ್ಕೆ ಹೇಗೆ ಅಮೆರಿಕಾದ ಸಾಮ್ರಾಜ್ಯಶಾಹಿ ಧೂರ್ತತನ ಕಾರಣವಾಗಿತ್ತೆಂದು ಪ್ರತ್ಯಕ್ಷ ದರ್ಶಿಯಾಗಿದ್ದ ಚೆ ಪತ್ರಿಕೆಗಳಿಗೆ ಲೇಖನ ಬರೆದ. ಆದರೆ ಪ್ರತಿಕಾರ್ಕರ್ತನ ಕೆಲಸ ಸಿಗಲಿಲ್ಲ. ಇದೇ ಸಮಯಕ್ಕೆ ಹಿಲ್ಡಾ ಗ್ವಾಟೆಮಾಲಾದಿಂದ ಬಂದು ಚೇನನ್ನು ಕೂಡಿಕೊಂಡಳು. ಆಗಲೇ ಅವರ ಮದುವೆಯಾದದ್ದು. ಮತ್ತೆ ಪುಸ್ತಕಗಳ ಮಾರಾಟಕ್ಕೆ ಸಿದ್ಧನಾದ. ಪ್ರಕಾಶಕರೊಡನೆ ಜಗಳ ಮಾಡಿದ್ದಾಯಿತೇ ವಿನಾ ಪುಸ್ತಕ ವ್ಯಾಪಾರಿಯಾಗಿ ಚೆ ಸಫಲನಾಗಲಿಲ್ಲ. ತನ್ನ ವೈದ್ಯಕೀಯ ಪದವಿಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯದಲ್ಲಿ ಕೆಲವು ಉಪನ್ಯಾಸ ನೀಡಿದ್ದು, ಸ್ಥಳೀಯ ಆಸ್ಪತ್ರೆಯೊಂದರಲ್ಲಿ ಕೆಲಕಾಲದ ಮಟ್ಟಿಗೆ ನೌಕರಿ ಗಿಟ್ಟಿಸಿಕೊಂಡಿದ್ದು ಆ ಕಾಲದ ಇತರ ಘಟನೆಗಳು.

೧೯೫೬ರ ಫೆಬ್ರುವರಿಯಲ್ಲಿ ಹಿಲ್ಡಾ ಹೆಣ್ಣುಮಗುವೊಂದನ್ನು ಹೆತ್ತಳು. ಅದಕ್ಕೆ ಹಿಲ್ಡಾ ತಾಯಿಯ ಹೆಸರು. ಪೌರತ್ವ ಮೆಕ್ಸಿಕೋದ್ದು. ತಂದೆ ಅರ್ಜೆಂಟೈನಾದವನು. ತಾಯಿ ಪೆರುವಿನವಳು. ಆ ಎರಡು ದೇಶಗಳಲ್ಲಿ ಒಂದೆರ ಪೌರತ್ವವನ್ನು ದಾಖಲು

ಮಾಡಿಸಬಹುದಿತ್ತು. ಆದರೆ ಚೇಯ ಅಂತರರಾಷ್ಟ್ರೀಯ ಮನೋಭಾವ ಗಾಢವಾಗಿದ್ದುದರಿಂದ ಮಗುವಿಗೆ ಹುಟ್ಟಿದೂರಿನ ಪೌರತ್ವವನ್ನೇ ದಾಖಲು ಮಾಡಿಸಿದರು. ಆಶ್ರಯ ನೀಡಿದ್ದ ದೇಶಕ್ಕೆ ಗೌರವ ನೀಡಿದ ಬಗೆ ಅದು.

ಮೂರು ವರ್ಷಗಳ ನಂತರ. ಅಂದರೆ ೧೯೫೯ರ ಜೂನ್‌ನಲ್ಲಿ ಚೆ ಎರಡನೆಯ ಮದುವೆ ಮಾಡಿಕೊಂಡ, ಆಗ್ಗೆ ಅತ ಕ್ಯೂಬಾದ ಹೋರಾಟದಲ್ಲಿ ಯಶಸ್ಸು ಗಳಿಸಿ ವಿಖ್ಯಾತನಾಗಿದ್ದ ಮತ್ತು ನಾಲ್ಕು ತಿಂಗಳ ಮುನ್ನ ಆ ದೇಶದ ಪೌರತ್ವದಿಂದ ಗೌರವಿಸಲ್ಪಟ್ಟಿದ್ದ. ಎಸ್ಕಾಂಬ್ರೆ ಎಂಬಲ್ಲಿ ಗೆರಿಲ್ಲಾ ಯುದ್ಧದಲ್ಲಿ ತನ್ನೊಡನೆ ಪಾಲ್ಗೊಂಡಿದ್ದ ಅಲೇಡಾ ಮಾರ್ಚ್‌ಳನ್ನು ಚೆ ವಿವಾಹವಾದದ್ದು, ಮೆಕ್ಸಿಕೋದಿಂದ ಗ್ರಾನ್ಮಾದಲ್ಲಿ ಅವನು ಕ್ಯೂಬಾಕ್ಕೆ ತೆರಳಿದಾಗ ಹಿಲ್ಡಾ ಮಗುವಿನ ಜೊತೆ ಪೆರುವಿಗೆ ಹಿಂದಿರುಗಿದ್ದಳು. ಅಲೇಡಾ ನಾಲ್ಕು ಮಕ್ಕಳ ತಾಯಿಯಾಗಿದ್ದಾಗ ೧೯೬೬ರಲ್ಲಿ ಚೆ ಮತ್ತೆ ಬೊಲಿವಿಯಾದತ್ತ ಪ್ರಯಾಣ ಬೆಳೆಸಿದ್ದ.

ಅಧ್ಯಾಯ ೩

ಸುತ್ತಾಟ

ದಕ್ಷಿಣ ಅಮೆರಿಕಾದ ಸ್ಥಿತಿಗತಿಗಳನ್ನು ಚೆನ್ನಾಗಿ ತಿಳಿದುಕೊಳ್ಳಲು ಆ ಖಂಡದ ಬಹುತೇಕ ರಾಷ್ಟ್ರಗಳಿಗೆ ಪ್ರತ್ಯಕ್ಷವಾಗಿ ಭೇಟಿ ನೀಡಿ ಎಲ್ಲವನ್ನೂ ವ್ಯಾಪಕವಾಗಿ ಗ್ರಹಿಸಿದ ಚೆ ಗೆವಾರ ಒಂದು ರೀತಿಯಲ್ಲಿ ಆ ಇಡೀ ಖಂಡದ ಶಿಶು ಎನ್ನಬಹುದು. ಸುತ್ತಾಡುವುದು ಚೇಗೆ ಒಂದು ಸಾಹಸದಂತಿತ್ತು, ತೃಷೆಯಾಗಿತ್ತು. ಎಷ್ಟು ಬಾರಿ ಸುತ್ತಾಡಿ ಬಂದರೂ ಮತ್ತೆ ಮತ್ತೆ ಹೊರಹೋಗಬೇಕೆಂಬ ಲಾಲಸೆ ಆತನದು.

ಮೊದಲ ಸಾರಿ ಆತ ಹಾಗೆ ಪ್ರಯಾಣಿಸಿದ್ದು ತೈಲ ನೌಕೆಯೊಂದರಲ್ಲಿ ಟ್ರಿನಿಡಾಡ್ ಮತ್ತು ಬ್ರಿಟಿಷ್ ಗಯಾನಾಗಳಿಗ, ೧೯೫೦ರಲ್ಲಿ. ಅದರ ಮುಂದಿನ ವರ್ಷದಲ್ಲಿ ಆಲ್ಬರ್ಟೊ ಗ್ರಾನಡೋಸ್ ಜೊತೆ ನಾಲ್ಕು ದೇಶಗಳಿಗೆ ಭೇಟಿ ನೀಡಿದ. ಅವರು ಹೊರಟಿದ್ದು ೧೯೫೧ರ ಡಿಸೆಂಬರ್ ೨೯ರಂದು. ಒಂದು ದ್ವಿಚಕ್ರವಾಹನದಲ್ಲಿ. ಒಂದು ಗುಡಾರದ ಸಲಕರಣೆ ಹೊದಿಕೆಗಳು, ಕ್ಯಾಮರಾ, ಒಂದು ಸ್ವಯಂಚಾಲಿತ ಪಿಸ್ತೂಲು, ಇವಷ್ಟೇ ಅವರ ಆಸ್ತಿ. ಚಿಂಚಿನಾ ಯಾವುದೋ ಉಡುಪನ್ನು ತಂದು ಕೊಡಬೇಕೆಂದು ಕೇಳಿ ಹದಿನೈದು ಡಾಲರ್ ಕೊಟ್ಟಿದ್ದಳು. ಮೊದಲು ಚಿಲಿಗೆ ಪ್ರಯಾಣ. ದಾರಿಯಲ್ಲಿ ಕೆಲವು ಪಶುಪಾಲನಾ ಕ್ಷೇತ್ರಗಳಿಗೆ ಭೇಟಿ. ಈ ಮೆಂಡೋಜಾ ಪ್ರಾಂತ್ಯದಲ್ಲೇ ಚೆ ಹುಡುಗನಾಗಿದ್ದಾಗ

ಇದ್ದದ್ದು, ಕುದುರೆ ಪಳಗಿಸುವುದು ಮತ್ತು ಪಶುಸಂಗೋಪನೆಯ ಉದ್ಯೋಗದವರ ಜೀವನಕ್ರಮ ಇಲ್ಲಿ ಪರಿಚಯವಾಯಿತು. ಆಮೇಲೆ ದುರ್ಗಮವಾದ ಆಂಡೀಸ್ ಪರ್ವತಶ್ರೇಣಿಯನ್ನು ತಪ್ಪಿಸಿ ಅದರ ತಪ್ಪಲಲ್ಲೇ ಹರಿದಾಡಿ ಹೊಲ, ಕಾಡು-ಮೇಡುಗಳ ಪರಿಚಯ ಮಾಡಿಕೊಂಡರು. ಇದ್ದ ಹಣವೆಲ್ಲಾ ಖಾಲಿಯಾದ ಮೇಲೆ ದಾರಿಯ ಭೋಜನಶಾಲೆಗಳಲ್ಲಿ ಪಾತ್ರೆ ತೊಳೆದು ಊಟ ಗಿಟ್ಟಿಸಿಕೊಂಡರು. ಹಾಗಿಲ್ಲದಿದ್ದಾಗ ವೈದ್ಯಕೀಯ ಅಥವಾ ಕೂಲಿ-ನಾಲಿ ಮಾಡಿ ಹೊಟ್ಟೆ ಹೊರೆದರು. ಅಲ್ಲಲ್ಲಿ ಕುಷ್ಠರೋಗಿಗಳ ವಸತಿಗಳಿಗೆ ಭೇಟಿ.

ಈ ವಸತಿಗಳಿಗೆ ಭೇಟಿ ನೀಡಿದ್ದು ಒಂದು ಅಪೂರ್ವಾನುಭವ ನೀಡಿತು. ಆಲ್ಬರ್ಟೊ ತನ್ನ ಮುಂದಿನ ಜೀವನವಿಧಾನವನ್ನು ಕಂಡುಕೊಳ್ಳಲು ಇದು ಅನುಕೂಲ ಮಾಡಿಕೊಟ್ಟಿತು. ಚೇಗೆ ತನ್ನ ವೈದ್ಯಕೀಯ ಜ್ಞಾನವನ್ನು ವಿಸ್ತಾರಗೊಳಿಸಿಕೊಳ್ಳಲು ಮತ್ತು ಕುಷ್ಠರೋಗಿಗಳೊಡನೆ ಸಂಯಮದಿಂದ ಬೆರೆಯಲು ಇದು ಕಲಿಸಿಕೊಟ್ಟಿತು. ಅವರ ಬಗ್ಗೆ ಅಪಾರವಾದ ಸಹಾನುಭೂತಿ ಅವನಲ್ಲಿ ಮೊಳಕೆ ಹೊಡೆಯಿತು.

೧೯೫೨ರ ಫೆಬ್ರವರಿ ೧೮ ರಂದು ಅವರು ಚಿಲಿಯಲ್ಲಿ ಟೆಮುಕು ನಗರವನ್ನು ತಲುಪಿದಾಗ ಅಲ್ಲಿಯ ಸ್ಥಳೀಯ ಪತ್ರಿಕೆಯೊಂದು ಈ ಇಬ್ಬರು ಪ್ರವಾಸಿಗರ ಬಗ್ಗೆ ಒಂದು ಲೇಖನ ಪ್ರಕಟಿಸಿತು. "ಕುಷ್ಠರೋಗ ತಜ್ಞರ ಪ್ರವಾಸ" ಎಂಬ ಶೀರ್ಷಿಕೆಯ ಈ ಲೇಖನದಲ್ಲಿ ಅವರನ್ನು ಜೀವರಸಾಯನ ಶಾಸ್ತ್ರತಜ್ಞ ಮತ್ತು ಔಷಧ ಶಾಸ್ತ್ರ ತಜ್ಞ ಎಂದು ಬಣ್ಣಿಸಲಾಗಿತ್ತು. ಹಲವು ಕುಷ್ಠರೋಗ ವಸತಿಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ರೋಗಿಗಳನ್ನು ನೋಡಿ ಬಂದಿದ್ದ ಇವರು ಬ್ರೆಜಿಲ್ ದೇಶಕ್ಕೂ ಭೇಟಿ ನೀಡಿದ್ದರೆಂದು ಲೇಖನದಲ್ಲಿ ಹೇಳಲಾಗಿತ್ತು. ವಾಸ್ತವವಾಗಿ ಈ ಈರ್ವರು ಎಂದೂ ಬ್ರೆಜಿಲ್‌ಗೆ ಹೋಗಿರಲಿಲ್ಲ. ಟೆಮುಕು

ನಂತರ ದ್ವಿಚಕ್ರವಾಹನವನ್ನು ಬಿಸಾಡಿ ರೈಲು, ಜಹಜುಗಳಲ್ಲಿ ಪ್ರಯಾಣ ಮುಂದುವರಿಸಲು ಸಿದ್ಧರಾಗಬೇಕಾಯಿತು.

ಮೊದಲು ಚುಕ್ವಿ ಕಮಾಟ ತಾಮ್ರದ ಗಣಿಗೆ ನಡೆದುಹೋದರು, ಅಲ್ಲಿಂದ ಪೆರುವಿನತ್ತ ಪ್ರಯಾಣ ಬೆಳೆಸಿ ಅಲ್ಲಿಯ ದಟ್ಟದರಿದ್ರರ ಜೀವನವನ್ನು ಕಂಡರು. ಈ ದೇಶದ ಬಡಜನ ಹಸಿವು ಇಂಗಿಸಿ ಕೊಳ್ಳಲು ಕೋಕೋ ಎಲೆಗಳನ್ನು ತಿನ್ನುತ್ತಿದ್ದುದನ್ನು ಕಂಡು ಚೆ ವಿಸ್ಮಿತನಾದ. ಆ ಎಲೆಗಳು ಹಸಿವು ಇಂಗಿಸುತ್ತವೆ, ನಿಜ; ಆದರೆ ಅವು ನಿಧಾನ ವಿಷದಂತೆ ಪರಿಣಾಮ ಉಂಟುಮಾಡುತ್ತವೆ. ಪ್ರಾಚೀನ ಇಂಕಾ ನಾಗರಿಕತೆಯ ಪರಿಚಯವೂ ಪ್ರವಾಸಿಗರಿಗೆ ಇಲ್ಲಿ ಲಭಿಸಿತು. ಚೆ ಸ್ಥಳೀಯ ಗ್ರಂಥಭಂಡಾರದಲ್ಲಿ ಗಂಟೆಗಟ್ಟಲೆ ಕೂತು ಇಂಕಾ ಸಂಸ್ಕೃತಿಗೆ ಸಂಬಂಧಿಸಿದ ಪುಸ್ತಕಗಳ ಅಧ್ಯಯನದಲ್ಲಿ ತೊಡಗಿದ. ನಂತರ ಮಾಚು ಪಿಚ್ಚುವಿನ ಅವಶೇಷಗಳನ್ನು ನೋಡಲು ಇಬ್ಬರೂ ಕುತೂಹಲದಿಂದ ತೆರಳಿದರು. ಚಿಲಿಯ ಪ್ಯಾಬ್ಲೊ ನೆರುಡಾ ಈ ಅವಶೇಷಗಳನ್ನು ಕುರಿತು ರಚಿಸಿರುವ ಕಾವ್ಯವನ್ನು ಚೆ ಓದುತ್ತಾ ಭಾವಪರವಶನಾದ.

ಮಾಚು ಪಿಚ್ಚುವಿನಿಂದ ಹ್ಯೂಂಬೋ ಕಡೆ ಪ್ರಯಾಣ ಬೆಳೆಸಿ ಅಲ್ಲಿಯ ಕುಷ್ಠರೋಗಿಗಳ ಕಾಲೋನಿ ತಲುಪಿದರು. ಅದನ್ನು ಸಂಯೋಜಿಸಿದ್ದವರು ಪೆರುವಿನ ಕಮ್ಯುನಿಸ್ಟ್ ಪಕ್ಷದ ಡಾ॥ ಹ್ಯೂಗೋ ಪೆಶ್ಚೆ ಎಂಬವರು. ಅವರೊಡನೆ ಚೆ ಅನೇಕ ವಿಷಯಗಳನ್ನು ಚರ್ಚಿಸಿ ಅಲ್ಲಿಂದ ಸ್ಯಾನ್ ಪ್ಯಾಬ್ಲೋ ಬಳಿಯ ಇನ್ನೊಂದು ಕುಷ್ಠರೋಗಿಗಳ ತಾಣಕ್ಕೆ ಭೇಟಿ ಕೊಡಲು ಉತ್ಸುಕನಾದ. ಅದಕ್ಕಾಗಿ ಅಮೆಜಾನ್ ನದಿಯ ದಂಡೆಯ ಮೇಲಿದ್ದ ಈಕ್ವಿಟಾಸ್ ಎಂಬ ಬಂದರಿಗೆ ಹಡಗಿನಲ್ಲಿ ಹೋಗಬೇಕಾಯಿತು; ಆ ಊರನ್ನು ತಲುಪಿದ್ದೇ ತಡ ಚೆ ತನ್ನ ಆಸ್ತಮಾದಿಂದ ಬಳಲಿದ. ಕಡೆಗೆ ಅಲ್ಲಿಯ ಆಸ್ಪತ್ರೆಯಲ್ಲಿ ದಾಖಲಾಗ ಬೇಕಾಯಿತು ಕೂಡ. ಅಲ್ಲಿ ಪಡೆದ ವಿಶ್ರಾಂತಿಯಿಂದ ಆತ ಚೇತರಿಸಿ ಕೊಂಡು ಪ್ರಯಾಣ ಮುಂದುವರಿಸಲು ಶಕ್ತನಾದ.

ಮುಂದೆ ಅವರ ಭೇಟಿ ಸ್ಯಾನ್ ಪ್ಯಾಬ್ಲೋ ಬಳಿಯ ಕುಷ್ಠರೋಗಿಗಳ ಚಿಕಿತ್ಸಾ ಕೇಂದ್ರಕ್ಕೆ. ಶುಶ್ರೂಷೆ ಮತ್ತು ಪ್ರಯೋಗಗಳಲ್ಲಿ ತೊಡಗಲು ಚೇಗೆ ಅಲ್ಲಿಯ ವೈದ್ಯರು ಅನುವು ಮಾಡಿಕೊಟ್ಟರು. ರೋಗಿಗಳ ಒಂದು ತಂಡ ರಚಿಸಿ ಅವರಿಗೆ ಕಾಲ್ಚೆಂಡಿನ ಆಟದಲ್ಲಿ ತರಬೇತಿ ನೀಡಲು ಚೆ ಮುಂದಾದ. ಹಲವು ದಿನಗಳ ಕಾಲ ಇಲ್ಲಿ ತಂಗಿದ್ದ ನಂತರ ೧೯೫೨ರ ಜೂನ್ ೨೧ರಂದು ಅಮೆಜಾನ್ ನದಿಯ ಮೇಲೆ ತೆಪ್ಪವೊಂದರಲ್ಲಿ ಕೆಳಹರಿವಿನೊಂದಿಗೆ ಕೊಲಂಬಿಯಾದ ಲೆಟೀಸಿಯಾ ಎಂಬ ಬಂದರಿನತ್ತ ಪ್ರಯಾಣ ಬೆಳೆಸಿದರು. ಕೈಯಲ್ಲಿ ಪುಡಿಗಾಸೂ ಇಲ್ಲದೆ ಕೊಳಕು ಬಟ್ಟೆಗಳಲ್ಲಿದ್ದ ಇವರನ್ನು ಕಂಡ ಪೊಲೀಸರಿಗೆ ಗುಮಾನಿ ಉಂಟಾಗಿ ಇಬ್ಬರನ್ನೂ ಕೂಡಲೆ ಸೆರೆಮನೆಗೆ ದಬ್ಬಿದರು. ಇಬ್ಬರೂ ಅರ್ಜೆಂಟೈನಾದ ಕಾಲ್ಚೆಂಡಾಟದ ಪ್ರಸಿದ್ಧಿಯಿಂದಾಗಿ ಹೇಗೋ ಸೆರೆಮನೆಯಿಂದ ಹೊರಬಂದರು. ಇವರು ಸಿಕ್ಕಿಬಿದ್ದಿದ್ದ ನಗರದ ಪೊಲೀಸ್ ಅಧಿಕಾರಿಗೆ ಈ ಆಟದಲ್ಲಿ ವಿಪರೀತ ವ್ಯಾಮೋಹ. ತನ್ನ ಜಿಲ್ಲೆಯ ತಂಡಕ್ಕೆ ತರಬೇತಿ ನೀಡುವುದಾದರೆ ಅವರನ್ನು ಬಿಡುಗಡೆ ಮಾಡಲು ಸಿದ್ಧನಿರುವುದಾಗಿ ಆತ ತಿಳಿಸಿದ. ಜಿಲ್ಲಾ ಸ್ಪರ್ಧೆಗಳಲ್ಲಿ ಈ ತಂಡ ಜಯಗಳಿಸಿತು. ಪೊಲೀಸ್ ಅಧಿಕಾರಿಗೆ ಎಲ್ಲಿಲ್ಲದ ಸಂತೋಷ. ಇಬ್ಬರಿಗೂ ಕೊಲಂಬಿಯಾದ ರಾಜಧಾನಿ ಬೊಗೋಟಾಕ್ಕೆ ವಿಮಾನದ ಟಿಕೆಟ್ಟುಗಳನ್ನು ಕೊಂಡುಕೊಟ್ಟ.

ಆಗ್ಗೆ ಕೊಲಂಬಿಯಾದ ಉನ್ಮತ್ತ ಅಧ್ಯಕ್ಷ ಲಾರಿನೋ ಗೋಮೆಜ್ ಇಡೀ ದೇಶದಲ್ಲಿ ಹಿಂಸೆಯ ಪ್ರವಾಹ ಹರಿಸಿದ್ದ. ರೈತಾಪಿ ಜನ ಸಂಘಟಿತರಾಗಿದ್ದುದು ಅವನಿಗೆ ಹುಚ್ಚು ಹಿಡಿಸಿತ್ತು. ಎಲ್ಲೆಲ್ಲೂ ರೈತಜನ ಅಪರಾಧಿಗಳಾಗಿ ಸೆರೆಮನೆಗಳನ್ನು ತುಂಬಿದ್ದರು. ಈ ಅಮಾಯಕ ಪ್ರವಾಸಿಗರೂ ಬೇಗನೆ ಸೆರೆಮನೆಗೆ ದೂಡಲ್ಪಟ್ಟರು. ದೇಶವನ್ನು ಬಿಟ್ಟು ಹೊರಡುವುದಾಗಿ ಆಶ್ವಾಸನೆ ನೀಡಿದಾಗ ಮಾತ್ರವೇ ಅವರ ಬಿಡುಗಡೆ ಸಾಧ್ಯವಿತ್ತು. ದೇಶದಲ್ಲೇ ಉಳಿದು ರೈತಸಂಘಟನೆಗೆ

ಕುಮ್ಮಕ್ಕು ನೀಡಬಹುದೆಂಬ ಭೀತಿ ಇಂತಹ ಆಶ್ವಾಸನೆಯನ್ನು ಅಗತ್ಯ ಗೊಳಿಸಿತ್ತು.

ಬಸ್ಸಿನಲ್ಲಿ ಪ್ರಯಾಣ ಮಾಡಿ ಪಕ್ಕದ ವೆನಿಝುಲಾದ ಗಡಿಯನ್ನು ದಾಟಿ ಸ್ಯಾನ್ ಕ್ರಿಸ್ಟೋಬೆಲ್ ತಲುಪಿದರು. ನಂತರ ಜುಲೈ ೧೪ ರಂದು ರಾಜಧಾನಿ ಕಾರಕಾಸ್ ಅನ್ನು ಮುಟ್ಟಿದರು. ಅಲ್ಲಿಯ ಕುಷ್ಠರೋಗಿಗಳ ಕಾಲೋನಿಯಲ್ಲಿ ಅಲ್ಬರ್ಟೋ ಗ್ರಾನಡೋಸ್ ಕೆಲಸ ಮಾಡಲು ನಿಶ್ಚಯಿಸಿ ತಾನು ಅಲ್ಲೇ ಉಳಿಯುವುದಾಗಿ ಹೇಳಿದ: ಅಲ್ಲೇ ಆತ ಜೂಲಿಯಾ ಎಂಬಾಕೆಯನ್ನು ಭೇಟಿಯಾಗಿದ್ದುದು ಇದಕ್ಕೆ ಇನ್ನೊಂದು ಕಾರಣವಾಗಿತ್ತು.

ಗ್ರಾನಡೋಸ್ ಮತ್ತು ಚೆ ಇಬ್ಬರೂ ಪರಸ್ಪರ ಸ್ನೇಹಮಯಿಗಳಾಗಿದ್ದರೂ, ಪ್ರವಾಸ ಮಧ್ಯದಲ್ಲಿ ಆಗಾಗ್ಗೆ ಅವರ ನಡುವೆ ಘರ್ಷಣೆಗಳು ಉಂಟಾಗುತ್ತಿದ್ದವು. ಈಗ ಅಂತಿಮ ಘರ್ಷಣೆಯು ಘಟ್ಟ ಬಂದಿತ್ತು. ಒಬ್ಬನೇ ಅರ್ಜೆಂಟೈನಾಕ್ಕೆ ಹಿಂದಿರುಗಬೇಕಾಗಿದ್ದ ಚೆ ಕೋಪಗೊಂಡು ಬಿರುಸಿನ ಮಾತುಗಳನ್ನಾಡಿದ. ಕಡೆಗೆ ಎಂದಿನಂತೆ ಘರ್ಷಣೆಯು ಮೈತ್ರಿಯಲ್ಲೇ ಕೊನೆಗೊಂಡಿತು. ಕಾರಕಾಸ್‌ನಲ್ಲಿ ದೂರದ ಸಂಬಂಧಿಯೊಬ್ಬನನ್ನು ಚೆ ಭೇಟಿಯಾದ. ಆತನ ಕಸುಬು ಕುದುರೆಗಳನ್ನು ಬೆಳೆಸಿ ಮಾರುವುದು. ಒಳ್ಳೆಯ ತಳಿಯ ಕುದುರೆಗಳು ಆತನಿಂದ ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಸಹ ರವಾನೆಯಾಗುತ್ತಿದ್ದವು. ಅಲ್ಲಿ ಕೊಂಡ ಕುದುರೆಗಳನ್ನು ವೆನಿಝುಲಾಕ್ಕೆ ತಲುಪಿಸುತ್ತಿದ್ದ. ಮೊರಾಕೈಬೋ ವೆನಿಝುಲಾದ ಒಂದು ನಗರ. ಕಾರಕಾಸ್‌ನಿಂದ ಮಿಯಾಮಿಗೆ ಹೋಗಿ ಅಲ್ಲಿಂದ ಮೊರಾಕೈಬೋ ಮತ್ತು ಬೋನಸ್ಐರಿಸ್‌ಗೆ ಅವನ ವಿಮಾನ ತೆರಳುವುದು ರೂಢಿಯಾಗಿತ್ತು. ಕುದುರೆಗಳೊಟ್ಟಿಗೆ ಪ್ರಯಾಣಿಸಲು ಚೇಗೆ ಆತನಿಂದ ಆಹ್ವಾನ ಬಂತು. ಹೀಗಾಗಿ ಜುಲೈ ಅಂತ್ಯದ ವೇಳೆಗೆ ಗ್ರಾನಡೋಸ್‌ನನ್ನು ಹಿಂದೆ ಬಿಟ್ಟು ಚೆ ಒಬ್ಬನೇ ತನ್ನ ನಾಡಿಗೆ ಹಿಂದಿರುಗಿದ.

ಅಮೆರಿಕಾ ಸಂಯುಕ್ತ ಸಂಸ್ಥಾನದ ಮಿಯಾಮಿಗೆ ಅದೇ ಚೆ ಕೊಟ್ಟ ಮೊದಲ ಭೇಟಿ. ವೈದ್ಯಕೀಯ ಪದವಿ ಪಡೆದು ಮತ್ತೆ ಕಾರಕಾಸ್‌ನ ಕುಷ್ಠರೋಗಿಗಳ ತಾಣಕ್ಕೆ ಹಿಂದಿರುಗುವ ಭರವಸೆ ಇಟ್ಟುಕೊಂಡು ಚೆ ಅರ್ಜೆಂಟೈನಾಕ್ಕೆ ಹಿಂದಿರುಗಿದ್ದ. ೧೯೫೩ರಲ್ಲಿ ಪದವಿಯನ್ನೇನೋ ಪಡೆದ. ಆದರೆ ವೆನಿಜುವಲಾಕ್ಕೆ ಸೇವೆ ಸಲ್ಲಿಸಲು ತೆರಳಲಿಲ್ಲ. ಬದಲಾಗಿ ಆತನ ಅಲೆದಾಟದ ಗುಂಗು ಎರಡನೆ ಬಾರಿಗೆ ದಕ್ಷಿಣ ಅಮೆರಿಕಾದ ಹಲವು ದೇಶ ಗಳಿಗೆ ಆತನನ್ನು ಕೊಂಡೊಯ್ಯಿತು. ಕಾರಕಾಸಿಗೆ ಹೋಗಿದ್ದರೆ ಒಳ್ಳೆಯ ಸಂಬಳದೊಂದಿಗೆ ವೈದ್ಯನ ಹುದ್ದೆ ಅವನಿಗಾಗಿ ಕಾಯುತ್ತಿತ್ತು. ಆತನ ಆಸಕ್ತಿಯು ಬೇರೆ ರೀತಿಯ ಸಾಮಾಜಿಕ ಶಸ್ತ್ರಚಿಕಿತ್ಸೆಯ ಕಡೆಗೆ ವಾಲಿತ್ತು. ಅಲ್ಬರ್ಟೊ ಗ್ರಾನಡೋಸ್ ಆತನನ್ನು ಮತ್ತೆ ನೋಡಿದ್ದು ೧೯೬೦ರ ಅಂತ್ಯದಲ್ಲಿ, ಸ್ವತಂತ್ರ ಕ್ಯೂಬಾದ ರಾಜಧಾನಿ ಹವಾನದಲ್ಲಿ ಆಗ ಚೆ ಒಬ್ಬ ಮಂತ್ರಿ. ಆದರೆ ಮೊದಲಿನಂತೆ ನಿಗರ್ವಿ, ಸ್ನೇಹಮಯಿ, ಮತ್ತು ಸಂಭಾಷಣಾ ಚತುರ. ಪ್ರಸ್ತುತ, ಹೊಗೇಸೊಪ್ಪು, ಮತ್ತು ಚದುರಂಗದಾಟಗಳನ್ನು ಬಿಟ್ಟು ಬೇರೆ ಹವ್ಯಾಸಗಳೇ ಆತನಿಗೆ ಕೂಡಿ ಬಂದಿರಲಿಲ್ಲ.

ಎರಡನೆಯ ಬಾರಿ ದಕ್ಷಿಣ ಅಮೆರಿಕಾದಲ್ಲಿ ಸಂಚಾರ ಹೊರಟಾಗ ಚೆ ಪ್ರವಾಸ ಮಾಡಿದ ರಾಷ್ಟ್ರಗಳೆಂದರೆ ಮುಂದೆ ಆತನ ಕಾರ್ಯಕ್ಷೇತ್ರ ವಾಗಲಿದ್ದ ಬೊಲಿವಿಯ, ಹಿಂದಾಗಲೆ ಸಂಚರಿಸಿದ್ದ ಪೆರು ಹಾಗೂ ಕೊಲಂಬಿಯಾ. ಮತ್ತು ಹೊಸದಾಗಿ ಭೇಟಿ ನೀಡಿದ ಈಕ್ವೆಡಾರ್, ಪನಾಮಾ ಕೋಸ್ಟರೀಕ, ಮತ್ತು ಮೆಕ್ಸಿಕೊ. ಅಲ್ಲಿಂದ ಆತ ಹೋಗಿದ್ದು ಕ್ಯೂಬಾಕ್ಕೆ. ಇದೇ ಸಮಯದಲ್ಲಿ ಆತ ಗ್ವಾಟೆಮಾಲಾದಲ್ಲಿ ಅರ್ಬೆಂಜ್ ಸರ್ಕಾರದ ಪರವಾಗಿ ಈಗಾಗಲೆ ಪ್ರಸ್ತಾಪಿಸಿದ್ದಾಗಿದೆ.

ಬೊಲಿವಿಯಾಕ್ಕೆ ಚೆ ಮೊದಲು ಭೇಟಿ ನೀಡಿದ್ದು ೧೯೫೩ರಲ್ಲಿ. ಆಮೇಲೆ ಹೋದದ್ದು ಮತ್ತೆ ನವೆಂಬರ್ ೧೯೬೬ರಲ್ಲಿ. ಆ ದೇಶವು ಆತನ ಮೇಲೆ ಅಗಾಧವಾದ ಪ್ರಭಾವ ಬೀರಿತು. ದಕ್ಷಿಣ ಅಮೆರಿಕಾದ ರಾಷ್ಟ್ರ

ಗಳ ಎಲ್ಲ ಸಮಸ್ಯೆಗಳಿಗೂ ಕನ್ನಡಿ ಹಿಡಿಯುವಂತಿದ್ದುದು ಈ ದೇಶ. ಅಲ್ಲಿಯ ಜನಜೀವನ ಹಾಗೂ ಆರ್ಥಿಕ ವಿಷಮತೆಗಳನ್ನು ಕಣ್ಣಾರೆಕಂಡು ಹೆಚ್ಚಿನ ತಿಳುವಳಿಕೆ ಪಡೆಯುವುದು ಚೆ ಉದ್ದೇಶವಾಗಿತ್ತು. ಆ ತಿಳುವಳಿಕೆಯನ್ನಾಧರಿಸಿ ಕಾರ್ಯಪ್ರವೃತ್ತನಾಗಲು ಆತ ಬಯಸಿದ್ದ. ಹಿಂದಿನ ಬಾರಿ ಭೇಟಿ ನೀಡಿದ್ದ ರಾಷ್ಟ್ರಗಳಲ್ಲಿನ ವಿದ್ಯಮಾನಗಳು ಅವನ ಕಣ್ಣು ತೆರೆಸಿದ್ದವು. ಆ ಪರಿಸ್ಥಿತಿಗೆ ಮೂಲಕಾರಣವನ್ನು ಶೋಧಿಸುವುದು ಈಗಿನ ಭೇಟಿಯಲ್ಲಿ ಆದ್ಯತೆ ಪಡೆಯಲಿತ್ತು.

ಬೊಲಿವಿಯಾದ ರಾಜಧಾನಿ ಲಾ ಪಾಜ್. ಅಲ್ಲಿಗೆ ಚೆ ಹೊರಟದ್ದು ರೈಲಿನಲ್ಲಿ. ದಾರಿಯುದ್ದಕ್ಕೂ ದೇಶದ ಪರಿಚಯವನ್ನು ಆಮೂಲಾಗ್ರವಾಗಿ ಪಡೆಯಲು ಇದು ಸಹಾಯಕವಾಗಲಿತ್ತು. ಅಲ್ಲಿಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂಪತ್ತಿಗಿಂತಲೂ ಮಿಗಿಲಾಗಿ ಆತನನ್ನು ಆಕರ್ಷಿಸಿದ್ದು ಆಗ್ಗೆ ಜರುಗುತ್ತಿದ್ದ ರಾಜಕೀಯ ಘಟನೆಗಳು ಮತ್ತು ಅವುಗಳಿಂದಾಗಿ ಜನಸಾಮಾನ್ಯರ ಮೇಲೆ ಆಗುತ್ತಿದ್ದ ಪರಿಣಾಮ. ಬೊಲಿವಿಯಾ ಸಂಪದ್ಭರಿತವಾದ ದೇಶ. ಎಣ್ಣೆ, ಖನಿಜಗಳು, ಮತ್ತು ಕಾಡು ಅಲ್ಲಿಯ ಅತಿಮುಖ್ಯ ಸಂಪನ್ಮೂಲ. ಅದನ್ನು ರೂಢಿಸಿಕೊಂಡು ಲಾಭ ಪಡೆಯುತ್ತಿದ್ದವರು ಮಾತ್ರ ಹೊರಗಿನವರು. ಹೀಗಾಗಿ ಕಡು ಬಡತನ ಅತಿಹೆಚ್ಚು ಜನರ ಪಾಲಿಗೆ ಬಂದಿದ್ದ ದುರಂತವಾಗಿತ್ತು. ಸಂಪತ್ತು ದೋಚುವವರ ಪ್ರತಿನಿಧಿಗಳನ್ನು ಬಿಟ್ಟರೆ ಹೊರಗಿನಿಂದ ಬೊಲಿವಿಯಕ್ಕೆ ಬರುತ್ತಿದ್ದವರ ಸಂಖ್ಯೆ ವಿರಳ. ರಾಜಕೀಯ ಘರ್ಷಣೆಗಳಂತೂ ದಿನನಿತ್ಯದ ಮಾತಾಗಿತ್ತು, ಅರ್ಜೆಂಟೈನಾದ ಯುವಕ ವೈದ್ಯ ಚೆ ಗೆವಾರ ಇಲ್ಲಿ ಕ್ರಾಂತಿಯ ವಿಶಿಷ್ಟ ಪಾಠಗಳನ್ನು ಕಲಿಯಲು ಆಶಿಸಿ ಬಂದಿದ್ದ.

ಎಲ್ಲಕ್ಕಿಂತಲೂ ಹೆಚ್ಚಾಗಿ ಅವನ ಆಸಕ್ತಿಯನ್ನು ಕೆರಳಿಸಿದ್ದು ೧೯೫೨ರ ಏಪ್ರಿಲ್ ೯ರಂದು ನಡೆದಿದ್ದ ಒಂದು ದೊಡ್ಡ ಬಂಡಾಯ. ಇದರಲ್ಲಿ ಗಣಿ ಕಾರ್ಮಿಕರು ಮತ್ತು ರೈತಾಪಿ ಜನ ಒಟ್ಟಾಗಿ ಸೇರಿ

ಬಂಡೆದ್ದಿದ್ದರು. ರಾಷ್ಟ್ರೀಯ ಕ್ರಾಂತಿಕಾರಿ ಚಳುವಳಿಯ ಪಕ್ಷ ಅಧಿಕಾರಕ್ಕೆ ಬಂದು ಪಾಜ್ ಎಸ್ಟೆನ್ಸೆರೊ ಅಧ್ಯಕ್ಷನಾಗಿದ್ದ. ಅವನ ಒಂದು ಪ್ರಮುಖ ಕ್ರಮವು ತವರದ ಗಣಿಗಳನ್ನು ರಾಷ್ಟ್ರೀಕರಣ ಗೊಳಿಸುವುದಾಗಿತ್ತು. ಅದಕ್ಕೆ ಹೆಚ್ಚು ಮೊತ್ತದ ಪರಿಹಾರನೀಡಲಾಗಿತ್ತಾದರೂ ಸಾಮ್ರಾಜ್ಯ ಶಾಹಿಯ ಕಣ್ಣು ಕೆಂಪಾಯಿತು. ಜೊತೆಗೆ ಭೂ ಮಾಲಿಕರ ಹಿಡಿತ ವನ್ನು ಕಡಿಮೆ ಮಾಡಲು ಭೂ ಸುಧಾರಣೆಯನ್ನು ಘೋಷಿಸಲಾಗಿತ್ತು. ಈ ಎಲ್ಲ ಬದಲಾವಣೆಗಳಿಗೆ ರಕ್ಷಣೆ ಒದಗಿಸಲು ರೈತ-ಕಾರ್ಮಿಕರ ಒಂದು ದಂಡನ್ನು ಸಹ ಕಟ್ಟಲಾಗಿತ್ತು.

ಈ ವೇಗದ ಬದಲಾವಣೆಗಳು ಅಪರಿಮಿತ ಉತ್ಸಾಹವನ್ನು ಎಲ್ಲೆಲ್ಲೂ ಹರಡಿದ್ದುದನ್ನು ಕಂಡು ಚೆ ಸಂತೋಷಿಸಿದ. ರೈತ-ಕಾರ್ಮಿಕರ ವಾಸಸ್ಥಾನಗಳಿಗೆ ಭೇಟಿಯಿತ್ತು ಜನರ ಸಂಪರ್ಕ ಬೆಳೆಸಿಕೊಂಡ ಹಾಗೂ ಸರ್ಕಾರದ ಪ್ರತಿನಿಧಿಗಳನ್ನು ಕಂಡು ಚರ್ಚೆ ನಡೆಸಿದ. ಅನೇಕ ಪ್ರಾಚೀನ ಅವಶೇಷಗಳು ಮತ್ತು ಪೂಜಾಮಂದಿರಗಳನ್ನು ನೋಡಿ ಬಂದ. ಇದೆಲ್ಲದರ ಮಧ್ಯೆ ಆತ ಗಮನಿಸಿದ ಒಂದು ಮೂಲಭೂತ ಅಂಶವು ಆಗ್ಗೆ ಸಂಭವಿಸುತ್ತಿದ್ದ ಬದಲಾವಣೆಗಳು ಅಸಮಗ್ರವೆಂಬು ದನ್ನು ಎತ್ತಿ ತೋರಿಸುತ್ತಿತ್ತು. ಅದೇನೆಂದರೆ ಬೊಲಿವಿಯಾದ ಮೂಲ ನಿವಾಸಿಗಳಾಗಿದ್ದ ಇಂಡಿಯನ್ನರು ಸ್ಪೆಯಿನಿನ ಆಡಳಿತ ಕಾಲದಲ್ಲಿದ್ದಂತೆ ಈಗಲೂ ದಾರಿದ್ರ್ಯದ ಕೂಪದಲ್ಲೇ ಮುಳುಗಿದ್ದುದು. ಸಮಾಜ ವ್ಯವಸ್ಥೆಯ ಅತ್ಯಂತ ಭೀಕರ ಸ್ವರೂಪವನ್ನು ಚೆ ಇದರಲ್ಲಿ ಗಮನಿಸಿದ. ಬೊಲಿವಿಯಾದ ಕ್ರಾಂತಿ ಇವರಿಗೆ ಯಾವ ಏಳಿಗೆಯನ್ನೂ ತಂದಿರಲಿಲ್ಲ. ಎಲ್ಲಿಯವರೆಗೆ ಕಟ್ಟಕಡೆಯ ಮನುಷ್ಯನಿಗೆ ಸುಖ ಪ್ರಾಪ್ತಿಯಾಗುವುದಿ ಲ್ಲವೋ ಅಲ್ಲಿಯವರೆಗೆ ಬದಲಾವಣೆಗಳಾವುವೂ ಕ್ರಾಂತಿ ಎನಿಸಿಕೊಳ್ಳ ಲಾರವೆಂದು ಚೆ ತೀರ್ಮಾನಿಸಿದ.

ಎಸ್ಟೆನ್ಸೆರೋನ ಸರ್ಕಾರದ ಸುಧಾರಣೆಗಳು ತೀವ್ರಗತಿಯಿಂದ ಮುಂದೆ ಹೋಗುವ ಬದಲು ಮತ್ತೆ ಯಥಾಸ್ಥಿತಿಯನ್ನೇ ಸಮರ್ಥಿಸಿ

ಸುಭದ್ರಗೊಳಿಸುವತ್ತ ಹೆಜ್ಜೆಹಾಕಿದ್ದು ಅಸಮಾಧಾನಕ್ಕೆಕಾರಣವಾಗಿತ್ತು, ವಾಷಿಂಗ್‌ಟನ್ನಿನ ಸರದಾರರಿಗೆ ಮಣಿಯುವ ಪ್ರವೃತ್ತಿ ಮೊದಲಿನಂತೆಯೇ ಮುಂದುವರಿಯಲಾರಂಭಿಸಿತು. ಸ್ಥಳೀಯ ಬಂಡವಾಳಿಗರು ಹಾಗೂ ಮಧ್ಯಮ ವರ್ಗದ ಜನ ಈ ಹಾದಿಯನ್ನು ಸವೆಸುವವರ ಮುಂಚೂಣಿಯಲ್ಲಿದ್ದರು. ೧೯೫೦ರಲ್ಲಷ್ಟೇ ಸ್ಥಾಪಿತವಾಗಿದ್ದ ಬೊಲಿವಿಯಾದ ಕಮ್ಯುನಿಸ್ಟ್ ಪಕ್ಷಕ್ಕೆ ವ್ಯಾಪಕವಾದ ಸಂಘಟನೆ ಕೂಡ ಇರಲಿಲ್ಲ. ಇಂಕಾ ಬುಡಕಟ್ಟಿನ ಜನರ ಮಧ್ಯೆಯಂತೂ ಆ ಪಕ್ಷದ ಹೆಸರೇ ಇರಲಿಲ್ಲವೆನ್ನಬಹುದು. ಕ್ರಾಂತಿಯ ಸಾಧ್ಯತೆ ಪ್ರಬಲವಾಗಿದ್ದು ಆ ದಿಕ್ಕಿನಲ್ಲಿ ಮುನ್ನಡೆಯದೆ ಏಲಿ ಏಲಿ ಒದ್ದಾಡುತ್ತಿದ್ದ ದೇಶ ಬೊಲಿವಿಯಾ ಎಂದು ಚೆ ತೀರ್ಮಾನಿಸಿ ಪೆರುವಿನತ್ತ ಮುಖಮಾಡಿದ.

ಹಿಂದಿನ ಪ್ರವಾಸದಲ್ಲಿದ್ದ ಸನ್ನಿವೇಶಕ್ಕಿಂತಲೂ ಈಗಿನ ಪ್ರವಾಸದ ಪೆರು ಹೆಚ್ಚು ವಿಷಮವಾಗಿತ್ತು. ಟಿ ಟಿ ಕಾಕ ಸರೋವರವನ್ನು ದಾಟಿ ಪೆರುವನ್ನು ಪ್ರವೇಶಿಸುತ್ತಿದ್ದಂತೆಯೇ ಚೆ ಮತ್ತು ಅವನ ಹೊಸ ಜೊತೆಗಾರ ಕಾರ್ಲೋಸ್ ಫೆರೇರಾ ಬಂಧನಕ್ಕೊಳಗಾದರು. ಬೊಲಿವಿಯಾದ ಕ್ರಾಂತಿಗೆ ಸಂಬಂಧಿಸಿದ ಪುಸ್ತಕಗಳನ್ನು ಮುಟ್ಟುಗೋಲು ಹಾಕಿಕೊಂಡು ನಂತರ ಅವರನ್ನು ಬಿಡುಗಡೆ ಮಾಡಲಾಯಿತು. ಪೆರುವಿನಲ್ಲಿ ಅಧಿಕಾರದಲ್ಲಿದ್ದ ಓಡ್ರಿಯಾ ಸಂಪೂರ್ಣವಾಗಿ ಅಮೆರಿಕಾದ ಅಡಿಯಾಳಿನಂತೆ ವರ್ತಿಸುತ್ತಿದ್ದ. ಸ್ವಲ್ಪ ಉಸಿರೆತ್ತಿದರೂ ಸೆರೆಮನೆಗೆ ದಬ್ಬುವುದು ಈ ಸರ್ವಾಧಿಕಾರಿಯ ಕಾರ್ಯವಿಧಾನವಾಗಿತ್ತು. ಸೆರೆಮನೆಗಳು ತುಂಬಿ ತುಳುಕುತ್ತಿದ್ದ ಆಗಿನ ಪೆರುವಿನಲ್ಲಿ ಗೆವಾರ ಸುಲಭವಾಗಿ ಸಂಚರಿಸುವಂತಿರಲಿಲ್ಲವಾದ್ದರಿಂದ ಇನ್ನಿಬ್ಬರೊಡಗೂಡಿ ೧೯೫೩ರ ಸೆಪ್ಟೆಂಬರ್‌ನಲ್ಲಿ ಈಕ್ವೆಡಾರ್ ಪ್ರವೇಶಿಸಿದ. ಅಲ್ಲಿಂದ ಕೊಲಂಬಿಯಾಕ್ಕೆ ಹೋಗಬೇಕೆಂಬ ಉದ್ದೇಶವು ಹಣದ ಕೊರತೆಯಿಂದಾಗಿ ಕೈಗೂಡಲಿಲ್ಲ. ತನ್ನಲ್ಲಿದ್ದ ಪುಸ್ತಕಗಳನ್ನು ಮಾರಿ ಸ್ವಲ್ಪ ಹಣ ಸಂಗ್ರಹಿಸಿದ. ಮಾಚು ಪಿಚ್ಚು ಮತ್ತು ಇತರ ಪ್ರಾಚೀನ ಅವಶೇಷಗಳ ಬಗ್ಗೆ ಪತ್ರಿಕೆಗಳಲ್ಲಿ

ಲೇಖನಗಳನ್ನು ಬರೆದು ಇನ್ನಷ್ಟು ಹಣ ಸಂಪಾದಿಸಿದ. ಅದೂ ಸಾಲದೆ ಪುಕ್ಕಟೆ ವಾಹನಗಳ ಸಹಾಯದಿಂದ ಕೋಸ್ಟರೀಕಾದ ರಾಜಧಾನಿಯಾದ ಸ್ಯಾನ್ ಜೋಸ್‌ನತ್ತ ತೆರಳಿದ.

ದಕ್ಷಿಣ ಅಮೆರಿಕಾದ ಬೇರೆಬೇರೆ ದೇಶಗಳ ರಾಜಕೀಯ ಸಂತ್ರಸ್ತರು ಈ ನಗರದಲ್ಲಿ ಸೇರಯುವುದು ಆಗ್ಗೆ ರೂಢಿಯಲ್ಲಿತ್ತು. ಆಯಾ ದೇಶಗಳ ಜನ ಒಂದೆಡೆ ಸೇರಿ ತಮ್ಮ ಮುಂದಿನ ರಾಜಕೀಯ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳುವುದಕ್ಕೆ ಇಲ್ಲಿ ಅವಕಾಶವಿತ್ತು. ಆದರೆ ಬಹುಮಟ್ಟಿಗೆ ಎಲ್ಲವೂ ಚರ್ಚೆಯ ಹಂತವಲ್ಲೇ ಉಳಿದುಬಿಡುತ್ತಿತ್ತು ಕೂಡ. ಡೊಮಿನಿಕನ್ ಗಣರಾಜ್ಯದ ಒಬ್ಬ ಪ್ರಸಿದ್ಧ ಲೇಖಕನಾಗಿದ್ದ ಜಾನ್ ಬಾಶ್‌ನ ಪರಿಚಯವನ್ನು ಚೆ ಗೆವಾರ ಮಾಡಿಕೊಂಡಿದ್ದು ಈ ನಗರದಲ್ಲೇ. ಆ ಗಣರಾಜ್ಯದ ಅಧ್ಯಕ್ಷನಾಗಿದ್ದ ಟ್ರುಜಿಲೋ ಅತಿದುಷ್ಟ ಪ್ರಜಾಪೀಡಕ. ಅಮೆರಿಕಾದ ನೆಚ್ಚಿನ ಭಂಟ. ಅವನ ಕ್ರೂರ ಮತ್ತು ಬೀಭತ್ಸ ಕೃತ್ಯಗಳನ್ನು ಇಡೀ ದಕ್ಷಿಣ ಅಮೆರಿಕಾದಲ್ಲಿ ಪ್ರಚಾರ ಮಾಡುವುದರಲ್ಲಿ ಬಾಶ್ ನಿರತನಾಗಿದ್ದ, ಅವನೊಡನೆ ಭೇಟಿಯಾದದ್ದು ಗೆವಾರನಿಗೆ ಉಪಯುಕ್ತವಾದ ಒಂದು ಅನುಭವವಾಯಿತು. ಕ್ಯೂಬಾದಲ್ಲಿ ಅಧಿಕಾರದಲ್ಲಿದ್ದ ಬಟಿಸ್ಟಾನ ವಿರುದ್ಧ ರಾಜಕೀಯ ಹೋರಾಟದಲ್ಲಿ ತೊಡಗಬೇಕೆಂದು ಗುಂಪುಗೂಡುತ್ತಿದ್ದ ಅನೇಕ ಕ್ಯೂಬನ್ನರ ಪರಿಚಯ ಮಾಡಿಕೊಳ್ಳಲು ಬಾಶ್ ಚೆ ಗೆವಾರನಿಗೆ ಸಹಾಯ ಮಾಡಿದ. ಫಿಡೆಲ್ ಕ್ಯಾಸ್ಟ್ರೋ ತಂಡದ ಹೋರಾಟಗಾರರು ಮೋಂಕಾಡ ಅರಮನೆಯೆಂದು ಪ್ರಸಿದ್ಧವಾಗಿದ್ದ ಶಸ್ತ್ರಾಗಾರ ಹಾಗೂ ಸೈನಿಕ ಠಾಣೆಯ ಮೇಲೆ ನಡೆಸಿದ್ದ ದಾಳಿಯನ್ನು ಕುರಿತ ವಿವರಗಳನ್ನು ಚೆ ಇವರಿಂದ ಪಡೆದುಕೊಳ್ಳಲು ಸಾಧ್ಯವಾಯಿತು. ಕ್ಯೂಬಾ ಬಗೆಗಿನ ಆಸಕ್ತಿ ಗೆವಾರನಲ್ಲಿ ಮೊಳಕೆ ಹೊಡೆದದ್ದು ಈ ಬಗೆಯಲ್ಲಿ. ಆಶ್ಚರ್ಯದ ಸಂಗತಿಯೆಂದರೆ ಈ ನಗರದಲ್ಲಿ ತುಂಬಿದ್ದ ಕ್ಯೂಬನ್ನರು ಬಟಿಸ್ಟಾ ಸರ್ಕಾರವನ್ನು ಕಿತ್ತು ಹಾಕಲು ಸಾಧ್ಯವೇ ಇಲ್ಲವೇನೋ ಎಂಬಷ್ಟು ಹತಾಶರಾಗಿದ್ದವರು.

ನಿಷ್ಕ್ರಿಯರಾಗಿದ್ದವರು. ಫಿಡೆಲ್ ಮತ್ತು ರಾವುಲ್ ಕ್ಯಾಸ್ಟ್ರೋ ಸಹೋದರರು ಸೆರೆಮನೆಯಲ್ಲಿದ್ದುದು ಈ ಕ್ಯೂಬನ್ನರಿಗೆ ಮಹತ್ವದ ಅಂಶವಾಗಿರಲಿಲ್ಲ. ಫಿಡೆಲ್ ವಿಚಾರಣೆಯ ನಾಟಕ ಪ್ರಸಂಗವೂ ಅವರಿಗೆ ಗೊತ್ತಿರಲಿಲ್ಲ. ಚಾರಿತ್ರಿಕ ದಾಖಲೆಯಾಗಿ ಅನನ್ಯವಾದ ಸ್ಥಾನ ಪಡೆದಿರುವ ಫಿಡೆಲ್‌ರ "ಇತಿಹಾಸ ನನ್ನನ್ನು ನಿರ್ದೋಷಿಯನ್ನಾಗಿಸುತ್ತದೆ" ಎಂಬ ನ್ಯಾಯಾಲಯದಲ್ಲಿನ ಹೇಳಿಕೆಯಂತೂ ಅವರ ಗಮನಕ್ಕೆ ಬರುವ ಸಾಧ್ಯತೆಯೇ ಇರಲಿಲ್ಲ. ಹೀಗಾಗಿ ಚೆ ತಿಳಿದುಕೊಂಡ ಅಂಶಗಳು ಸಹ ಅಪೂರ್ಣ ರೂಪದವೇ ಆಗಿದ್ದವು.

ಆಗ್ಗೆ ಗ್ವಾಟೆಮಾಲಾದಲ್ಲಿ ಅರ್ಬೆಂಜ್ ಸರ್ಕಾರ ಅಸ್ತಿತ್ವದಲ್ಲಿತ್ತೆಂದು ಹಿಂದೆಯೇ ಪ್ರಸ್ತಾಪಿಸಿದ್ದಾಗಿದೆ. ಆ ಸರ್ಕಾರವನ್ನು ಉರುಳಿಸಲು ಕ್ಯಾಸ್ಟಿಲೋ ಅರ್ಮಾಸ್ ಎಂಬ ಸೈನ್ಯಾಧಿಕಾರಿಯು ಹಾಂಡುರಸ್‌ನಲ್ಲಿ ಅಮೇರಿಕಾದ ಸಹಾಯದಿಂದ ಒಂದು ಷಡ್ಯಂತ್ರ ರಚಿಸುತ್ತಿದ್ದ. ಅದು ವಿಶ್ವದ ಗಮನಕ್ಕೆ ಹೆಚ್ಚಾಗಿ ಬಂತೇ ವಿನಾ ಕ್ಯೂಬಾದ ಬೆಳವಣಿಗೆಗಳು ಅಷ್ಟಾಗಿ ಗಮನ ಸೆಳೆಯಲಿಲ್ಲ. ಅರ್ಬೆಂಜ್ ಸರ್ಕಾರದ ಪರವಾಗಿ ಹೋರಾಡುವುದು ತನ್ನ ಕರ್ತವ್ಯವೆಂದೆಣಿಸಿ ಚೆ ೧೯೫೩ರ ಅಂತ್ಯದ ವೇಳೆಗೆ ಗ್ವಾಟೆ ಮಾಲಾಕ್ಕೆ ಹೋದಾಗ ಅವನೊಡನೆ ಇನ್ನೂ ಕೆಲವು ಅರ್ಜೆಂಟೈನಾದ ಯುವಕರಿದ್ದರು. ಅವರೆಲ್ಲಾ ಅರ್ಬೆಂಜ್ ಸರ್ಕಾರದ ರಕ್ಷಣೆಗೆ ನಿಂತಿದ್ದರೂ ಸಾಮ್ರಾಜ್ಯಶಾಹಿಯ ಕುತಂತ್ರದಿಂದ ಗ್ವಾಟೆಮಾಲಾವನ್ನು ಪಾರು ಮಾಡಲು ಸಾಧ್ಯವಿರುತ್ತಿರಲಿಲ್ಲ. ಗೆವಾರ ಮಾತ್ರ ನಿಷ್ಠೆಯಿಂದ ಅರ್ಬೆಂಜ್ ಪರವಾದ ಹೋರಾಟದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ. ಕಡೆಗೆ ಮೆಕ್ಸಿಕೋಗೆ ತೆರಳುವುದು ಹೇಗೆ ಅನಿವಾರ್ಯವಾಯಿತೆಂಬುದನ್ನು ಹಿಂದೆಯೇ ಉಲ್ಲೇಖಿಸಲಾಗಿದೆ.

ಇನ್ನೆಷ್ಟೋ ದಕ್ಷಿಣ ಅಮೇರಿಕಾದ ರಾಷ್ಟ್ರಗಳಂತೆ ಮೆಕ್ಸಿಕೋ ಸಹ ಅಮೆರಿಕಾದ ಬಂಡವಾಳಕ್ಕೆ ಫಲವತ್ತಾದ ಕ್ಷೇತ್ರವಾಗಿತ್ತು. ವ್ಯಾಪಾರಿಗಳ ಬಣದ ಪ್ರತಿನಿಧಿಗಳು ರಾಜ್ಯದ ಆಡಳಿತಸೂತ್ರವನ್ನು ತಮ್ಮ ಕೈಯಲ್ಲಿ

ರಿಸಿಕೊಂಡಿದ್ದರು. ಅಮೂಲ್ಯ ಸಂಪನ್ಮೂಲವಾದ ತೈಲವು ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿಗಳ ಅಧೀನದಲ್ಲಿತ್ತು. ಪ್ರಗತಿಪರ ಶಕ್ತಿಗಳು ಛಿದ್ರವಾಗಿ ಹಂಚಿ ಹೋಗಿದ್ದುದರಿಂದ ಸಾಮ್ರಾಜ್ಯಶಾಹಿಯ ವಿರೋಧಿ ಆಂದೋಲನ ಅಷ್ಟಾಗಿ ಪ್ರಬಲವಾಗಿರಲಿಲ್ಲ. ಇವನ್ನೆಲ್ಲಾ ಅಧ್ಯಯನ ಮಾಡುತ್ತಿದ್ದ ಗೆವಾರನಿಗೆ ಮೆಕ್ಸಿಕೋದ ವಾಯುಗುಣ ಬಹಳವಾಗಿ ಹಿಡಿಸಿತು. ಆತನ ಅಸ್ತಮಾಕ್ಕೆ ಇದು ನೈಸರ್ಗಿಕ ಔಷಧಿಯನ್ನು ಪರಿಣಾಮಕಾರಿಯಾಗಿ ಒದಗಿಸಿತ್ತು.

ಮೊದಲ ದಿನಗಳಲ್ಲಿ ಚೆ ಭೇಟಿಯಾದವರ ಪೈಕಿ ಕ್ಯೂಬಾದ ರಾವುಲ್ ರೋವಾ ಅತಿ ಮುಖ್ಯರು. ಆತನೊಬ್ಬ ಪ್ರಖ್ಯಾತ ಲೇಖಕ, ವಿಮರ್ಶಕ ಮತ್ತು ಬಟಿಸ್ಟಾ ವಿರೋಧಿ, ಬಟಿಸ್ಟಾನ ಪತನದ ನಂತರ ಕೆಲಕಾಲ ಕ್ಯೂಬಾದ ವಿದೇಶಾಂಗ ಸಚಿವನೂ ಆಗಿದ್ದ ಈತ ಗೆವಾರನೊಡನೆ ಸಖ್ಯ ಬೆಳೆಸಲು ಹಿಂದೇಟು ಹಾಕಲಿಲ್ಲ. ಚೆಯನ್ನು ನಂತರದ ಕಾಲದಲ್ಲಿ ಆತ ಜ್ಞಾಪಿಸಿಕೊಳ್ಳುತ್ತಿದ್ದುದು ಹೀಗೆ: "ಚೆ ನನಗೆ ಒಬ್ಬ ಸಭ್ಯ ಯುವಕನಂತೆ ಕಂಡರು, ಆತನ ವ್ಯಕ್ತಿತ್ವ ನನ್ನ ಸ್ಮರಣೆಯಲ್ಲಿ ಹಾಗೇ ಉಳಿದಿದೆ. ಸ್ವಚ್ಛ ಮನಸ್ಸು, ಸಾತ್ವಿಕ ಸಾಮ್ಯತೆ, ಅಸ್ತಮಾದ ಉಸಿರಾಟ. ಎದ್ದು ಕಾಣುವ ಹಣೆ, ದಟ್ಟವಾದ ತಲೆಗೂದಲು. ದೃಢವಾದ ತೀರ್ಮಾನಗಳು, ಶಕ್ತಿಯುತವಾಗಿ ಮಾತಾಡುವ ಬಾಯಿ, ಪ್ರಶಾಂತ ಚಲನವಲನ, ಸೂಕ್ಷ್ಮ ಹಾಗೂ ತೀವ್ರ ನೋಟ, ಕ್ಷಿಪ್ರ ಹಾಸ್ಯ, ಗಂಭೀರ ಕಂಠ ಮತ್ತು ಅನುರಣಿಸುವ ಧ್ವನಿ."

ರಾವುಲ್ ರೋವಾ ಅನೇಕ ದೇಶಗಳ ಯುವಕರನ್ನು ಮೆಕ್ಸಿಕೋದಲ್ಲಿ ಭೇಟಿಯಾಗುತ್ತಿದ್ದುದುಂಟು. ಅವರಲ್ಲಿ ಬಹುತೇಕ ಮಂದಿ ಭಾವುಕ ಜೀವಿಗಳು. ಅವರಿಂದ ಭಿನ್ನವಾಗಿದ್ದ ಗೆವಾರ ಕೇವಲ ತನ್ನ ತಾಯ್ನಾಡಾದ ಅರ್ಜೆಂಟೈನಾದ ಬಗ್ಗೆ ಕಾಳಜಿಯನ್ನಿರಿಸಿಕೊಂಡಿರಲಿಲ್ಲ. ಅವನು ಇಡೀ ದಕ್ಷಿಣ ಅಮೇರಿಕಾದ ಸಮಸ್ಯೆಗಳಿಗೆ ಪ್ರತಿಕ್ರಿಯಿಸುವವನಾಗಿದ್ದ. ಬರಿಯ ಮಾತುಗಳು ಅವನಿಗೆ ತೃಪ್ತಿ ಕೊಡುತ್ತಿರಲಿಲ್ಲ.

ರೋವಾ ಪರಿಚಯದ ನಂತರ ಅವನು ರಾವುಲ್ ಕ್ಯಾಸ್ಟ್ರೋ ಹಾಗೂ ಫಿಡೆಲ್ ಕ್ಯಾಸ್ಟ್ರೋರ ಪರಿಚಯ ಮಾಡಿಕೊಂಡಾಗ ಸಮಾಧಾನವೆನ್ನಿಸಿತು. ಏಕೆಂದರೆ ತನ್ನಂತೆ ಇವರೂ ಇಡೀ ದಕ್ಷಿಣ ಅಮೆರಿಕಾದ ಬಗ್ಗೆ ಯೋಚಿಸುತ್ತಿದ್ದರು. ಅಲ್ಲದೆ ಕ್ಯೂಬಾದಲ್ಲಿ ಸಶಕ್ತ ಹೋರಾಟವನ್ನು ಸಂಘಟಿಸಿದ್ದ ಇವರಿಬ್ಬರೂ ಮತ್ತೊಂದು ಕ್ರಿಯಾಶೀಲ ಕ್ರಾಂತಿಕಾರಿ ಪ್ರಯತ್ನದಲ್ಲಿ ತೊಡಗಲು ಸಜ್ಜಾಗುತ್ತಿದ್ದರು. ಈ ಭೇಟಿಯು ಗೆವಾರನ ಮುಂದಿನ ಜೀವನಕ್ರಮ ಹಾಗೂ ದಿಕ್ಕನ್ನು ಬದಲಾಯಿಸಿತು.

ಭೇಟಿಯಾದದ್ದು ಹೀಗೆ : ೧೯೫೫ರ ಜೂನ್‌ನಲ್ಲಿ ಚೆ ಮೆಕ್ಸಿಕೋದ ಆಸ್ಪತ್ರೆಯೊಂದರಲ್ಲಿ ಹೃದ್ರೋಗ ವಿಭಾಗದ ಅಲರ್ಜಿ ವಾರ್ಡಿನಲ್ಲಿ ಕೆಲಸ ಮಾಡುತ್ತಿದ್ದ. ಗ್ವಾಟೆಮಾಲಾದಲ್ಲಿ ಸ್ನೇಹಿತನಾಗಿದ್ದ ನಿಕೋ ಲೋಪೆಜ್ ಅನಿರೀಕ್ಷಿತವಾಗಿ ಅಲ್ಲಿಗೆ ಬಂದ, ಮೊಂಕಾಡಾ ಪಾಳೆಯದ ಮೇಲೆ ದಾಳಿ ನಡೆಸಿದ್ದ ಕ್ಯಾಸ್ಟ್ರೋ ಪರಿವಾರದವರು ಕ್ಯೂಬಾದಲ್ಲಿ ಬಿಡುಗಡೆ ಹೊಂದಿ ಮೆಕ್ಸಿಕೋ ನಗರಕ್ಕೆ ಬಂದು ಸೇರುತ್ತಿದ್ದರೆಂದೂ ಮತ್ತೊಮ್ಮೆ ಇನ್ನೂ ಪ್ರಬಲವಾದ ದಂಡಯಾತ್ರೆಯನ್ನು ಯೋಜಿಸುವರೆಂದೂ ಚೇಗೆ ನಿಕೋ ತಿಳಿಸಿದ. ರಾವುಲ್ ಕ್ಯಾಸ್ಟ್ರೋ ಪರಿಚಯ ಮಾಡಿಸಿಕೊಡುವುದಾಗಿಯೂ ಆತ ಹೇಳಿದ. ಮೊದಲ ಭೇಟಿಯ ಸಮಯದಲ್ಲಿ ಚರ್ಚೆಗೆ ಬಂದಿದ್ದು ಮೊಂಕಾಡಾ ಪಾಳೆಯದ ಮೇಲಿನ ದಾಳಿ, ಸೆರೆಮನೆ ವಾಸ, ಫಿಡೆಲ್ ವಿಚಾರಣೆ, ಪೈನ್ಸ್ ದ್ವೀಪದಲ್ಲಿ ಕಠಿಣ ದುಡಿಮೆಯ ಅನುಭವ ಮತ್ತು ಬಟಿಸ್ಟಾ ವಿರುದ್ಧ ಸೆಣಸಬೇಕೆಂಬ ದೃಢ ನಿಶ್ಚಯ, ಇತ್ಯಾದಿ ವಿಷಯಗಳು. ಈ ಭೇಟಿಯ ಸಾರಾಂಶವನ್ನು ಚೆ ಕೂಡಲೆ ರಾವುಲ್ ರೋವಾಗೆ ತಿಳಿಸಿದಾಗ ಸದ್ಯದಲ್ಲೇ ಫಿಡೆಲ್ ಕ್ಯಾಸ್ಟ್ರೋನ ಪರಿಚಯವನ್ನು ಮಾಡಿಕೊಡುವುದಾಗಿ ಆಶ್ವಾಸನೆ ಬಂತು. ತಮ್ಮ ತಂಡಕ್ಕೆ ಒಬ್ಬ ವೈದ್ಯನ ಅವಶ್ಯಕತೆ ಇದ್ದುದನ್ನು ರೋವಾ

ಮನಗಂಡಿದ್ದ ಮತ್ತು ಗೆವಾರನ ಗ್ವಾಟೆಮಾಲಾ ಅನುಭವವನ್ನು ಆತ ಮೆಚ್ಚಿಕೊಂಡಿದ್ದ.

ಬಟಿಸ್ಟಾ ಸರ್ವಾಧಿಕಾರದ ವಿರುದ್ಧ ಆಕ್ರಮಣ ನಡೆಸಲು ಫಿಡೆಲ್ ಅಮೆರಿಕಾದ ನ್ಯೂಯಾರ್ಕ್, ಇತ್ಯಾದಿ ಸ್ಥಳಗಳಲ್ಲಿ ಕ್ಯೂಬನ್ ವಲಸೆಗಾರರಿಂದ ಹಣ ಸಂಗ್ರಹ ಮಾಡಿ ಮೆಕ್ಸಿಕೋಗೆ ಬಂದ ಕೆಲವೇ ದಿನಗಳ ತರುವಾಯದಲ್ಲಿ ಚೆ ಆತನನ್ನು ಸಂಧಿಸಿದ. ನ್ಯೂಯಾರ್ಕಿನ ಒಂದು ಸಭೆಯಲ್ಲಿ ಫಿಡೆಲ್ ಹೇಳಿದ್ದ ಮಾತುಗಳನ್ನು ಅದಕ್ಕೆ ಮೊದಲೇ ಚೆ ಕೇಳಿ ತಿಳಿದಿದ್ದ: "೧೯೫೬ರಲ್ಲಿ ನಾವು ಸ್ವಾತಂತ್ರ್ಯ ಗಳಿಸುತ್ತೇವೆ. ಇಲ್ಲವೆ ಆ ಪ್ರಯತ್ನದಲ್ಲಿ ಹುತಾತ್ಮರಾಗುತ್ತೇವೆ." ಈ ಕೆಚ್ಚೆದೆಯ ಮಾತು ಹಾಗೂ ದೃಢಸಂಕಲ್ಪ ಚೇಗೆ ಬಹುವಾಗಿ ಹಿಡಿಸಿತ್ತು. ತಾನೂ ಫಿಡೆಲ್ ತಂಡಕ್ಕೆ ಸೇರಬೇಕೆಂಬ ತೀರ್ಮಾನವನ್ನು ಆತನ ಭೇಟಿಗೆ ಮೊದಲೇ ಚೆ ನಿರ್ಧರಿಸಿಯಾಗಿತ್ತು. ಜುಲೈ ೨೬ರ ಚಳುವಳಿಯೆಂದು ಹೆಸರಾಗಿದ್ದ ಮೊಂಕಾಡಾ ಪಾಳೆಯದ ಮೇಲಿನ ದಾಳಿಯ ವೀರರ ಜೊತೆ ಹೋರಾಡುವುದು ತನ್ನ ಬೃಹತ್ತಾದ ಆಕಾಂಕ್ಷೆಗಳ ಸಾಫಲ್ಯದತ್ತ ನೇರ ಹೆಜ್ಜೆಯೆಂದು ಚೆ ಭಾವಿಸಿದ.

ಫಿಡೆಲ್ ಸುತ್ತ ಅಣಿ ನೆರೆದಿದ್ದ ಯುವಕರಲ್ಲಿ ಕಾರ್ಮಿಕರು, ವಿದ್ಯಾರ್ಥಿಗಳು, ಕಚೇರಿ ನೌಕರರು, ಕುಶಲಕರ್ಮಿಗಳು.-ಹೀಗೆ ವಿವಿಧ ಕ್ಷೇತ್ರಗಳವರಿದ್ದರು. ಸ್ವತಃ ಫಿಡೆಲ್ ಬಹಳ ಸಮರ್ಥನಾದ ಭಾಷಣಕಾರ, ಸಂಯೋಜನಾ ಚತುರ, ಸದಾ ಸ್ನೇಹಪರ ಮತ್ತು ಉಗ್ರವಾದ ಜನವಾದಿಯೆಂದು ಚೆ ಕೂಡಲೆ ಕಂಡುಕೊಂಡ. ಇವರಿಬ್ಬರ ಭೇಟಿಯಾದದ್ದು ೧೯೫೫ರ ಜುಲೈನಲ್ಲಿ. ಮೆಕ್ಸಿಕೋದ ಆಂಪರನ್ ರಸ್ತೆಯ ೪೯ನೇ ನಂಬರಿನ ಮನೆಯಲ್ಲಿ. ಅಲ್ಲಿ ವಾಸವಾಗಿದ್ದ ಮರಿಯಾ ಗೊನ್ಸಾಲೆಜ್ ಒಬ್ಬ ಮೆಕ್ಸಿಕೋದವನನ್ನು ಮದುವೆಯಾಗಿದ್ದಾಕೆ. ತನ್ನ ಕುಟುಂಬದವರು ಬಟಿಸ್ಟಾ ವಿರುದ್ಧದ ಚಳುವಳಿಯಲ್ಲಿ ಹತರಾಗಿದ್ದುದನ್ನು ಕಂಡಿದ್ದ ಆಕೆ ಫಿಡೆಲ್ ತಂಡಕ್ಕೆ ತನ್ನ ಮನೆಯ ಒಂದು ಭಾಗ

ವನ್ನು ಬಿಟ್ಟುಕೊಟ್ಟಿದ್ದಳು. ಅದೇ ಈ ತಂಡದ ಕೇಂದ್ರ ಕಾರ್ಯಾಲಯವೂ ಆಗಿತ್ತು. ಅಲ್ಲಿಯ ಒಂದು ಕೋಣೆಯ ತುಂಬ ಎಂಥೆಂಥದೋ ಸಾಹಿತ್ಯ ಮತ್ತು ಆಯುಧಗಳು, ಹಾಗೂ ನಾಲ್ಕಾರು ಹಾಸಿಗೆ ಸುತ್ತುಗಳು. ರಾವುಲ್ ಕ್ಯಾಸ್ಟ್ರೋ ಗೆವಾರನನ್ನು ಸಂಧಿಸಿ ಅವನತ್ತ ಗಮನ ನೀಡುವಂತೆ ಫಿಡಲ್‌ಗೆ ಮೊದಲೇ ಸಲಹೆ ನೀಡಿದ್ದ. ಆದ್ದರಿಂದ ಮೊದಲ ಭೇಟಿಯ ಸಂದರ್ಭದಲ್ಲೇ ಯಾವ ಇರುಸುಮುರುಸೂ ಇಲ್ಲದೆ ನೇರವಾಗಿ ಪ್ರಸ್ತುತ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಲು ಸಾಧ್ಯವಾಯಿತು. ಮೊದಲು ಕ್ಯೂಬಾದ ಸನ್ನಿವೇಶ. ಆಮೇಲೆ ದಕ್ಷಿಣ ಅಮೆರಿಕಾ ದೇಶಗಳಲ್ಲಿನ ವಿದ್ಯಮಾನಗಳು ಹಾಗೂ ಸಾಮ್ರಾಜ್ಯಶಾಹಿಯ ದರ್ಪ–ಕುತಂತ್ರಗಳು, ಜನಗಳ ಕಾರ್ಪಣ್ಯ ನೀಗಲು ಕೈಗೊಳ್ಳಬೇಕಾದ ಮೂಲಭೂತ ಕ್ರಮಗಳು ಮತ್ತು ಕ್ಯೂಬಾದಲ್ಲಿ ಬಟಿಸ್ಟಾ ಸರ್ಕಾರದ ವಿರುದ್ಧದ ಕಾರ್ಯಾಚರಣೆಗೆ ಯೋಜನೆಗಳು ಇವು ಚರ್ಚೆಗೆ ಬಂದ ವಿಷಯಗಳು.

ಕ್ಯೂಬಾದ ಓರಿಯೆಂಟ್ ಪ್ರಾಂತ್ಯದಿಂದ ಕಾರ್ಯಾಚರಣೆಯಲ್ಲಿ ತೊಡಗುವುದು ಫಿಡೆಲ್‌ರ ಉದ್ದೇಶವಾಗಿತ್ತು. ಬಟಿಸ್ಟಾ ವಿರೋಧಿಗಳು ಅಲ್ಲಿ ಹೆಚ್ಚಾಗಿದ್ದುದು ಮತ್ತು ಫಿಡೆಲ್‌ಗೆ ಬೆಂಬಲ ಸಾಕಷ್ಟಿದ್ದುದು ಈ ಆಯ್ಕೆಗೆ ಕಾರಣವಾಗಿತ್ತು. ಜುಲೈ ೨೬ರ ಚಳುವಳಿಗೆ ಈ ಪ್ರಾಂತ್ಯವು ಮಹತ್ತರ ಪ್ರೋತ್ಸಾಹ ನೀಡಿತ್ತು. ಇಡೀ ರಾತ್ರಿ ಚರ್ಚೆ ನಡೆದು ಬೆಳಿಗ್ಗೆ ಅದು ಮುಕ್ತಾಯವಾಗುವ ವೇಳೆಗೆ ಫಿಡೆಲ್ ಮತ್ತು ಚೆ ಅವಿಭಾಜ್ಯ ಸಂಗಾತಿಗಳಾಗಿದ್ದರು ಮತ್ತು ಮುಂಬರಲಿದ್ದ ದಂಡಯಾತ್ರೆಯಲ್ಲಿ ಗೆವಾರ ವೈದ್ಯನಾಗಿ ದಾಖಲಾಗಿದ್ದಕೂಡ. ಫಿಡೆಲ್‌ರ ಉತ್ಸಾಹವನ್ನು ಸಂಪೂರ್ಣವಾಗಿ ತನ್ನದು ಮಾಡಿಕೊಂಡಿದ್ದ ಚೆ ಹಲವು ವರ್ಷಗಳ ಹುಡುಕಾಟಕ್ಕೆ ಅಂದು ಒಂದು ಖಚಿತವಾದ ರೂಪ ಕೊಡಲು ಸಾಧ್ಯವಾಗಿತ್ತು. ದಂಡಯಾತ್ರೆಯು ಸಫಲವಾಗುವುದು ನಿಶ್ಚಯವೆಂದು ಗೆವಾರ ನಂಬಿರಲಿಲ್ಲ. ಆದರೆ ಕ್ಯೂಬಾದ

ವಿಮೋಚನೆಗಾಗಿ ಪ್ರಾಣ ಕೊಡುವುದು ತನ್ನ ಉದಾತ್ತ ಆಕಾಂಕ್ಷೆಗಳಿಗೆ ಸಮಂಜಸವಾದ ನಡತೆಯೆಂದು ಖಂಡಿತ ಆತ ಭಾವಿಸಿದ್ದ.

ಇದೇ ಸಮಯಕ್ಕೆ ಅರ್ಜೆಂಟೈನಾದಲ್ಲಿ ರಾಜಕೀಯ ಪರಿವರ್ತನೆಯೊಂದು ಉಂಟಾಯಿತು. ಅವರೆಗೆ ಅಧಿಕಾರದಲ್ಲಿದ್ದ ಪೆರೋನ್ ಮಿಲಿಟರಿ ದಂಗೆಯಿಂದಾಗಿ ಪದಚ್ಯುತನಾಗಿ ದೇಶದಿಂದ ಪರಾರಿಯಾದ. ಹಿಂದಿನ ಆಡಳಿತದ ವಿರೋಧಿಗಳೆಲ್ಲ ಅರ್ಜೆಂಟೈನಾಕ್ಕೆ ಹಿಂದಿರುಗಬಹುದೆಂಬ ಸೂಚನೆ ಬಂತು. ಮೆಕ್ಸಿಕೋದಲ್ಲಿದ್ದ ಅನೇಕ ಅರ್ಜೆಂಟೈನೀಯರು ಸ್ವದೇಶಕ್ಕೆ ಹಿಂದಿರುಗಲು ಸಿದ್ಧತೆಯಲ್ಲಿ ಮಗ್ನರಾದರು. ಕ್ಯೂಬಾ ದಂಡಯಾತ್ರೆಯಲ್ಲಿ ಸೇರ್ಪಡೆ ಹೊಂದಿದ್ದ ಗೆವಾರ ತನ್ನ ನಿರ್ಧಾರವನ್ನು ಬದಲಿಸಲಿಲ್ಲ. ಆದರೆ ತಕ್ಷಣದಲ್ಲೇ ದಂಡಯಾತ್ರೆ ಆರಂಭವಾಗುವ ಸೂಚನೆಯೂ ಇರಲಿಲ್ಲ. ಅದಕ್ಕೆ ಬೇಕಾದ ಜನ, ಧನ, ಆಹಾರ, ಆಯುಧ, ಸರಂಜಾಮು ಇತ್ಯಾದಿಗಳನ್ನೆಲ್ಲಾ ಸಂಗ್ರಹಿಸಬೇಕಾಗಿತ್ತು ಮತ್ತು ಎಲ್ಲವೂ ಗುಟ್ಟಾಗಿಯೇ ನಡೆಯಬೇಕಾಗಿತ್ತು. ಮೊಂಕಾಡಾ ದಾಳಿಕಾರರ ಚಲನವಲನಗಳನ್ನು ಮೆಕ್ಸಿಕೋ ಪೊಲೀಸರು ಹಾಗೂ ಅಮೇರಿಕಾದ ಸಿ.ಐ.ಎ. ಬೇಹುಗಾರರು ಕಣ್ಣಲ್ಲಿ ಕಣ್ಣಿಟ್ಟು ಗಮನಿಸುತ್ತಿದ್ದರಾದ್ದರಿಂದ ಯಾವುದನ್ನೂ ತ್ವರಿತಗತಿಯಲ್ಲಿ ಮಾಡುವಂತಿರಲಿಲ್ಲ. ದಂಡಯಾತ್ರೆಯಲ್ಲಿ ಪಾಲ್ಗೊಳ್ಳಲು ಮುಂದಾಗಿದ್ದವರಿಗೆ ಗೆರಿಲ್ಲಾ ಯುದ್ಧತಂತ್ರಗಳಲ್ಲಿ ತರಬೇತಿ ನೀಡುವ ಕಾರ್ಯವನ್ನು ಮಾಡಬೇಕಾಗಿತ್ತು. ವಿದೇಶವೊಂದರಲ್ಲಿ ಇದನ್ನೆಲ್ಲಾ ಸುಗಮವಾಗಿ ಮಾಡಲು ಸಹಜವಾಗಿಯೇ ಅನೇಕ ಅಡಚಣೆಗಳಿದ್ದವು.

ಫಿಡೆಲ್ ಯೋಜನೆಯಂತೆ ದಂಡಯಾತ್ರೆಯು ಕ್ಯೂಬಾದ ಸ್ಯಾಂಟಿಯಾಗೋ ಮುಟ್ಟುವ ವೇಳೆಗೆ ಸರಿಯಾಗಿ ಅಲ್ಲಿಯ ಯುವಕ ನಾಯಕ ಫ್ರಾಂಕ್ ಪೇಯಿಸ್ ಕಾರ್ಮಿಕರೂ ಸೇರಿದಂತೆ ಜನರ ದಂಗೆಯನ್ನು ವಶಪಡಿಸಿಕೊಳ್ಳುವುದಿತ್ತು. ಬಟಿಸ್ಟಾ ಪತನಕ್ಕೆ ಇದು ಮೊದಲ ಹೊಡೆತವೆಂದು ಫಿಡೆಲ್-ಪೇಯಿಸ್ ನಂಬಿದ್ದರು. ಅವರಿಬ್ಬರ ನಡುವಿನ

ಸಂಪರ್ಕವನ್ನು ಭದ್ರಗೊಳಿಸಿಕೊಳ್ಳುವ ಜವಾಬ್ದಾರಿಯೂ ಹೇರಳವಾಗಿದ್ದಿತು. ಜುಲೈ ೨೬ರ ಚಳುವಳಿಗೆ ಮೊದಲಿನಿಂದಲೂ ಸಹಾಯ ನೀಡಿದ್ದ ಆರ್ಸಾಸಿಯೋ ಅರಾಯೋ ಎಂಬುವ ಕುಸ್ತಿಪಟು ದಂಡಯಾತ್ರೆಯಲ್ಲಿ ಭಾಗವಹಿಸಲಿದ್ದ ಯುವಕರಿಗೆ ತರಬೇತಿ ನೀಡಲು ಒಪ್ಪಿದ. ಗುಡ್ಡಗಾಡುಗಳಲ್ಲಿ ಸಂಚಾರದ ಅನುಭವ ದೊರಕಿಸಿಕೊಡಲು ಯುವಕರನ್ನು ಸುತ್ತ ಮುತ್ತಲ ಗುಡ್ಡಗಳಿಗೆ ಕಾಲ್ನಡಿಗೆಯಲ್ಲಿ ಕರೆದುಕೊಂಡು ಹೋಗುವುದು ತರಬೇತಿಯ ಮೊದಲ ಭಾಗವಾಯಿತು. ನಂತರ ಅವರಿಗೆ ಜೂಡೋ ಪಾಠ. ಜೊತೆಗೆ ಭೂಗೋಳ ಮತ್ತು ಸಮಕಾಲೀನ ರಾಜಕೀಯ ಪರಿಸ್ಥಿತಿಯ ಸಮಗ್ರ ಪರಿಚಯ. ಮುಂದೆ ಸಿಯೆರ್ರಾ ಮೇಸ್ಟ್ರಾ ಪರ್ವತ ಪ್ರದೇಶಗಳಲ್ಲಿ ಗೆರಿಲ್ಲಾ ತಂಡಗಳು ಕಾದಾಡುವುದಕ್ಕೆ ಇವೆಲ್ಲಾ ಸ್ವಲ್ಪಮಟ್ಟಿಗೆ ಸಹಾಯ ಮಾಡಿತು. ಇದೇ ಸಮಯದಲ್ಲಿ ಸ್ಪೈಯಿನಿನ ನಿವೃತ್ತ ಸೈನ್ಯಾಧಿಕಾರಿ ಆಲ್ಬರ್ಟೋ ಬೇಯೋ ಎಂಬಾತ ಫಿಡೆಲ್ ತಂಡಕ್ಕೆ ತರಬೇತಿ ನೀಡುವ ತಜ್ಞನಾಗಿ ದೊರೆತ. ಸ್ಪೈಯಿನಿನ ಅಂತರ್ಯುದ್ಧದ ಸಮಯದಲ್ಲಿ ಫ್ರಾಂಕೋ ವಿರುದ್ಧವಾಗಿ ಪ್ರಜಾಪ್ರಭುತ್ವವಾದಿಗಳೊಡನೆ ಹೋರಾಡಿದ್ದ ಈತನ ಹಿಂದಿನ ತಲೆಮಾರಿನವರು ಕ್ಯೂಬಾ ನಿವಾಸಿಗಳಾಗಿದ್ದರು. ಫ್ಯಾಸಿಸ್ಟ್ ನಾಯಕ ಫ್ರಾಂಕೋ ಸ್ಪೈಯಿನಿನಲ್ಲಿ ಗೆದ್ದಾಗ ಈತ ಆ ರಾಷ್ಟ್ರವನ್ನು ತೊರೆದು ಕ್ಯೂಬಾಕ್ಕೆ ಹಿಂದಿರುಗಿದ್ದ. ಆಮೇಲೆ ಮೆಕ್ಸಿಕೋದಲ್ಲಿ ನೆಲೆಸಿದ್ದ. ಗೆರಿಲ್ಲಾ ಯುದ್ಧ ತಂತ್ರದ ಬಗ್ಗೆ ೧೯೫೫ರಲ್ಲಿ ಒಂದು ಪುಸ್ತಕವನ್ನೂ ಈತ ಬರೆದು ಪ್ರಕಟಿಸಿದ್ದ. ತರಬೇತಿ ನೀಡಲು ಮೊದಲು ಅಪಾರ ಹಣವನ್ನು ಕೇಳಿ ನಂತರ ಒಂದು ಚಿಕ್ಕಾಸೂ ಪಡೆಯದೆ ಶ್ರದ್ಧೆಯಿಂದ ಫಿಡೆಲ್ ತಂಡಕ್ಕೆ ಶಸ್ತ್ರಾಸ್ತ್ರಗಳ ಬಳಕೆ ಹಾಗೂ ಗೆರಿಲ್ಲಾತಂತ್ರದ ತರಬೇತಿ ನೀಡಿದ ಸ್ವಂತ ಹಣವನ್ನೂ ತನ್ನ ವಿದ್ಯಾರ್ಥಿಗಳಿಗಾಗಿ ಸಾಕಷ್ಟು ಖರ್ಚು ಮಾಡಲು ಆತ ಹಿಂದೆಗೆಯಲಿಲ್ಲ.

ತರಬೇತಿ ನೀಡಲು ಸುರಕ್ಷಿತವಾದ ಸ್ಥಳವನ್ನು ಆಯ್ಕೆ ಮಾಡಿ ಅವನ್ನು ತನ್ನ ಸ್ವಂತಕ್ಕೆಂದು ಖರೀದಿಸಿದವನೂ ಇವನೇ, ಸಾಲ್ವೆಡಾರಿನಿಂದ ಬಂದು ಮೆಕ್ಸಿಕೋದಲ್ಲಿ ನೆಲೆಸಿದ್ದ ರಾಜಕೀಯ ವಲಸೆಗಾರನಂತೆ ನಟಿಸಿ ನಗರದ ಹತ್ತಿರದ ಸಾಂಟಾ ರೋಸಾ ಎಂಬಲ್ಲಿ ಕಾಡಿನಿಂದ ತುಂಬಿದ್ದ ಬೆಟ್ಟ ಪ್ರದೇಶವೊಂದನ್ನು ಕೊಂಡು ಗೆವಾರ ಮೊದಲಾದ ಫಿಡೆಲ್ ತಂಡದವರನ್ನು ಅಲ್ಲಿ ನೆಲೆಯೂರುವಂತೆ ಮಾಡಿದ. ಈ "ಬೇಯೋ ವಿಶ್ವವಿದ್ಯಾನಿಲಯ"ದಲ್ಲಿ ಚೆ ಶಿಬಿರದ ನಾಯಕನಾದ, ಶಿಸ್ತಿಗೆ ಪ್ರಾಧಾನ್ಯ ನೀಡುತ್ತಿದ್ದ ಬೇಯೋ ದಳದ ಸದಸ್ಯರಿಗೆ ಕಟ್ಟುನಿಟ್ಟಾದ ಜೀವನಕ್ರಮ ವಿಧಿಸಿದ. ದೈಹಿಕ ವ್ಯಾಯಾಮ, ಮದ್ಯಪಾನ ನಿಷೇಧ, ನಿಗದಿತ ವೇಳೆಗೆ ಕೆಲಸಕಾರ್ಯಗಳಿಗೆ ಹಾಜರಾಗುವುದು ಇತ್ಯಾದಿ ವಿಧಿಗಳ ನಡುವೆ ಗುಂಡು ಹಾರಿಸುವುದು, ಭೂಪಟ ಅರ್ಥ ಮಾಡಿಕೊಳ್ಳುವುದು, ಕೈಬಾಂಬು ಎಸೆಯುವುದು, ಸ್ಫೋಟಕಗಳನ್ನು ತಯಾರಿಸುವುದು ಇತ್ಯಾದಿಗಳನ್ನು ವಿದ್ಯಾರ್ಥಿಗಳಿಗೆ ಕಲಿಸಿದ. ಸಾಕಷ್ಟು ಭಾರವನ್ನು ಹೊರಿಸಿ ಕಾಡುಮೇಡುಗಳಲ್ಲಿ ಸುದೂರ ನಡೆಯುವುದನ್ನು ಸಹ ಅವರಿಗೆ ಅಭ್ಯಾಸ ಮಾಡಿಸಿದ. ಇದೆಲ್ಲದರಲ್ಲೂ ಚೆ ಶ್ರದ್ಧೆಯಿಂದ ಭಾಗವಹಿಸಿ ಗೆರಿಲ್ಲಾ ತಂತ್ರವನ್ನು ಕರಗತ ಮಾಡಿಕೊಂಡ. ಒಂದೆಡೆ ಈ ತಂತ್ರವನ್ನು ಕಲಿಯುತ್ತಿದ್ದ ಚೆ ಇನ್ನೊಂದೆಡೆ ತನ್ನ ತಂಡಕ್ಕೆ ಗುರುವೂ ಆಗಿದ್ದ. ವೈದ್ಯಕೀಯ ತರಬೇತಿ ನೀಡುವುದು ಆತನ ಪಾಲಿಗೆ ಬಂದಿದ್ದ ಕರ್ತವ್ಯವಾಗಿತ್ತು. ಚುಚ್ಚುಮದ್ದು ನೀಡುವುದು, ಮುರಿದ ಮೂಳೆಯನ್ನು ಕಟ್ಟುವ ಕ್ರಮ, ಗಾಯದ ಶುಶ್ರೂಷೆ, ಇತ್ಯಾದಿಗಳನ್ನು ತಂಡದ ಎಲ್ಲ ಸದಸ್ಯರೂ ಕಲಿಯಬೇಕಿತ್ತು. ಅವನ್ನು ಹೇಳಿಕೊಟ್ಟವನು ಚೆ ಗೆವಾರ. ಇದರ ಜೊತೆಗೆ ಆತ ರಾಜಕೀಯ ಮುಖ್ಯಾಧಿಕಾರಿಯಾಗಿಯೂ ಕೆಲಸ ಮಾಡಬೇಕಿತ್ತು. ತಂಡದ ಸದಸ್ಯರ ಆರ್ಥಿಕ-ರಾಜಕೀಯ ತಿಳುವಳಿಕೆ ಹೆಚ್ಚಿಸಲು ಉಪನ್ಯಾಸ ನೀಡುವುದು. ಚರ್ಚೆಗಳನ್ನು ನಡೆಸುವುದು, ಇವೆಲ್ಲಾ ಚೆಯ ಜವಾಬ್ದಾರಿಗಳಾಗಿದ್ದವು.

ಫಿಡೆಲ್ ಆಗಾಗ್ಗೆ ಇಲ್ಲಿಗೆ ಭೇಟಿ ನೀಡಿ ತರಬೇತಿಯನ್ನು ವೀಕ್ಷಿಸುತ್ತಿದ್ದರು. ಉಳಿದಂತೆ ಹಣ ಸಂಗ್ರಹಣೆ, ಶಸ್ತ್ರಾಸ್ತ್ರಗಳನ್ನು ಶೇಖರಿಸುವುದು, ಕ್ಯೂಬಾದೊಡನೆ ಸಂಪರ್ಕವಿರಿಸಿಕೊಂಡು ಯೋಜನೆಯನ್ನು ರೂಪಿಸುವುದು, ಲೇಖನಗಳನ್ನು ಬರೆಯುವುದು, ಹೀಗೆ ಹತ್ತಾರು ಚಟುವಟಿಕೆಗಳಲ್ಲಿ ನಿರತರಾಗಿರಬೇಕಾಗಿತ್ತು.

೧೯೫೬ರ ಮಧ್ಯಭಾಗದ ವೇಳೆಗೆ ತರಬೇತಿಯನ್ನು ಪೂರ್ಣಗೊಳಿಸುವ ಭರವಸೆ ಬೇರೋಗಿತ್ತು. ಅತ್ತ ಕ್ಯೂಬಾದಲ್ಲಿ ಬಟಿಸ್ಟಾ ಸರ್ಕಾರದ ದುಷ್ಕೃತ್ಯಗಳು ನೂರ್ಮಡಿಯಾಗಿ ಹೆಚ್ಚಿದ್ದವು. ಎಷ್ಟೋ ರಾಜಕೀಯ ವಿರೋಧಿಗಳ ಕೈಕಾಲು ಮುರಿದು ಅವರನ್ನು ಸಮುದ್ರಕ್ಕೆ ಎಸೆಯುವವರೆಗೆ ಬೆಳೆದಿತ್ತು ಬಟಿಸ್ಟಾನ ದೌರ್ಜನ್ಯ. ಕ್ಯೂಬಾದ ಕಮ್ಯುನಿಸ್ಟ್ ಪಕ್ಷವು ಭೂಗತವಾಗುವಂತಹ ಸನ್ನಿವೇಶ ಬೆಳೆದಿತ್ತು. ಅಮೆರಿಕಾದ ಬಂಡವಾಳಿಗರು "ಸಕ್ಕರೆಯ ಪಾತ್ರೆ" ಎಂದು ಕರೆಯಲಾಗುತ್ತಿದ್ದ ಕ್ಯೂಬಾದಲ್ಲಿ ಅಪರಿಮಿತವಾದ ಲೂಟಿಯಲ್ಲಿ ತೊಡಗಲು ಬಟಿಸ್ಟಾ ಎಲ್ಲ ಅನುಕೂಲಗಳನ್ನು ಮಾಡಿಕೊಟ್ಟಿದ್ದ. ಆದ್ದರಿಂದಲೇ ಸಾಮ್ರಾಜ್ಯಶಾಹಿ ಅಮೆರಿಕಾ ಅವನನ್ನು "ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಗಳ ವಿಶ್ವಾಸಾರ್ಹ ರಕ್ಷಕ" ಎಂದು ಬಣ್ಣಿಸಿತ್ತು ! ಕ್ಯೂಬಾದಲ್ಲಿ ಅಮೆರಿಕಾದ ರಾಯಭಾರಿಯಾಗಿದ್ದ ಗಾರ್ಡನರ್ ಎಂಬಾತ ಅವನನ್ನು "ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕ ವ್ಯಕ್ತಿ" ಎಂದು ಘೋಷಿಸಿದ್ದ, ರೈತ–ಕಾರ್ಮಿಕರ ಸುಲಿಗೆ, ವಿದ್ಯಾರ್ಥಿ-ಯುವಜನರ ಚಳುವಳಿಗಳ ದಮನ ಇತ್ಯಾದಿಗಳೆಲ್ಲಾ ಪ್ರಜಾಪ್ರಭುತ್ವವಾದಿ ಕ್ರಮಗಳೆನಿಸಿಕೊಂಡಿದ್ದವು. ಕ್ಯೂಬಾ ಕೇವಲ ಒಂದು ವಸಾಹತು ರಾಜ್ಯವಾಗಿ ಮಾರ್ಪಾಡಾಗಿತ್ತು. ಪತ್ರಿಕೆಗಳು ಸಹ ಭೂಗತವಾಗಿ ಪ್ರಕಟವಾಗಬೇಕಾಗಿದ್ದಂತಹ "ಸ್ವಾತಂತ್ರ್ಯ" ಕ್ಯೂಬಾದ ಪಾಲಿಗೆ ಬಂದಿತ್ತು. ಜೋಸೆ ಮಾರ್ತಿಯಂತಹ ದಿಟ್ಟ ಹೋರಾಟಗಾರನ ರಾಜ್ಯ ಇಂತಹ ಹೀನಸ್ಥಿತಿಗೆ ಇಳಿದಿದ್ದುದನ್ನು ಪ್ರತ್ಯಕ್ಷವಾಗಿ ಕಾಣುತ್ತಿದ್ದ ಕ್ಯೂಬಾದ

ಜನ ಇನ್ನೂ ಹತಾಶರಾಗಿರಲಿಲ್ಲ. ಮಾರ್ತಿಯ ಮಾರ್ಗದಿಂದ ಸ್ಫೂರ್ತಿ ಪಡೆದು ರಾಷ್ಟ್ರವನ್ನು ಕಂಟಕದಿಂದ ಪಾರುಮಾಡಲು ಜನ ಇನ್ನೂ ಕಾತುರರಾಗಿದ್ದರು. ಅಮೆರಿಕಾದ ನೌಕಾ ಮತ್ತು ವಾಯುಬಲ ಬಟಿಸ್ಟಾನ ನೆರವಿಗೆ ನಿಂತು ಅವನ ಪಾತಕಗಳಿಗೆ ಕುಮ್ಮಕ್ಕು ನೀಡು ತ್ತಿದ್ದಂತಿತ್ತು. ಈಗಲೂ ಕ್ಯೂಬಾದ ಗ್ವಾಂಟನಾಮೋದಲ್ಲಿ ಅಮೆರಿಕಾದ ನೌಕಾನೆಲೆ ಇದೆಯೆಂಬುದನ್ನು ಮರೆಯುವಂತಿಲ್ಲ.

ಈ ಪರಿಸ್ಥಿತಿಯನ್ನು ಫಿಡೆಲ್ ಚೆನ್ನಾಗಿ ಅರ್ಥಮಾಡಿಕೊಂಡಿದ್ದ. ಅದರ ಆಧಾರದ ಮೇಲೆ ದಂಡಯಾತ್ರೆಯನ್ನು ಯೋಜಿಸಿದ್ದನೆಂದು ಬೇರೆ ಹೇಳಬೇಕಾಗಿಲ್ಲ. ಅಮೆರಿಕಾದ ಗುಪ್ತದಳ ಅವನ ಚಟುವಟಿಕೆ ಗಳನ್ನು ನಿಯಂತ್ರಿಸಲು ಗುಟ್ಟಾಗಿ ಮೆಕ್ಸಿಕೋವನ್ನು ಕೂಡ ಪ್ರವೇಶಿ ಸಿತ್ತು. ಮೆಕ್ಸಿಕೋದ ಗುಪ್ತ ಪೊಲೀಸರ ಸಹಾಯದಿಂದ ೧೯೫೬ರ ಜೂನ್ ೨೨ರಂದು ಫಿಡೆಲ್‌ನನ್ನು ಬಂಧಿಸಲಾಯಿತು ಮತ್ತು ಮರಿಯಾಳ ಮನೆಗೆ ನುಗ್ಗಿ ಅಲ್ಲಿದ್ದವರನ್ನೂ ಸೆರೆ ಹಿಡಿಯಲಾಯಿತು. ಚೇಯೋ ಹೆಸರಿನಲ್ಲಿದ್ದ ಸಾಂಟ ರೋಸಾಕ್ಕೆ ಹೋಗಿ ಚೆ ಮತ್ತು ಅವನ ಸಂಗಡಿಗರನ್ನೆಲ್ಲಾ ದಸ್ತಗಿರಿ ಮಾಡಲಾಯಿತು. ಇಷ್ಟಕ್ಕೆಲ್ಲಾ ಮೂಲ ಕಾರಣ ಬಟಿಸ್ಟಾನ ಬೇಹುಗಾರ ವೆನೇರಿಯಾ ಎಂಬೊಬ್ಬ ಫಿಡೆಲ್ ತಂಡ ದೊಳಕ್ಕೆ ತೂರಿಕೊಂಡಿದ್ದುದು. ಬಂಧಿತರನ್ನೆಲ್ಲಾ ಮಿಗುಯೆಲ್ ಶಲ್ಜ್ ಎಂಬ ಸೆರೆಮನೆಯಲ್ಲಿಡಲಾಗಿತ್ತು. ಮರಿಯಾ ಅಲ್ಲಿಗೆ ಹೋದಾಗ ಅತಿ ಕಡಿಮೆ ಉಡುಪು ಧರಿಸಿದ್ದ ಚೆ ಒಂದು ಬೆದರು ಬೊಂಬೆಯಂತೆ ಕಂಡನೆಂದು ಆಕೆ ದಾಖಲಿಸಿದ್ದಾಳೆ. ವಿಚಾರಣೆಗೆಂದು ಬಂಧಿತರನ್ನು ಹೊರಕ್ಕೆ ಕೊಂಡೊಯ್ದಾಗ ಕೈಕೋಳ ಹಾಕಲ್ಪಟ್ಟಿದ್ದ ವನು ಚೆ ಒಬ್ಬನೇ. ಅವನ ಗ್ವಾಟೆಮಾಲಾ ಹೋರಾಟದ ಖ್ಯಾತಿ ಇದಕ್ಕೆ ಕಾರಣವಾಗಿತ್ತು. ಅಂತೂ ಫಿಡೆಲ್‌ನ ಎರಡನೆಯ ಪ್ರಯತ್ನವೂ ಅಯಶಸ್ವಿಯಾಗುವುದು ಅನಿವಾರ್ಯವೆಂಬಂತೆ ತೋರಿ ಬಂತು. ಸ್ವತಃ ಫಿಡೆಲ್ ಅದನ್ನೊಪ್ಪಲು ಸಿದ್ಧನಿರಲಿಲ್ಲ. ಸೋಲು

ಗಳನ್ನೇ ಏಣಿ ಮಾಡಿಕೊಂಡು ಕ್ಯೂಬಾದ ವಿಮೋಚನೆಗೆ ಹತ್ತಲು ಆತ ಕಂಕಣಬದ್ಧನಾಗಿದ್ದ. ಈ ಅಪ್ರತಿಮ ನಂಬಿಕೆಯಿಂದಾಗಿ ಇತರ ಬಂಧಿತರೂ ಸ್ವಲ್ಪ ಚೈತನ್ಯ ತುಂಬಿಕೊಂಡರು.

ಅಮೇರಿಕಾದ ಆಣತಿಯಂತೆ ಕ್ಯೂಬಾದ ಕ್ರಾಂತಿಕಾರರನ್ನು ಮೆಕ್ಸಿಕೋ ಸರ್ಕಾರ ಬಂಧಿಸಿದ್ದನ್ನು ಮೆಕ್ಸಿಕೋದ ಪುರೋಗಾಮಿಗಳು ತೀವ್ರವಾಗಿ ಆಕ್ಷೇಪಿಸಿದರು ಮತ್ತು ಪ್ರತಿಭಟಿಸಿದರು. ಆ ದೇಶದ ಮಾಜಿ ಅಧ್ಯಕ್ಷ ಕಾರ್ಡೆನಸ್ ಸೇರಿದಂತೆ ಅನೇಕರು ಬಂಧಿತರ ಬಿಡುಗಡೆಗಾಗಿ ಆಗ್ರಹ ಪಡಿಸಿದರು. ಕಾರ್ಮಿಕ ಮುಖಂಡ ಟೊಲೆಡಾನೊ, ಕಲಾವಿದ ಸಿಕ್ವೆರಾಸ್ ಹಾಗೂ ವಿಶ್ವವಿದ್ಯಾನಿಲಯಗಳ ಅನೇಕ ಪ್ರಾಧ್ಯಾಪಕರು ಇದೇ ಒತ್ತಾಯವನ್ನು ಮಂಡಿಸಿದಾಗ ಬೇರೆ ದಾರಿ ಕಾಣದೆ ಬಂಧಿತರನ್ನು ಒಂದು ತಿಂಗಳ ಬಂಧನದಿಂದ ಬಿಡುಗಡೆ ಮಾಡಲಾಯಿತು. ಹಾಗೆ ಬಿಡುಗಡೆಯಾಗದವರೆಂದರೆ ಚೆ ಗೆವಾರ ಮತ್ತು ಕ್ಯೂಬಾದ ಕ್ಯಾಲಿಕ್ಸ್‌ಟೋ ಗಾರ್ಸಿಯಾ ಇಬ್ಬರೇ. ಅವರಿಬ್ಬರೂ ಅಕ್ರಮವಾಗಿ ಮೆಕ್ಸಿಕೋಗೆ ಬಂದಿದ್ದರೆಂಬ ಆಪಾದನೆಗೆ ಒಳಗಾಗಿದ್ದರು. ಆದರೂ ಸುಮಾರು ಇನ್ನೊಂದು ತಿಂಗಳು ಕಳೆಯುವುದರೊಳಗೆ ಈ ಇಬ್ಬರು ಸಹ ಬಿಡುಗಡೆಯಾಗಿ ಫಿಡೆಲ್‌ನನ್ನು ಸೇರಿಕೊಂಡರು.

ಸೆರೆಮನೆಯಿಂದ ಹೊರಬಂದಿದ್ದ ಫಿಡೆಲ್ ಕೂಡಲೆ ಮತ್ತೆ ಹಣ ಮತ್ತು ಸರಂಜಾಮನ್ನು ಶೇಖರಿಸುವುದರಲ್ಲಿ ಮಗ್ನರಾಗಿದ್ದರು. ಇಡೀ ತಂಡವನ್ನು ನಾಲ್ಕು ಭಾಗವನ್ನಾಗಿ ವಿಂಗಡಿಸಿ ಬೇರೆ ಬೇರೆ ದೂರದ ಪ್ರದೇಶದ ಬೆಟ್ಟ ಮತ್ತು ಕಾಡುಗಳಲ್ಲಿ ತರಬೇತಿಯನ್ನು ಮುಂದುವರಿಸಿಕೊಳ್ಳಲು ಕಳುಹಿಸಿದ. ಸಂಕೇತ ಪದ ಹಾಗೂ ಚಿಹ್ನೆಗಳನ್ನು ಬದಲಾಯಿಸಿಕೊಂಡು ಕ್ಯೂಬಾದೊಡನೆ ಸಂಪರ್ಕವನ್ನು ಮತ್ತೆ ಬೆಳೆಸಿಕೊಂಡ. ಎಲ್ಲಕ್ಕಿಂತ ಮಿಗಿಲಾಗಿ ಸ್ವೀಡನ್ನಿನ ವೆನ್ನರ್ ಗ್ರೆನ್ ಎಂಬುವವನಿಂದ "ಗ್ರಾನ್ಮಾ" ಎಂಬ ಹೆಸರಿನ ದೋಣಿಯೊಂದನ್ನು ೧೨ ಸಾವಿರ

ಡಾಲರುಗಳಿಗೆ ಖರೀದಿಸಿದ. (ಕ್ಯೂಬಾದ ರಾಷ್ಟ್ರೀಯ ದೈನಿಕ ಪತ್ರಿಕೆಗೆ ಈಗಲೂ "ಗ್ರಾನ್ಮಾ" ಎಂಬ ಹೆಸರಿದೆ) ಈ ದೋಣಿಯಾದರೋ ಬಹಳ ಚಿಕ್ಕದು. ಹೆಚ್ಚೆಂದರೆ ಹನ್ನೆರಡು ಪ್ರಯಾಣಿಕರಿಗೆ ಮಾಡಿಸಿದ್ದ ದೋಣಿ ಇದು. ಆದರೆ ಫಿಡೆಲ್ ಇದರಲ್ಲಿ ಸುಮಾರು ಎಂಭತ್ತು ಮಂದಿಯನ್ನು ಗುಟ್ಟಾಗಿ ಒಟ್ಟಿಗೆ ಮೆಕ್ಸಿಕೋದಿಂದ ಕ್ಯೂಬಾಕ್ಕೆ ಕರೆದು ಕೊಂಡು ಹೋಗುವ ಆಶಯ ಇರಿಸಿಕೊಂಡಿದ್ದ. ಪೋಲೀಸರು ಆತನ ಓಡಾಟಗಳನ್ನು ಗಮನಿಸುತ್ತಲೇ ಇದ್ದುದರಿಂದ ಆದಷ್ಟು ಬೇಗ ಮೆಕ್ಸಿಕೋ ತೀರವನ್ನು ಬಿಡಬೇಕಾದ ತುರ್ತು ಅವಶ್ಯಕತೆ ಇತ್ತು. ಸಾಕಷ್ಟು ಶಸ್ತ್ರಾಸ್ತ್ರಗಳನ್ನು ಇನ್ನೂ ಕೊಂಡಿರಲಿಲ್ಲ, ಕೊಳ್ಳಲು ಹಣವೂ ಇರಲಿಲ್ಲ. ಸ್ಯಾಂಟಿಯಾಗೋದಿಂದ ಫ್ರಾಂಕ್ ಪೇಯಿಸ್ ವೇಷ ಮರೆಸಿ ಬಂದು ಎಂಟು ಸಾವಿರ ಡಾಲರುಗಳನ್ನು ನೀಡಿ ಪ್ರಯಾಣವನ್ನು ಬೇಗನೆ ಕೈಗೊಳ್ಳಬೇಕೆಂದು ಸೂಚಿಸಿದ.

ಈ ಮಧ್ಯೆ ಇನ್ನೊಂದು ಮುಗ್ಗಟ್ಟು ಉಂಟಾಯಿತು. ಗ್ರಾನ್ಮಾ ವನ್ನು ಕೊಂಡಿದ್ದುದು ಫಿಡೆಲ್‌ನ ಅಂಗರಕ್ಷಕ ರ್‍ಯಾಫೆಲ್ ಡೆಲ್‌ಪಿನೋ ಹೆಸರಿನಲ್ಲಿ. ಅವನು ಬೇಹುಗಾರನಂತೆ ವರ್ತಿಸಿ ದೋಣಿ ಮತ್ತು ಫಿಡೆಲ್ ತಂಡವನ್ನು ಕ್ಯೂಬಾದ ರಾಯಭಾರ ಕಚೇರಿಗೆ ಒಪ್ಪಿಸಲು ಮತ್ತು ಅದರಿಂದ ಬೇಕಾದಷ್ಟು ಹಣ ಪಡೆಯಲು ಹೊಂಚು ಹಾಕು ತ್ತಿದ್ದುದು ತಿಳಿದುಬಂತು. ತಂಡದವರೆಲ್ಲಾ ತಮ್ಮ ಶಸ್ತ್ರಾಸ್ತ್ರ ಗಳೊಂದಿಗೆ ಚದುರಿ ಸ್ವಲ್ಪವೂ ತಡಮಾಡದೆ ಟಕ್ಸ್‌ಪ್ಯಾನ್ ಎಂಬ ಸಣ್ಣ ಮೀನುಗಾರಿಕೆ ಬಂದರಿನ ಬಳಿ ಗ್ರಾನ್ಮಾದೊಂದಿಗೆ ಸೇರಿಕೊಳ್ಳ ಬೇಕೆಂದು ತಿಳಿಸಿ ಪಿನೋಗೆ ತಿಳಿಯದಂತೆ ಫಿಡೆಲ್ ಅದೃಶ್ಯನಾದ. ಫ್ರಾಂಕ್ ಪೇಯಿಸ್ ನೇತೃತ್ವದ ದಂಗೆ ಸ್ಯಾಂಟಿಯಾಗೋದಲ್ಲಿ ಸಂಭವಿ ಸುವ ವೇಳೆಗೆ ತಂಡವು ಓರಿಯೆಂಟ್ ಪ್ರಾಂತ್ಯವನ್ನು ತಲುಪಬೇಕಿತ್ತು. ತಂಡದ ವೈದ್ಯನಾಗಿ ಚೆ ತನ್ನೆಲ್ಲಾ ಸಲಕರಣೆಗಳೊಂದಿಗೆ ಟಕ್ಸ್‌ಪ್ಯಾನ್ ತಲುಪಿದ. ಅಷ್ಟರಲ್ಲಿ ಪತ್ನಿ ಹಿಲ್ಡಾ ಮತ್ತು ಮಗುವಿಗೆ ವಿದಾಯ

ಹೇಳಿ ಬಂದಾಗಿತ್ತು. ಹಿಲ್ಡಾ ಅಗತ್ಯವಾಗಿ ಜ್ಞಾಪಿಸಿದ್ದಾಗ್ಯೂ ಗಡಿಬಿಡಿಯಲ್ಲಿ ತನ್ನ ಅಸ್ತಮಾ ತಡೆಗಟ್ಟುವ ಸೇದುವ ಸಲಕರಣೆಯನ್ನು ಚೆ ಮರೆತುಬಂದಿದ್ದ !

ಅಧ್ಯಾಯ ೪

ಕ್ಯೂಬಾಕ್ಕೆ

ವಿಶ್ವದ ಕ್ರಾಂತಿಯ ಇತಿಹಾಸದಲ್ಲಿ ನವಂಬರ್ ೨೫, ೧೯೫೬ ಒಂದು ಸಂಭ್ರಮದ ದಿನ. ಅಂದು ಬೆಳಗಿನಜಾವ ಎರಡು ಗಂಟೆಗೆ ಫಿಡೆಲ್ ತಂಡ ಗ್ರಾನ್ಮಾವನ್ನು ಹತ್ತಿ ಕ್ಯೂಬಾದ ಕಡೆಗೆ ಪ್ರಯಾಣಿಸಿತು. ಬಂದರಿನ ಬಳಿ ಯಥಾಪ್ರಕಾರ ಗದ್ದಲ ಮತ್ತು ಗೊಂದಲಗಳಿದ್ದುವಾದರೂ ಪೊಲೀಸರು ಅಲ್ಲಿಲ್ಲೂ ಸುಳಿದಾಡದಂತೆ ಮೊದಲೇ ಎಚ್ಚರವಹಿಸಲಾಗಿತ್ತು. ಮಳೆ ಮತ್ತು ಬಿರುಗಾಳಿ ಸಾಕಷ್ಟಿತ್ತು. ಶಸ್ತ್ರಾಸ್ತ್ರಗಳಲ್ಲದೆ ೮೨ ಮಂದಿ ಈ ಪುಟ್ಟದೋಣಿಯೊಳಗೆ ತುಂಬಿಕೊಂಡಿದ್ದರು. ಜೆ. ಗಾರ್ಸಿಯಾ ಮತ್ತು ಮೂವರು ಇತರರು ಟುಕ್ಸ್‌ಪ್ಯಾನ್ ತಲುಪುವ ಸಮಯಕ್ಕೆ ಗ್ರಾನ್ಮಾ ಆಗಲೇ ಹೊರಡುವುದರಲ್ಲಿತ್ತು. ಅವರ ವಾಹನದ ಚಾಲಕ ದಾರಿಯಲ್ಲಿ ಅಸಹಕಾರ ಸೂಚಿಸಿ ನಿಂತು ಬಿಟ್ಟಿದ್ದ. ಬಂದೂಕು ತೋರಿಸಿ ಅವನನ್ನು ಬಲವಂತವಾಗಿ ಟುಕ್ಸ್‌ಪ್ಯಾನ್‌ಗೆ ಹೋಗುವಂತೆ ಮಾಡಬೇಕಾಗಿ ಬಂದಿತ್ತು.

ಬಟಿಸ್ಟಾನ ನೌಕಾ ಮತ್ತು ವಾಯುದಳಗಳಿಗೆ ತಿಳಿಯುವಂತೆ ಗ್ರಾನ್ಮಾ ಓರಿಯೆಂಟ್ ತೀರವನ್ನು ಸೇರಬೇಕಾಗಿತ್ತು. ಹಾಗೇನಾದರೂ ತಿಳಿದು ಬಂದಿದ್ದರೆ ತಂಡವು ಪೂರ್ತಿಯಾಗಿ ನಾಶವಾಗುವ ಸಂಭವವಿತ್ತು. ದೋಣಿ ಮಗುಚಿ ಬೀಳುವಷ್ಟು ಮಂದಿ ತುಂಬಿದ್ದ ಆ ದೋಣಿಯಲ್ಲಿ ಮೂರು–ನಾಲ್ಕು ಜನವನ್ನು ಬಿಟ್ಟರೆ ಎಲ್ಲರೂ ಸಮುದ್ರದ ಅಲೆ

ಗಳಿದಾಗಿ ಎದ್ದು ಬೀಳುತ್ತಿದ್ದ ದೋಣಿಯಲ್ಲಿ ವಾಂತಿಗೆ ತುತ್ತಾಗಿದ್ದರು. ದೋಣಿಯೊಳಗೆ ನೀರು ನುಗ್ಗುವುದು, ಅದನ್ನು ಹೊರ ಚೆಲ್ಲುವ ಸಲಕೆ ಬೇರೆ. ದೋಣಿಯ ತೂಕ ಕಡಿಮೆ ಮಾಡಲು ತಮ್ಮಲ್ಲಿದ್ದ ಆಹಾರ ಸಾಮಗ್ರಿಗಳನ್ನು ಸಮುದ್ರಕ್ಕೆ ಎಸೆದರು ಕೂಡ. ಐದು ದಿನಗಳ ಪ್ರಯಾಣಕ್ಕೆಂದು ಸಿದ್ಧಪಡಿಸಿಕೊಂಡಿದ್ದ ಆಹಾರ ಮೂರು ದಿನಗಳಲ್ಲೇ ಮುಗಿದುಹೋಯಿತು ಮತ್ತು ಪ್ರಯಾಣವು ಐದು ದಿನಗಳ ಬದಲು ಏಳು ದಿನ ಆಗುವಂತೆ ತೋರಿತು. ಐದನೆಯ ದಿನದಂದು ಕೆಟ್ಟು ಹೋಗಿದ್ದ ಕಿತ್ತಳೆ ಹಣ್ಣು ಬಿಟ್ಟು ಬೇರೆ ಆಹಾರವೇ ಇರಲಿಲ್ಲ ! ಗೆವಾರನಿಗೆ ಅಸ್ತಮಾ ಬಾಧೆಯು ಬೇರೆ ತೀವ್ರವಾಯಿತು. ಎದೆಗುಂದದೆ ಆತ ಸಹಪ್ರಯಾಣಿಕರ ಜೊತೆ ಉಲ್ಲಾಸದಿಂದಲೇ ಇರುತ್ತಿದ್ದ. ರಾಬರ್ಟೋ ನುಚ್ ಎಂಬುವನನ್ನು ದೋಣಿಯ ಚುಕ್ಕಾಣಿ ಚಕ್ರದ ಉಸ್ತುವಾರಿಗೆ ಬಿಡಲಾಗಿತ್ತು. ಆ ಪುಣ್ಯಾತ್ಮ ಒಂದು ದೊಡ್ಡ ಅಲೆ ಬಡಿದಾಗ ಸಮುದ್ರದೊಳಕ್ಕೆ ಬಿದ್ದು ಹೋದ. ಅವನನ್ನು ಹಿಡಿದು ದೋಣಿಯೊಳಕ್ಕೆ ಎತ್ತಿ ಹಾಕಿಕೊಳ್ಳುವುದೇ ಒಂದು ಪ್ರಯಾಸವಾಯಿತು. ಒಂದೊಂದು ಗಳಿಗೆಯೂ ಪ್ರಶಸ್ತವಾಗಿದ್ದಾಗ ಹೀಗೆ ವೇಳೆ ಅಪವ್ಯಯವಾದದ್ದು ತಂಡಕ್ಕೆ ಭಾರಿ ಪೆಟ್ಟು ಬೀಳುವಂತಾಯಿತು. ನವೆಂಬರ್ ೨೦ ರಂದು ಸ್ಯಾಂಟಿಯಾಗೋದಲ್ಲಿ ಪೇಯಿಸ್ ನೇತೃತ್ವದಲ್ಲಿ ದಂಗೆ ಏಳುವುದಿತ್ತು. ಆದರೆ ಅಂದು ಗ್ರಾನ್ಮಾ ಸಮುದ್ರತೀರದಿಂದ ಇನ್ನೂ ಎರಡು ದಿನಗಳ ದೂರದಲ್ಲಿ ಉಳಿದಿತ್ತು. ಇನ್ನು ಸ್ಯಾಂಟಿಯಾಗೋ ಬಳಿಯ ನಿಕಾರೋ ಗ್ರಾಮದಲ್ಲಿ ಇಳಿದು ನಗರವನ್ನು ತಲುಪುವ ನಿರೀಕ್ಷೆ ಎಲ್ಲಿಯದು ! ಪೇಯಿಸ್ ಮಾತ್ರ ಯೋಜಿಸಿದ್ದಂತೆ ದಂಗೆಯನ್ನು ಸಂಘಟಿಸಿ ಸರ್ಕಾರದ ಕಟ್ಟಡಗಳನ್ನು ವಶಪಡಿಸಿಕೊಂಡ. ಆದರೆ ನಗರವನ್ನು ಅವರ ಹತೋಟಿಯಲ್ಲಿರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬದಲಿಗೆ ಗ್ರಾನ್ಮಾ ಬರುತ್ತಿರುವ ಸೂಚನೆ ಬಟಿಸ್ಟಾನ ವಾಯುದಳಕ್ಕೆ ತಿಳಿದು ಅದನ್ನು ಪತ್ತೆ ಹಚ್ಚಲು

ಪ್ರಯತ್ನ ಆರಂಭವಾಯಿತು. ಕಡೆಗೆ ಗ್ರಾನ್ಮಾ ತೀರವನ್ನು ಮುಟ್ಟಿದ್ದು ಡಿಸೆಂಬರ್ ೨ರಂದು. ತಾಯಿನಾಡನ್ನು ತಲುಪಿದ ಸಂತೋಷ ಒಂದು ಕಡೆಯಾದರೆ ಬಟಿಸ್ಟಾ ವಿಮಾನಗಳ ದಾಳಿಯ ಆತಂಕ ಇನ್ನೊಂದು ಕಡೆ. ಗ್ರಾನ್ಮಾ ತಲುಪಬೇಕಾಗಿದ್ದುದು ನಿಕಾರೋ ಬಳಿ, ಆದರೆ ತಲುಪಿದ್ದು ಕೇಪ್ ಕ್ರುಜ್ ಪ್ರದೇಶದ ಕೊಲೊರಾಡೋಸ್‌ನಲ್ಲಿ. ಕುತ್ತಿಗೆವರೆಗಿನ ನೀರಿನಲ್ಲಿ ನಡೆದು ತೀರವನ್ನು ಮುಟ್ಟಬೇಕಾಗಿತ್ತು. ಅಷ್ಟರಲ್ಲಿ ಬಟಿಸ್ಟಾನ ಕಾವಲು ದೋಣಿಗಳು ಹಾಗೂ ವಿಮಾನಗಳು ಆ ಪ್ರದೇಶವನ್ನು ಮುತ್ತಿ ಗುಂಡು ಹಾರಿಸಲು ಪ್ರಾರಂಭಿಸಿದುವು.

ಅದು ಜೌಗು ಪ್ರದೇಶ. ಅಲ್ಲಲ್ಲಿ ಕುರುಚಲು ಗಿಡಗಳು ಹಸಿವಿನಿಂದ ಬಳಲಿದ್ದ ಸೈನಿಕರಿಗೆ ಹೆಜ್ಜೆ ಇಡುವುದೇ ಪ್ರಯಾಸವಾಗಿತ್ತು. ಅಂಥದರಲ್ಲಿ ಗುಂಡಿನ ಮಳೆಯ ಮಧ್ಯೆ ಕಾಲೆಳೆದು ಓಡುವ ಪ್ರಶ್ನೆಯೇ ಇರಲಿಲ್ಲ. ಸ್ವಲ್ಪ ದೂರದಲ್ಲಿದ್ದ ಕಬ್ಬಿನತೋಟವನ್ನು ಹೇಗೋ ಸೇರಿಕೊಂಡರು. ಎರಡು ರಾತ್ರಿ ಈ ತೋಟವೇ ಅವರಿಗೆ ವಾಸಸ್ಥಾನವಾಯಿತು. ಆಹಾರಕ್ಕೆ ಕಬ್ಬು ಹೇಗೋ ಇತ್ತು. ಕಡಲ ತೀರದಿಂದ ತೋಟದ ಕಡೆಗೆ ದಾರಿ ತೋರಿಸಿದ್ದ ಗುರುತಿಲ್ಲದ ಯಾರೋ ಜನರು ಇವರ ಸುಳಿವನ್ನು ಬಟಿಸ್ಟಾ ಸೈನಿಕರಿಗೆ ತಿಳಿಸಿಬಿಟ್ಟದ್ದು ಅಪಾಯವನ್ನು ತಂದಿತು. ನಿತ್ರಾಣಗೊಂಡಿದ್ದ ಇವರನ್ನು ಮಧ್ಯಾಹ್ನದ ವೇಳೆಗೆ ಬಟಿಸ್ಟಾ ಸೈನಿಕರು ಪತ್ತೆ ಮಾಡಿದರು. ಗೆವಾರನಿಗೆ ಬೇರೆಲ್ಲರ ಗಾಯಗಳಿಗೆ ಶುಶ್ರೂಷೆ ಮಾಡಿಯೇ ಸುಸ್ತಾಗಿತ್ತು. ಈಗ ಗುಂಡಿನ ಕಾಳಗದಲ್ಲಿ ಬೇರೆ ಭಾಗಿಯಾಗಬೇಕಾಗಿ ಬಂತು. ದೋಣಿಯ ಪ್ರಯಾಣದ ವೇಳೆಯಲ್ಲಿ ಅಸ್ತಮಾದಿಂದ ಬಳಲಿದ್ದ ಚೆ ಒಂದು ಉತ್ತಮ ಕೋವಿಯನ್ನು ಸಹ ತನ್ನ ಬಳಿ ಇರಿಸಿಕೊಂಡಿರಲಿಲ್ಲ. ಫಿಡೆಲ್ ತಂಡದ ಬಳಿ ಉಳಿದಿದ್ದ ಸಿಡಿಮದ್ದು ಕೂಡ ಒದ್ದೆಯಾಗಿತ್ತು. ಚೆಬಳಿ ಒಂದು ಔಷಧ ಚೀಲ ಮತ್ತು ಸಿಡಿಮದ್ದಿನ ಒಂದು ಪೆಟ್ಟಿಗೆ ಇದ್ದವು. ಎರಡನ್ನೂ ಹೊತ್ತು ಕಬ್ಬಿನ ತೋಟದಲ್ಲಿ ನುಸುಳಿಕೊಳ್ಳುವುದು ಅಸಾಧ್ಯವೆನ್ನಿಸಿ ಔಷಧಿಯ ಚೀಲ

ವನ್ನು ಬಿಸುಟು ಓಡಿದೆ. ಎಲ್ಲಿಂದಲೋ ಬಂದ ಒಂದು ಗುಂಡು ಬಡಿದು ಚೆ ಕೆಳಗೆ ಬಿದ್ದ. ಅವನ ಸನಿಹದಲ್ಲೇ ಅರ್ಬೆಂಟೋಸ್ ಬಿದ್ದಿದ್ದ. ರಕ್ತದ ಮಡುವಿನಲ್ಲಿ ತಾನಿದ್ದಲ್ಲಿಂದಲೇ ಅವನು ಇನ್ನೂ ಗುಂಡು ಹಾರಿಸುತ್ತಿದ್ದ. ಅವನಂತೆ ಚೆ ಸಹ ಗುಂಡು ಹಾರಿಸಲು ಉಪ ಕ್ರಮಿಸಿದ.

"ನಾವೆಲ್ಲಾ ಶರಣಾಗೋಣ", ಎಂದು ಯಾರೋ ಒಬ್ಬ ಕೂಗಿ ಕೊಂಡ. ಕ್ಯಾಮಿಲೋ ಸ್ಯೆನ್‌ಫ್ಯೂಗೋಸ್ ಅದಕ್ಕೆ ಪ್ರತಿಭಟಿಸಿ ಅಬ್ಬರಿಸಿದ. "ನಾವು ಫಿಡೆಲ್ ಜನ. ಇಲ್ಲಿ ಯಾರೂ ಶರಣಾಗುವ ಮಂದಿ ಇರಲು ಸಾಧ್ಯವಿಲ್ಲ." ಅಲ್ಮೆಡಾ ಎಂಬೊಬ್ಬ ಗೆವಾರನ ಸಹಾ ಯಕ್ಕೆ ಬಂದು ಅವನನ್ನು ಜೊಂಡಿನೊಳಕ್ಕೆ ಎಳೆದು ಹಾಕಿದ. ಅಲ್ಲಿ ಫ್ಯಾಸ್ಟಿನೋ ಅವನ ಗಾಯಕ್ಕೆ ಔಷಧಿ ಹಾಕಿ ಬಟ್ಟೆ ಕಟ್ಟಿದ. ಫಿಡೆಲ್ ತಂಡ ಗುಂಡುಗಳ ಸುರಿಮಳೆಯಲ್ಲಿ ಚದುರಿಹೋಗಿತ್ತು. ಚೆ ಇದ್ದಲ್ಲಿ ಉಳಿದವರಿದ್ದುದು ನಾಲ್ಕೇ ಮಂದಿ. ಇವರೆಲ್ಲಾ ಕಬ್ಬಿನತೋಟ ಗಳಲ್ಲಿ ಅವಿತುಕೊಂಡು ಮುಂದೆ ಸಾಗಿದರು. ಅವರು ಹೀಗೆ ದಾಳಿಗೆ ತುತ್ತಾಗಿದ್ದುದು ಅಲೆಗ್ರಿಯಾದ ಪಿಯೋ ಎಂಬಲ್ಲಿ. ಅದೇ ಮೊದಲ ಕಾಳಗದ ಅನುಭವ, ಕ್ರಾಂತಿಯ ಕಾದಾಟದಲ್ಲಿ ಪ್ರಥಮ ಬಾಗಿನ. ಅಂದು, ಅಂದರೆ ೧೯೫೬ರ ಡಿಸೆಂಬರ್ ೫ ರಂದು, ಬಟಿಸ್ಟಾನ ಭಾರಿ ಸೈನ್ಯದ ಪೆಟ್ಟನ್ನು ಫಿಡೆಲ್ ತಂಡ ಸವಿಯಿತು.

ಕಾಳಗದಲ್ಲಿ ಸುಮಾರು ನಲವತ್ತು ಮಂದಿ ಮಡಿದಿದ್ದರು, ಇಪ್ಪತ್ತು ಮಂದಿ ಸೆರೆ ಸಿಕ್ಕಿದ್ದರು. ಅವರಲ್ಲೂ ಕೆಲವರನ್ನು ನಂತರ ಬಟಿಸ್ಟಾ ಸೈನಿಕರು ಗುಂಡಿಕ್ಕಿ ಕೊಂದರು. ಮೂರು ದಿನಗಳ ತರುವಾಯ ಫಿಡೆಲ್ ತಂಡದಲ್ಲಿ ಉಳಿದಿದ್ದವರೆಲ್ಲಾ ಒಬ್ಬ ರೈತನ ಗುಡಿಸಿಲಿನಲ್ಲಿ ಸೇರಿ ದರು. ಕ್ರಾಂತಿಯುದ್ಧವನ್ನು ಗೆಲ್ಲುವ ವಿಶ್ವಾಸ ತನಗಿದೆಯೆಂದು ಫಿಡೆಲ್ ನುಡಿದ ಮತ್ತು ಹತ್ತಿರದಲ್ಲೇ ಇದ್ದ ಸಿಯೆರ್ರಾ ಮೇಸ್ತ್ರಾ ಬೆಟ್ಟ ಪ್ರದೇಶಕ್ಕೆ ತೆರಳಿ ಜನಸಂಪರ್ಕ ಹೆಚ್ಚಿಸಕೊಳ್ಳಬೇಕೆಂದು

ಸೂಚಿಸಿದ. ಅಲ್ಲಿಯ ರೈತರು ಇವರನ್ನು ಆದರದಿಂದ ಬರಮಾಡಿ ಕೊಂಡು ಆಶ್ರಯ ನೀಡಿದರು.

ಸೋಲಿನ ಕಹಿ ಅನುಭವ ಮತ್ತು ಹತ್ತಾರು ಸಹಚರರ ಸಾವು ಫಿಡೆಲ್ ತಂಡದವರನ್ನು ಕಂಗಾಲಾಗಿಸಿತ್ತು. ತಮ್ಮ ಗೆಲುವಿನ ಸಾಧ್ಯತೆಯ ಬಗ್ಗೆ ವಿಶ್ವಾಸ ಕುದುರಿಸಿಕೊಳ್ಳಲು ಮೊದಲು ಒಂದು ಸಣ್ಣ ವಿಜಯವನ್ನಾದರೂ ಸಾಧಿಸಬೇಕಾಗಿತ್ತು. ಅದಕ್ಕಾಗಿ ೧೯೫೭ರ ಜನವರಿ ೧೬ರವರೆಗೆ ಅವರು ಕಾಯಬೇಕಾಯಿತು. ಅಂದು ಲ ಪ್ಲಾತ ನದಿಯ ದಂಡೆಯಲ್ಲಿದ್ದ ಒಂದು ಮಿಲಿಟರಿ ಠಾಣೆಯ ಮೇಲೆ ಹಲ್ಲೆ ನಡೆಸಿ ಬಂಡಾಯಗಾರರು ಅದನ್ನು ವಶಪಡಿಸಿಕೊಂಡರು. ಮೂರು ಮಂದಿ ಸೈನಿಕರನ್ನು ಸೆರೆ ಹಿಡಿಯಲಾಗಿತ್ತು ಮತ್ತು ಅನೇಕ ಆಯುಧ ಸಾಮಗ್ರಿಗಳೂ ಇವರ ಪಾಲಾಗಿತ್ತು. ಗಾಯಗೊಂಡಿದ್ದ ಐದು ಸೈನಿಕರಿಗೆ ಚಿಕಿತ್ಸೆ ನೀಡಿ ಬಂಧಿತ ಸೈನಿಕರೊಡನೆ ಅವರನ್ನು ಬಿಡುಗಡೆ ಮಾಡಬೇಕೆಂದು ಫಿಡೆಲ್ ಸೂಚಿಸಿದ.

ರೈತರು ಫಿಡೆಲ್ ತಂಡಕ್ಕೆ ಸಹಾಯ ಮಾಡುತ್ತಿದ್ದರಾದರೂ ಅವರೇ ಹೋರಾಟದಲ್ಲಿ ನೇರವಾಗಿ ಪಾಲುಗೊಳ್ಳಲು ಇನ್ನೂ ಸಿದ್ಧರಿರಲಿಲ್ಲ. ಸಿಯೆರ್ರಾ ಮೇಸ್ಟ್ರಕ್ಕೆ ತೆರಳಿ ಅಲ್ಲಿಂದ ಹೋರಾಟ ಮುಂದುವರಿಸಬೇಕೆಂಬ ತೀರ್ಮಾನಕ್ಕೆ ರೈತರು ಪಾಲ್ಗೊಳ್ಳುತ್ತಾರೆಂಬ ನಂಬಿಕೆಯೂ ಒಂದು ಕಾರಣವಾಗಿತ್ತು. ಹತ್ತೊಂಭತ್ತನೆಯ ಶತಮಾನದಲ್ಲಿ ಸ್ಪೈಯಿನ್ ವಸಾಹತುಶಾಹಿಯ ವಿರುದ್ಧ ಹೋರಾಡಿದ್ದ ದೇಶಾಭಿಮಾನಿಗಳೂ ಈ ಪರ್ವತಪ್ರದೇಶವನ್ನೇ ಮೊದಲು ಆಶ್ರಯಿಸಿದ್ದುದು. ಅಲ್ಲಿಯ ಗುಹೆಗಳಲ್ಲಿ ಅಡಗಿದರೆ ಯಾವ ವಿಮಾನ ದಾಳಿಯೂ ಅವರನ್ನು ಸೋಲಿಸುವಂತಿರಲಿಲ್ಲ. ಹಾಗೆ ಅಡಗಿ ಕೂತವರನ್ನು ಹೊರತೆಗೆಯಲು ಬಟಿಸ್ಟಾನ ಸೈನ್ಯ ಬಂದರೆ ಅದಕ್ಕೆ ಮಣ್ಣುಮುಕ್ಕಿಸುವ ಸಾಧ್ಯತೆಯೂ ಇಲ್ಲಿ ಹೆಚ್ಚಾಗಿತ್ತು. ಫಿಡೆಲ್ ಸ್ವತಃ ಓರಿಯೆಂಟ್ ಪ್ರಾಂತ್ಯಕ್ಕೆ ಸೇರಿದ್ದರೂ ಹತ್ತಿರದಲ್ಲೇ ಇದ್ದ ಸಿಯೆರ್ರಾ ಮೇಸ್ಟ್ರಕ್ಕೆ

ಎಂದೂ ಹೋಗಿದ್ದವನಲ್ಲ. ತಂಡದ ಇತರರಿಗೂ ಆ ದುರ್ಗಮ ಬೆಟ್ಟಗಳ ಪರಿಚಯವಿರಲಿಲ್ಲ. ಗೆವಾರನಿಗಂತೂ ಅದರ ಗಂಧವೇ ತಿಳಿದಿರಲಿಲ್ಲ. ಜನವರಿ ೧೬ರ ನಂತರ ಅದೇ ೨೨ರಂದು ಬಟಿಸ್ಟಾ ಸೈನಿಕರ ಒಂದು ಘಟಕವನ್ನು ಅರಾಯೋದ ಇನ್‌ಫಿಯರ್ನೊ ಎಂಬಲ್ಲಿ ಹಿಮ್ಮೆಟ್ಟಿಸಿ ಫಿಡೆಲ್ ತಂಡ ಬೆಟ್ಟಗಳನ್ನು ಹೊಕ್ಕಿತು. ಅಲ್ಲಿಂದ ಚೆ ತನ್ನ ಪತ್ನಿ ಹಿಲ್ಡಾಗೆ ಪತ್ರವೊಂದನ್ನು ಬರೆದು ಯಾರ ಕೈಲೋ ಕಳಿಸಿ ಸ್ಯಾಂಟಿಯಾಗೋದಲ್ಲಿ ಅಂಚೆಪೆಟ್ಟಿಗೆಗೆ ಹಾಕಿಸಿದ. ಗ್ರಾನ್ಮಾದಲ್ಲಿ ಹೊರಟಂದಿನಿಂದ ಎರಡು ತಿಂಗಳ ಅನುಭವವನ್ನು ಆಕೆಗೆ ತಿಳಿಸಿ, ಪತ್ರ ಬರೆಯುವುದಿದ್ದರೆ ಪಟೋಜೋನ ವಿಳಾಸಕ್ಕೆ ಬರೆಯಬೇಕೆಂದು ತಿಳಿಸಿದ. ಮಗಳ ಕ್ಷೇಮ ಸಮಾಚಾರ ವಿಚಾರಿಸುತ್ತಾ ಹೀಗೆ ಬರೆದ: "ಅಲ್ಲಿ ಎಲ್ಲಾ ಹೇಗಿದೆ ? ಅದರಲ್ಲೂ ನಮ್ಮ ಅನುರಾಗದ ಅತ್ಯಂತ ಪ್ರೀತಿಯ ಪುಷ್ಪ ಹೇಗಿದೆ ? ಅವಳನ್ನು ಅಪ್ಪಿ ಅವಳು ಅಳುವವರೆಗೂ ಮುದ್ದಾಡಬೇಕೆನಿಸುತ್ತದೆ. ನಾನು ಬರುವಾಗ ಅವಸರದಲ್ಲಿ ನಿನ್ನ ಭಾವಚಿತ್ರಗಳನ್ನು ಪಾಂಚೋನ ಮನೆಯಲ್ಲೇ ಬಿಟ್ಟುಬಂದೆ. ಅವನ್ನು ನನಗೆ ಕಳಿಸು."

ಬಟಿಸ್ಟಾನ ವಿಮಾನಗಳು ಹಾಗೂ ಸೈನಿಕರು ಫಿಡೆಲ್ ತಂಡದ ಬೆನ್ನತ್ತಿ ಸಾಗುತ್ತಲೇ ಇದ್ದರು. ಬೆಟ್ಟಗಳಲ್ಲೂ ಊರನ್ನು ಹೊಕ್ಕರೆ ಅಪಾಯವುಂಟಾಗಬಹುದೆಂದು ಊರುಗಳಾಚೆಯೇ ಇರುವುದು ವಾಡಿಕೆಯಾಗಿತ್ತು. ಹೊಸದಾಗಿ ತಂಡವನ್ನು ಸೇರಿಕೊಂಡಿದ್ದ ಯುಟಿಮಿಯೋ ಪರ್ವತಪ್ರದೇಶದ ಪರಿಚಯ ಚೆನ್ನಾಗಿದ್ದ ಒಬ್ಬ ರೈತ. ಬಟಿಸ್ಟಾ ಸೈನಿಕರಿಗೆ ಒಮ್ಮೆ ಅವನು ಸಿಕ್ಕಿ ಬಿದ್ದಿದ್ದ. ಫಿಡೆಲ್‌ನನ್ನು ಕೊಂದರೆ ಬಹುಮಾನ ನೀಡುವುದಾಗಿ ಹುಚ್ಚುಹಿಡಿಸಿ ಸೈನಿಕರು ಅವನನ್ನು ಬಿಟ್ಟಿದ್ದರು ಮತ್ತು ಅವನು ತಂಡವನ್ನು ಮತ್ತೆ ಸೇರಿಕೊಂಡಿದ್ದ. ಅಕಸ್ಮಾತ್ತಾಗಿ ಅವನ ಸಂಚು ಹೊರಬಿತ್ತು ಮತ್ತು ಅವನನ್ನು ಮರಣದಂಡನೆಗೆ ಗುರಿಮಾಡಲಾಯಿತು. ಅವನು ಕಡೆಯ

ದಾಗಿ ವ್ಯಕ್ತಪಡಿಸಿದ್ದ ಆಶಯ ಇಷ್ಟೆ "ಕ್ರಾಂತಿ ಸಫಲವಾದ ನಂತರ ನನ್ನ ಮಕ್ಕಳಿಗೆ ವಿದ್ಯಾಭ್ಯಾಸ ವ್ಯವಸ್ಥೆಯನ್ನು ಮಾಡಿಕೊಡಿ." ಇದನ್ನು ಯಥಾವತ್ತಾಗಿ ಮಾಡಲಾಯಿತೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ.

ಈ ಸವಾರಿನಲ್ಲಿ ಚೆ ಒಂದು ಅಪಾಯದಲ್ಲಿ ಸಿಲುಕಿಕೊಂಡ. ಮೊದಲೇ ಆರೋಗ್ಯ ಕ್ಷೀಣಿಸಿತ್ತು. ಜೊತೆಗೆ ಔಷಧಿಗಳೂ ಇರಲಿಲ್ಲ. ಹೀಗಿರುವಾಗ ಬಟಿಸ್ಟಾ ಸೈನಿಕರ ಅನಿರೀಕ್ಷಿತ ದಾಳಿಗೆ ಬೇರೆ ಒಮ್ಮೆ ತುತ್ತಾದ ತಂಡದ ಇತರರು ಓಡಿ ತಪ್ಪಿಸಿಕೊಂಡರು. ಚೆ ಹಾಗೆ ಮಾಡಲು ಅಶಕ್ತನಾಗಿದ್ದ. ಕ್ರೆಸ್ಪೊ ಎಂಬೊಬ್ಬ ರೈತ ಇವನನ್ನು ತನ್ನ ಹೆಗಲ ಮೇಲೆ ಹಾಕಿಕೊಂಡು ಓಡಿದ. ನಂತರ ಬಟಿಸ್ಟಾ ವಿರೋಧಿ ರೈತನೊಬ್ಬನ ಮನೆಯಲ್ಲಿ ಆರೈಕೆಗಾಗಿ ಚೇನನ್ನು ಬಿಡಲಾಯಿತು. ಆತ ಇವನಿಗೆ ಎಲ್ಲಿಂದಲೋ ಅಡ್ರೆನಲಿನ್ ತಂದೊದಗಿಸಿದ ನಂತರ ಚೆ ಚೇತರಿಸಿಕೊಂಡದ್ದು. ಆದರೂ ತಂಡದ ಇತರರೊಂದಿಗೆ ಸುಲಭವಾಗಿ ಚಲಿಸಲು ಇನ್ನೂ ಸಾಧ್ಯವಿರಲಿಲ್ಲ. ಬೇರೆಯವರಿಗಿಂತ ಹತ್ತುಪಟ್ಟು ಹಿಂದುಳಿಯುವ ಸ್ಥಿತಿ ಅವನದಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ತಂಡಕ್ಕೆ ಭಾರವಾಗಬಾರದೆಂಬ ಕಾರಣದಿಂದ ಹತ್ತಿರದ ಒಂದು ಗುಡಿಸಿಲಿನಲ್ಲಿ ಆತ ಉಳಿದುಕೊಂಡು ಕೋವಿಯ ಬದಲು ಕೈಯಲ್ಲಿ ಪುಸ್ತಕ ಹಿಡಿಯಬೇಕಾಯಿತು. ಆ ಕಾಲದ ಒಂದು ಛಾಯಾಚಿತ್ರ ಲಭ್ಯವಿದೆ. ಅದರಲ್ಲಿ ಎಮಿಲ್ ಲುಡ್ವಿಗ್ ಬರೆದಿರುವ ಗಯಟೆಯ ಜೀವನಚರಿತ್ರೆಯನ್ನು ಚೆ ಓದುತ್ತಿರುವುದನ್ನು ಕಾಣಬಹುದು. ನಿದ್ದೆಗೆಟ್ಟು ಓದುವುದು, ಟಿಪ್ಪಣಿಗಳನ್ನು ಬರೆಯುವುದು ಮತ್ತು ಒಳ್ಳೆಯ ದಿನಗಳನ್ನು ಎದುರು ನೋಡುವುದು ಚೆ ದಿನಚರಿಯಾಯಿತು.

ಅಸ್ತಮಾದಿಂದ ನರಳುತ್ತಿದ್ದರೂ ಹೀಗೆ ಹೋರಾಟದ ಕಣಕ್ಕೆ ಇಳಿದಿದ್ದ ವಿದೇಶಿ ಯುವಕನನ್ನು ಕಂಡು ಸಿಯೆರಾ ಮೆಸ್ಟ್ರಾದ ರೈತರಿಗೆ ವಿಸ್ಮಯವೆನಿಸಿತು. ಪೊನ್ಸಿಯಾನ ಪೆರೆಜ್ ಎಂಬೋರ್ವ ವೃದ್ಧ ಮಹಿಳೆ ಚೇಗೆ ಬಾಧೆ ಹೆಚ್ಚಾದಾಗ ಎಷ್ಟೋ ಬಾರಿ ಕುಡಿಯಲು ಬಿಸಿ

ಬಿಸಿಯಾಗಿ ಏನನ್ನಾದರೂ ಮಾಡಿಕೊಡುತ್ತಿದ್ದಳು. ಅವನ ಸರಳತೆ, ಧೈರ್ಯ ಮತ್ತು ನ್ಯಾಯಪರ ನಿಲುವು ಅವನನ್ನು ರೈತರಿಗೆ ಸಮೀಪ ವಾಗಿಸಿದುವು. ಅವರೊಡನೆ ರಾಜಕೀಯ ಚರ್ಚೆ ನಡೆಸಲು ಮತ್ತು ಅವರ ಸಹಕಾರ ಪಡೆಯಲು ಚೆ ಉತ್ತಮ ವಕ್ತಾರನಾದ.

ಅತ್ತ ಸ್ಯಾಂಟಿಯಾಗೋ ಮತ್ತು ಹವಾನಾಗಳಲ್ಲಿ ಜುಲೈ ೨೬ರ ಚಳುವಳಿ ಜೀವ ತುಂಬಿಕೊಂಡು ಮತ್ತೆ ಸಕ್ರಿಯವಾಗಿತ್ತು. ಫ್ರಾಂಕ್ ಪೇಯಿಸ್ ಮತ್ತಿತರರು ಸಿಯೆರ್ರಾ ಮೇಸ್ಟ್ರಾಕ್ಕೆ ಬಂದು ಫಿಡೆಲ್‌ನನ್ನು ಸಂಧಿಸಿ ಮಾತುಕತೆ ನಡೆಸಿದರು. ತಂಡದ ಆಹಾರ, ಶಸ್ತ್ರಾಸ್ತ್ರ ಇತ್ಯಾದಿ ಗಳನ್ನು ಪೂರೈಸುವುದು, ಇನ್ನಷ್ಟು ಮಂದಿಯನ್ನು ತಂಡಕ್ಕ ಸೇರುವಂತೆ ಕಳಿಸುವುದು; ಮುಂತಾದ ತೀರ್ಮಾನಗಳು ಬಂಡಾಯದ ಹಾದಿಯನ್ನು ಉತ್ತಮಗೊಳಿಸಿದುವು. ನಗರಗಳಲ್ಲೂ ಬಟಿಸ್ಟಾ ವಿರೋಧಿ ಕಾರ್ಯಾ ಚರಣೆಗಳನ್ನು ಹೆಚ್ಚಿಸುವತ್ತ ಗಮನ ನೀಡಬೇಕೆಂದು ತೀರ್ಮಾನಿಸ ಲಾಗಿತ್ತು. ಅದರಂತೆ ವಿದ್ಯಾರ್ಥಿಗಳು, ಮಹಿಳೆಯರು ಮತ್ತು ಕಾರ್ಮಿ ಕರು ಅನೇಕ ಬಾರಿ ಬೀದಿಗಿಳಿದರು. ಐವತ್ತು ಸ್ವಯಂಸೇವಕರು ಜಾರ್ಜ್ ಸೋಟಸ್‌ನ ನಾಯಕತ್ವದಲ್ಲಿ ಸಿಯೆರ್ರಾ ಮೇಸ್ಟ್ರಾಗೆ ಬರಲಿದ್ದರು. (ಈ ಸೋಟಸ್ ಒಬ್ಬ ಕಮ್ಯುನಿಸ್ಟ್ ವಿರೋಧಿಯಾಗಿದ್ದು ಕ್ರಾಂತಿಯ ನಂತರ ಅಮೆರಿಕಾಕ್ಕೆ ಹೋಗಿ ಅಲ್ಲಿಂದ ಕ್ಯೂಬಾ ವಿರುದ್ಧ ಕಾರ್ಯಾಚರಣೆಗೆ ಹವಣಿಸಿ ಮೃತಿ ಹೊಂದಿದವನು); ಈ ತಂಡವನ್ನು ಚೆ ಅಧೀನಕ್ಕೆ ಕೊಡಬೇಕೆಂದು ಫಿಡೆಲ್ ಆಜ್ಞಾಪಿಸಿದ್ದ. ವಿದೇಶದವನೊಬ್ಬನಿಗೆ ತನ್ನ ಸ್ವಯಂ ಸೇವಕರನ್ನು ವಹಿಸಿಕೊಡಲು ಸರ್ವಥಾ ಸಾಧ್ಯವಿಲ್ಲವೆಂದು ಸೋಟಸ್ ಗುಡುಗಿದ. ತಾನು ಪರಕೀಯನಂತೆ ವರ್ತಿಸದಿದ್ದರೂ ತನ್ನನ್ನು ಇನ್ನೂ ಎಷ್ಟೋ ಮಂದಿ ಪರಕೀಯನಂತೆ ಪರಿಗಣಿಸುತ್ತಿದ್ದುದು ಚೆ ತನ್ನ ಜೀವನದುದ್ದಕ್ಕೂ ಕಂಡುಕೊಂಡಿದ್ದ ಸಂಗತಿ. ತನ್ನ ಆಜ್ಞೆಯನ್ನು ಪಾಲಿಸಲಿಲ್ಲವೆಂದು ಫಿಡೆಲ್ ಕೂಡ ಚೇನನ್ನು ಛೇಡಿಸಿದ. ಸೋಟಸ್

ಬಗ್ಗೆ ದೂರಲು ಚೆ ಸಿದ್ಧವಿರಲಿಲ್ಲವಾದ್ದರಿಂದ ಫಿಡೆಲ್‌ನ ಟೀಕೆಯನ್ನು ಸುಮ್ಮನೆ ಸಹಿಸಿಕೊಂಡ.

ಬಂಡಾಯಗಾರರ ಸಂಖ್ಯೆ ಹೆಚ್ಚಿದಂತೆ ತುಕಡಿಗಳೂ ಹೆಚ್ಚಿ ಪ್ರತಿಯೊಂದು ತುಕಡಿಗೂ ಒಬ್ಬೊಬ್ಬ ನಾಯಕನನ್ನು ನೇಮಿಸ ಲಾಯಿತು. ಕೇಂದ್ರದ ವೈದ್ಯಕೀಯ ವಿಭಾಗದ ಮುಖ್ಯಸ್ಥನನ್ನಾಗಿ ಗೆವಾರನನ್ನು ಆರಿಸಲಾಯಿತು. ಅನೌಪಚಾರಿಕವಾಗಿ ಆತ ಫಿಡೆಲ್‌ಗೆ ಸಲಹೆಗಾರನೂ ವಿಶೇಷ ಕರ್ತವ್ಯಗಳ ಅಧಿಕಾರಿಯೂ ಆಗಿ ಕೆಲಸ ಮಾಡಿದ. ಸಿಯೆರ್ರಾ ಮೇಸ್ಟ್ರಾದಿಂದ ಓರಿಯೆಂಟ್ ಪ್ರಾಂತ್ಯಕ್ಕೆ ಹೋಗಬೇಕಾದರೆ ಯುವೆರೋದಲ್ಲಿದ್ದ ಬಟಿಸ್ಟಾ ಸೈನ್ಯದ ಪಾಳೆಯವನ್ನು ವಶಪಡಿಸಿಕೊಳ್ಳಬೇಕಾಗಿತ್ತು. ಇದಕ್ಕಾಗಿ ವಿಶೇಷ ತರಬೇತಿ ಮತ್ತು ಸಿದ್ಧತೆಗಳ ಅವಶ್ಯಕತೆ ಇತ್ತು. ೧೯೫೭ರ ಮೇ ೨೭ರಂದು ಸೇನಾಧಿಕಾರಿ ಗಳ ಸಭೆ ನಡೆದು ಆಕ್ರಮಣದ ದಿನವನ್ನು ಗೊತ್ತುಪಡಿಸಲಾಯಿತು. ತೀವ್ರವೂ ದೀರ್ಘವೂ ಆದ ಕದನ ಜರುಗಿ ಯುವೆರೋ ಬಂಡಾಯ ಗಾರರ ವಶಕ್ಕೆ ಬಂತು. ಈ ಕದನದಲ್ಲಿ ಚೆ ಪಾತ್ರ ಅಮೋಘವಾಗಿದಿತ್ತು. ಅಸ್ತಮಾ ರೋಗಿಯೆಂದು ಹೀಗಳೆಯುತ್ತಿದ್ದ ಬಂಡಾಯಗಾರರು ಸಹ ಆತನ ಎದೆಗಾರಿಕೆ ಮತ್ತು ತಂತ್ರಗಳನ್ನು ಮೆಚ್ಚಿಕೊಂಡರು. ಯೋಧ, ತಂತ್ರಜ್ಞ ಹಾಗೂ ವೈದ್ಯನಾಗಿ ಚೆ ಈ ಕದನದಲ್ಲಿ ವಹಿಸಿದ್ದ ಪಾತ್ರವನ್ನು ಫಿಡೆಲ್ ಬಹುವಾಗಿ ಪ್ರಶಂಸಿಸಿದ್ದಾರೆ. ಇದೇ ಸಂದರ್ಭದಲ್ಲಿ ವೀರಾವೇಶ ದಿಂದ ಹೋರಾಡಿದ್ದ ಇನ್ನೊಬ್ಬ ವ್ಯಕ್ತಿ ಯುವಾನ್ ನುನೆಜ್. ಇವನು ಮುಂದೆ ಚೆ ಜೊತೆಗೆ ಬೊಲಿವಿಯಾದಲ್ಲಿ ಕಾದಾಡಿ ಅಮರನಾದನು.

ಬಂಡುಕೋರರಿಗೆ ರೈತರ ಬೆಂಬಲ ಇಲ್ಲದಂತೆ ಮಾಡಲು ಬಟಿಸ್ಟಾ ಬೇರೊಂದು ಉಪಾಯ ಮಾಡಿದ. ಹಾಗೆ ಮಾಡಿದರೆ ಫಿಡೆಲ್ ತಂಡಕ್ಕೆ ಸೋಲು ಖಚಿತವೆಂದು ಅವನ ನಂಬಿಕೆಯಾಗಿತ್ತು. ಸಿಯೆರ್ರಾ ಮೇಸ್ಟ್ರಾದ ರೈತರೆಲ್ಲಾ ಬೆಟ್ಟ ಇಳಿದು ಹೋಗಬೇಕೆಂಬ ಆಜ್ಞೆ ಅವನದು. ವೈದ್ಯರನ್ನೇ ಕಂಡಿರದಿದ್ದ ಅವರಿಗೆ ವೈದ್ಯ ದೊರಕಿದ್ದ. ಅವರ

ಭವಿಷ್ಯದ ಬಗ್ಗೆ ವಿಧವಿಧವಾಗಿ ಚೆ ಅವರೊಡನೆ ಚರ್ಚಿಸಿದ್ದ. ಸಾಮಾಜಿಕ ಬದಲಾವಣೆ ಎಂದರೇನೆಂಬುದನ್ನು ಹೊಸದಾಗಿ ಅರಿತಿದ್ದ ಅವರು ಬಟಿಸ್ಟಾನ ಆಜ್ಞೆಯನ್ನು ಕಸದಂತೆ ಕಂಡರು. "ಚೆ ಒಳ್ಳೆಯವನು, ನಮ್ಮ ಬಗ್ಗೆ ಅವನಿಗೆ ಸಹಾನುಭೂತಿಯಿದೆ, ನಮ್ಮ ಆಚಾರ ವಿಚಾರಗಳನ್ನು ಅವನು ಗೌರವಿಸುತ್ತಾನೆ. ಆದ್ದರಿಂದ ನಾವು ಅವನೊಡನೆ ಇದ್ದೇ ತೀರುತ್ತೇವೆ," ಎಂಬುದು ಬಟಿಸ್ಟಾಗೆ ಅವರ ಉತ್ತರವಾಗಿತ್ತು. ರೈತರ ಮನಸ್ಸು ಕೆಡದಿರಬೇಕಾದರೆ ಅವರೊಡನೆ ಬಂಡಾಯಗಾರರು ಹೇಗೆ ವರ್ತಿಸಬೇಕೆಂದು ಚೆ ಮತ್ತು ಫಿಡೆಲ್ ಇಬ್ಬರೂ ಕಟ್ಟುನಿಟ್ಟಿನ ನಿಯಮಗಳನ್ನು ವಿಧಿಸಿದ್ದರು ಮತ್ತು ಅನುಸರಿಸುತ್ತಿದ್ದರು. ರೈತರ ಬೆಂಬಲವಿಲ್ಲದೆ ಬಂಡಾಯವು ಯಶಸ್ವಿಯಾಗುವಂತಿರಲಿಲ್ಲ ಮತ್ತು ಬಂಡಾಯಗಾರರು ಉಂಟುಮಾಡಲಿದ್ದ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳಿಲ್ಲದೆ ರೈತರ ಭವಿಷ್ಯವನ್ನು ಸುಂದರವಾಗಿ ರೂಪಿಸುವಂತಿರಲಿಲ್ಲ. ಇದನ್ನು ಬಂಡಾಯಗಾರರಿಗೆ ಹಾಗೂ ರೈತರಿಗೆ ತನ್ನದೇ ಆದ ಕ್ರಾಂತಿಯ ಪೂರ್ವದಲ್ಲೇ ಸಿಯೆರ್ರಾ ಮೇಸ್ಟ್ರಾದಲ್ಲಿ ಎಲ್ಲರಿಗೂ ಅಕ್ಷರಾಭ್ಯಾಸ ಪ್ರಾರಂಭಿಸಲಾಗಿತ್ತು ಮತ್ತು "ಉಳುವವನಿಗೇ ಭೂಮಿ" ಎಂಬ ಸೂತ್ರವನ್ನು ಪ್ರಚುರಪಡಿಸಲಾಗಿತ್ತು. ರೈತರ ಪುರೋಭಿವೃದ್ಧಿಗೆ ಇವೆರಡೂ ಅಗತ್ಯವೆಂದು ಚೆ ಮತ್ತು ಫಿಡೆಲ್ ಇಬ್ಬರೂ ಕಂಡುಕೊಂಡಿದ್ದರು.

೧೯೫೭ರ ಜೂನ್‌ನಲ್ಲಿ ಬಂಡಾಯಗಾರರ ಸೇನೆಯನ್ನು ಎಂಟು ತುಕಡಿಗಳನ್ನಾಗಿ ವಿಭಾಗಿಸಿ ಎಪ್ಪತ್ತೈದು ಸೈನಿಕರ ಒಂದು ದಳಕ್ಕೆ ಗೆವಾರನನ್ನು ಅಧಿಪತಿಯನ್ನಾಗಿ ಮಾಡಲಾಯಿತು. ಇದಾದ ಕೆಲವೇ ದಿನಗಳಲ್ಲಿ ಆತನನ್ನು ಮೇಜರ್ ಪದವಿಗೆ ಏರಿಸಲಾಯಿತು. ಇದರ ನೆನಪಿಗಾಗಿ ಸೇನೆಯ ಕೇಂದ್ರ ಕಾರ್ಯಾಲಯದ ಅಧಿಕಾರಿ ಸಿಲಿಯಾ ಸ್ಯಾಂಚೆ ಒಂದು ಗಡಿಯಾರ ಹಾಗೂ ಐದು ಮೂಲೆಯ ಒಂದು ನಕ್ಷತ್ರ ಪದಕವನ್ನು ಚೆಗೆ ನೀಡಿದ್ದ. ಇಂದು ಬಹುಮಟ್ಟಿಗೆ ಪ್ರಚಲಿತವಾಗಿರುವ

ಚೆಯ ಛಾಯಾಚಿತ್ರಗಳಲ್ಲಿ ಟೊಪ್ಪಿಗೆಯ ಮೇಲೆ ರಾರಾಜಿಸು ತ್ತಿರುವುದೂ ಅದೇ ನಕ್ಷತ್ರ.

ಫಿಡೆಲ್ ನೇತೃತ್ವದ ಬಂಡಾಯದ ಪ್ರಭಾವ ಹೆಚ್ಚುತ್ತಿದ್ದಂತೆ ಕ್ಯೂಬಾದ ವಿರೋಧ ಪಕ್ಷಗಳವರೂ ಬಟಿಸ್ಟಾನನ್ನು ಪದಚ್ಯುತಿಗೊಳಿಸು ವುದರಲ್ಲಿಯೂ ಅವರು ಸಹಮತ ಹೊಂದಿದ್ದಾರೆಂದು ಪ್ರಕಟಪಡಿಸಿ ದರು.ಕಮ್ಯುನಿಸ್ಟ್ ವಿರೋಧಿಗಳಾಗಿದ್ದ ಇವರಲ್ಲಿ ಫಿಲಿಪ್ ಪಾಜೋಸ್ ಮತ್ತು ರಾವುಲ್ ಚಿಬಾಸ್ ಇಬ್ಬರೂ ಫಿಡೆಲ್‌ನನ್ನು ಭೇಟಿಯಾಗಿ "ಕ್ರಾಂತಿಕಾರಿ ಪೌರ ರಂಗ"ವೊಂದನ್ನು ರಚಿಸಲು ಸಿಯೆರ್ರಾ ಮೇಸ್ಟ್ರಾಕ್ಕೆ ಬಂದು ಪ್ರಣಾಲಿಕೆಗೆ ಸಹಿ ಹಾಕಿದರು. ಗ್ರಾನ್ಮಾದಲ್ಲಿ ಬಂದಿದ್ದ ೮೨ ಮಂದಿಯ ಗಣವನ್ನು ಈ ಸಂಭಾವಿತರೆಂದೆಣಿಸುವುದು ಅನಿವಾರ್ಯ ವಾಯಿತು ಮತ್ತು ಜುಲೈ ೨೬ರ ಚಳುವಳಿಗೆ ಅಗ್ರಮಾನ್ಯತೆ ದೊರೆ ತಂತಾಯಿತು. ಆದಾಗ್ಯೂ, ಜುಲೈ ೩೦ ರಂದು ಫ್ರಾಂಕ್ ಪೇಯಿಸ್ ಮತ್ತು ಅವನ ಸೋದರ ಜೋಸ್ನು ಇಬ್ಬರನ್ನೂ ಬಟಿಸ್ಟಾ ಬೇಹು ಗಾರರು ಸ್ಯಾಂಟಿಯಾಗೋನಲ್ಲಿ ಗುಂಡಿಟ್ಟು ಕೊಂದರು. ಇಡೀ ನಗರ ಇವನ್ನು ಖಂಡಿಸಿ ಮೆರವಣಿಗೆಗಳನ್ನು ನಡೆಸಿತು. ಸೆಪ್ಟೆಂಬರ್‌ನಲ್ಲಿ ನೌಕಾ ನೆಲೆಯೊಂದರಲ್ಲಿ ನಾವಿಕರು ದಂಗೆಯೆದ್ದರು. ಅದನ್ನು ಹತ್ತಿಕ್ಕು ವುದರಲ್ಲಿ ಆರುನೂರು ಮಂದಿ ಅಸು ನೀಗಿದ್ದರು. ಫಿಡೆಲ್ ನಾಯಕತ್ವದ ಬಂಡಾಯ ಈಗ ಇಡೀ ಕ್ಯೂಬಾದ ಜನತೆಯ ವಿಮೋಚನಾ ಚಳುವಳಿಯಾಗಿ ಪರಿವರ್ತನೆಗೊಂಡಿತ್ತು. ಕ್ಯೂಬಾದ ಕಮ್ಯುನಿಸ್ಟ್ ಪಕ್ಷ ಫಿಡೆಲ್ ಜೊತೆ ಸದಾ ಸಂಪರ್ಕವಿರಿಸಿಕೊಂಡು ಬಂಡಾಯಕ್ಕೆ ಪೂರಕವಾದ ನಾಗರಿಕ ಹೋರಾಟಗಳನ್ನು ಸಜ್ಜು ಗೊಳಿಸುತ್ತಾ ಮುನ್ನಡೆಯಿತು. ಇದನ್ನೆಲ್ಲಾ ಪ್ರತಿಬಂಧಿಸಲು ರಾಜ ಕೀಯವಾಗಿ ಹಲವು ಸಂಚುಗಳು ನಡೆದುವಾದರೂ ಫಿಡೆಲ್ ಹಿಮ್ಮೆಟ್ಟ ಲಿಲ್ಲ. ಮತ್ತು ಚೆ ಎಂದಿನಂತೆ ಫಿಡೆಲ್‌ಗೆ ಬೆಂಬಲವಾಗಿ ನಿಂತ. ಕ್ರಾಂತಿಯ ಸಂದೇಶವನ್ನು ದೇಶದ ಎಲ್ಲ ಭಾಗಗಳಿಗೂ ಮುಟ್ಟಿಸಲು "ಕ್ಯೂಬಾದ

ವಿಮೋಚನೆ" ಎಂಬ ಪತ್ರಿಕೆಯೊಂದು ಚೆ ಸಂಪಾದಕತ್ವದಲ್ಲಿ ಅಸ್ತಿತ್ವಕ್ಕೆ ಬಂತು. ಆಮೇಲೆ ಬಂಡಾಯಗಾರರ ರೇಡಿಯೋ ಪ್ರಸಾರ ಕೇಂದ್ರವೊಂದು ಸ್ಥಾಪಿತವಾಯಿತು. ಇಲ್ಲೂ ಜನರಿಗೆ ಮನಮುಟ್ಟುವಂತೆ ವಿಷಯಗಳನ್ನು ತಿಳಿಯ ಹೇಳಲು ನಿಯೋಜಿತನಾದವನು ಚೆ, ಸಿಯೆರ್ರಾ ಮೇಸ್ಟ್ರಾಕ್ಕೆ ಬಂದು ಹೋಗುವ ಜನ ಹೆಚ್ಚಾಯಿತು : ಪತ್ರಿಕಾ ಪ್ರತಿನಿಧಿಗಳು, ರಾಜಕೀಯ ನಾಯಕರು, ವಿದೇಶಿ ಬೆಂಬಲಿಗರು ಇತ್ಯಾದಿ. ಬಟಿಸ್ಟಾನ ಸೈನಿಕರ ಚಲನವಲನಗಳನ್ನು ರೈತರೇ ಮುಂದಾಗಿ ಬಂದು ಸಿಯೆರ್ರಾ ಮೇಸ್ಟ್ರಾಕ್ಕೆ ಮುಟ್ಟಿಸಲಾರಂಭಿಸಿದರು. ಓರಿಯೆಂಟ್ ಪ್ರಾಂತ್ಯ ಅನಧಿಕೃತವಾಗಿ ಬಹುಮಟ್ಟಿಗೆ ಬಂಡಾಯಗಾರರ ಅಧೀನಕ್ಕೆ ಬಂದಿತ್ತು. ಗೆರಿಲ್ಲಾ ಹೋರಾಟವು ಅಂತಿಮವಾಗಿ ವಿಜಯ ಸಾಧಿಸುವ ಬಗ್ಗೆ ಅಷ್ಟಾಗಿ ಅನುಮಾನ ಉಳಿದಿರಲಿಲ್ಲ. ಬಟಿಸ್ಟಾನನ್ನು ಬದಲಿಸಿ ಇನ್ನಾವುದಾದರೂ ಕೈಗೊಂಬೆಯನ್ನು ತಂದು ಕೂಡಿಸಿದರೆ ಕ್ರಾಂತಿಕಾರಿಗಳ ಬಗೆಗಿನ ಜನಾನುರಾಗ ಕಡಿಮೆಯಾಗುವುದೇನೋ ಎಂದು ವಾಷಿಂಗ್‌ಟನ್ನಿನಲ್ಲಿ ಚರ್ಚೆಗೆ ಬಂತು. ಅಮೆರಿಕಾದ ಮಿಲಿಟರಿ ಹಸ್ತಕ್ಷೇಪವನ್ನು ಹೇಗಾದರೂ ಸರಿಯೇ ತಡೆಗಟ್ಟಬೇಕೆಂಬುದು ಫಿಡೆಲ್‌ರ ಆಶಯವೂ ಆಗಿತ್ತಾದ್ದರಿಂದ ಎಲ್ಲ ಬಟಿಸ್ಟಾ ವಿರೋಧಿಗಳ ಸಂಯುಕ್ತ ರಾಜಕೀಯ ರಂಗವನ್ನು ಪ್ರವೇಶಿಸಲು ಅವರು ನಿರಾಕರಿಸಲಿಲ್ಲ. ಆದರೆ ಗೆರಿಲ್ಲಾ ಯುದ್ಧವನ್ನು ಕೈಬಿಡಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟರು. ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಜುಲೈ ೨೬ರ ಚಳುವಳಿಯ ಪ್ರಣಾಲಿಕೆಯನ್ನು ಎಳ್ಳಷ್ಟೂ ಬದಲಾಯಿಸಲು ಅವರು ಸಿದ್ಧರಿರಲಿಲ್ಲ. ದೊಡ್ಡ ಜಮೀನ್ದಾರಿಯನ್ನು ತೊಡೆದು ಹಾಕುವುದು, ಸಕ್ಕರೆ ಮತ್ತು ವಿದ್ಯುಚ್ಛಕ್ತಿ ಕಂಪನಿಗಳ ರಾಷ್ಟ್ರೀಕರಣ, ವಿದೇಶಿ ಬಂಡವಾಳದ ನಿಯಂತ್ರಣ, ಉಳುವವನಿಗೆ ಭೂಮಿ ಇತ್ಯಾದಿಗಳು ಬಟಿಸ್ಟಾ ವಿರೋಧಿ ಬೂರ್ಷ್ವಾ ಪಕ್ಷಗಳಿಗೆ ರುಚಿಕರವಾಗಿರಲಿಲ್ಲ. ಒಡಂಬಡಿಕೆಯ ಸಲುವಾಗಿ ಅವರನ್ನು ತೃಪ್ತಿಗೊಳಿಸಲು ಫಿಡೆಲ್ ಆ

ನೀತಿಗಳನ್ನು ಬಿಟ್ಟುಕೊಡಲು ಕೂಡ ತಯಾರಿರಲಿಲ್ಲ. ಆದರಿಂದಾಗಿ ಬಟಿಸ್ಟಾಗೆ ಸಮಗ್ರ ವಿರೋಧ ರೂಪಿಸುವುದಕ್ಕೆ ಅಡಚಣೆಯಾದರೂ ಪರವಾಗಿಲ್ಲ, ಗೆರಿಲ್ಲಾಯುದ್ಧ ಸದ್ಯದಲ್ಲೇ ಫಲಕಾರಿಯಾಗಿ ಕೊನೆಗೊಳ್ಳುತ್ತದೆಂದು ಫಿಡೆಲ್ ಮತ್ತು ಚೆ ಒಟ್ಟಾಗಿ ಪ್ರತಿಪಾದಿಸಿದರು. ಬೆಟ್ಟಗಳಿಂದಿಳಿದು ಗೆರಿಲ್ಲಾ ಸೈನ್ಯ ದೇಶದ ಉದ್ದಗಲಕ್ಕೂ ಹರಡಿಕೊಳ್ಳುವ ಸಮಯ ಬಂದಿದೆಯೆಂದು ಇಬ್ಬರೂ ಭಾವಿಸಿದರು. ಇದಕ್ಕೆ ಜನರ ಪ್ರತಿಕ್ರಿಯೆ ಹೇಗಿರಬಹುದೆಂದು ತಿಳಿದುಕೊಳ್ಳಲು ೧೯೫೮ರ ಮಾರ್ಚ್ ೧೨ ರಂದು ಜುಲೈ ೨೬ರ ಚಳುವಳಿಯ ಹೆಸರಿನಲ್ಲಿ ಒಂದು ಕರೆ ನೀಡಲಾಯಿತು : ಬಟಿಸ್ಟಾ ಸರ್ವಾಧಿಕಾರವನ್ನು ಸಾರ್ವತ್ರಿಕವಾಗಿ ವಿರೋಧಿಸಬೇಕು ಮತ್ತು ಏಪ್ರಿಲ್ ಒಂದರಿಂದ ಬಟಿಸ್ಟಾ ಸರ್ಕಾರಕ್ಕೆ ಯಾರೂ ತೆರಿಗೆ ಪಾವತಿ ಮಾಡಬಾರದು. ಬೂರ್ಷ್ವಾ ನಾಯಕರು ನಿರೀಕ್ಷಿಸಿದ್ದಕ್ಕಿಂತಲೂ ಬಹಳ ಹೆಚ್ಚಿನ ಮಟ್ಟದಲ್ಲಿ ಇದಕ್ಕೆ ಸಾರ್ವಜನಿಕರಿಂದ ಅನುಕೂಲ ಪ್ರತಿಕ್ರಿಯೆ ಕಂಡುಬಂತು. ತಮ್ಮ ಎಣಿಕೆ ಸರಿಯಾಗಿದೆಯೆಂದು ಫಿಡೆಲ್ ಮತ್ತು ಚೆ ತೀರ್ಮಾನಿಸಿ ಹೋರಾಟದ ಮುಂದುವರಿಕೆಗೆ ವೇಗದ ಹೆಜ್ಜೆಗಳನ್ನಿರಿಸಲು ಉದ್ಯುಕ್ತರಾದರು.

೧೯೫೮ರ ಆಗಸ್ಟ್ ೨೧ ರಂದು ಫಿಡೆಲ್ ಕ್ಯಾಸ್ಟ್ರೋ ಮುಖ್ಯ ದಂಡನಾಯಕನಾಗಿ ಒಂದು ಆದೇಶ ಹೊರಡಿಸಿದರು. ಅದು ಭಾಗಶಃ ಹೀಗಿದೆ ; "ಮೇಜರ್ ಅರ್ನೆಸ್ಟೊ ಗವಾರರಿಗೆ ಈ ಕೆಳಗಿನ ಕಾರ್ಯಭಾರವನ್ನು ವಹಿಸಿಕೊಡಲಾಗಿದೆ : ಬಂಡಾಯದ ದಳವನ್ನು ಸಿಯೆರ್ರಾ ಮೇಸ್ಟ್ರಾದಿಂದ ಲಾಸ್ ವಿಲಾಸ್ ಪ್ರಾಂತ್ಯಕ್ಕೆ ಕೊಂಡೊಯ್ಯುವುದು ಮತ್ತು ಬಂಡಾಯ ಸೈನ್ಯದ ವ್ಯೂಹ ಯೋಜನೆಗೆ ತಕ್ಕಂತೆ ಕಾರ್ಯಾಚರಣೆ ನಡೆಸುವುದು." ಫಿಡೆಲ್ ಮತ್ತು ರಾವುಲ್ ತಮ್ಮ ದಳಗಳನ್ನು ತೆಗೆದುಕೊಂಡು ಹೋಗಿ ಸ್ಯಾಂಟಿಯಾಗೋ ನಗರಕ್ಕೆ ಮುತ್ತಿಗೆ ಹಾಕುವುದು ಈ ವ್ಯೂಹ ಯೋಜನೆಯ ಒಂದು ಭಾಗವಾಗಿತ್ತು. ಲಾಸ್

ವಿಲಾಸ್ ಕ್ಯೂಬಾದ ಕೇಂದ್ರ ಭಾಗ. ಅವರ ರಾಜಧಾನಿ ಸಾಂಟಾ ಕ್ಲಾರಾ. ಅವನ್ನು ವಶಪಡಿಸಿಕೊಂಡು ಚೆ ದಳ ಕ್ಯೂಬಾದ ರಾಜಧಾನಿ ಯಾದ ಹವಾನಾದತ್ತ ಮುನ್ನುಗ್ಗುವುದು ಯೋಜನೆಯಾಗಿತ್ತು. ಅದೇ ಸಮಯಕ್ಕೆ ಕ್ಯಾಮಿಲೋ ತನ್ನ ದಳದೊಂದಿಗೆ ಪಶ್ಚಿಮದಿಂದ ಹವಾನಾ ದತ್ತ ಬರಬೇಕೆಂದು ಯೋಜಿಸಲಾಗಿತ್ತು. ದಾರಿಯುದ್ದಕ್ಕೂ ಬಟಿಸ್ಟಾ ಸೈನ್ಯದ ತುಕಡಿಗಳು ಹೇರಳವಾಗಿದವು. ಅಲ್ಲದೆ ಬಟಿಸ್ಟಾ ವಿರೋಧಿ ಗಳು ತಮ್ಮ ತಮ್ಮಲ್ಲೇ ವಿರಸವನ್ನುಂಟುಮಾಡಿಕೊಂಡು ಬಂಡಾಯ ಗಾರರಿಗೆ ಸಹಕಾರ ನೀಡಲು ಮುಂದೆ ಬರದೆ ನಿಂತರು. ಈ ವಿರೋಧಿ ಗಳಲ್ಲಿ ಐಕಮತ್ಯ ಬೆಳೆಸುವುದು ಮತ್ತು ಎಲ್ಲರನ್ನೂ ಜನ ಸಮಾಜವಾದಿ ಪಕ್ಷದೊಡನೆ ಸಹಕರಿಸುವಂತೆ ಮಾಡುವುದು ಚೆ ಕೆಲಸವಾಯಿತು. ಜೊತೆಗೆ ತಮ್ಮ ದಳಕ್ಕೆ ಹೊಸಬರನ್ನು ಸೇರಿಸಿಕೊಳ್ಳುವ ಹಾಗೂ ಅವರಿಗೆ ತರಬೇತಿ ನೀಡುವ ಕೆಲಸವೂ ಇತ್ತು.

ಆಗಸ್ಟ್ ೩೦ರಂದು ಚೆ ನೇತೃತ್ವದ ಎಂಟನೆಯ ದಳ ಪರ್ವತ ಪ್ರದೇಶದಿಂದ ಇಳಿದು ಮುಂದೆ ಸಾಗಿತು. ಈ ದಳಕ್ಕೆ ಅಧಿಕ ಶಸ್ತ್ರಾಸ್ತ್ರ ಪೂರೈಸಲು ವಿಮಾನವೊಂದು ವಿಶೇಷವಾಗಿ ರಚಿಸಿದ್ದ ಇಳಿದಾಣಕ್ಕೆ ಬಂತು. ಆದರೆ ಬಟಿಸ್ಟಾ ಸೈನ್ಯ ಅದನ್ನು ಗುರುತಿಸಿ ಶಸ್ತ್ರಾಸ್ತ್ರ ಸಮೇತ ವಿಮಾನವನ್ನು ತನ್ನ ವಶಪಡಿಸಿಕೊಳ್ಳಲು ಹೋರಾಟ ನಡೆಸಿ ಇಳಿದಾಣವನ್ನು ತಲುಪಿತು. ವಿಮಾನವನ್ನು ಚೆ ಆಜ್ಞೆಯ ಮೇರೆಗೆ ಅಲ್ಲೇ ಸ್ಫೋಟಿಸಿ ಶಸ್ತ್ರಾಸ್ತ್ರಗಳು ಶತ್ರುವಿಗೆ ದಕ್ಕದಂತೆ ಮಾಡ ಲಾಯಿತು. ಚೆ ದಳದ ಟ್ರಕ್ಕುಗಳಿಗೆ ಇಂಧನವೂ ದೊರಕದ ಸನ್ನಿ ವೇಶದಲ್ಲಿ ಧೃತಿಗೆಡದೆ ದಳವನ್ನು ಮುನ್ನಡೆಸಿ ಕಾಲ್ನಡಿಗೆ ಮತ್ತು ಕುದುರೆ ಸವಾರಿ ಮಾಡುತ್ತಾ ಲಾಸ್ ವಿಲಾಸ್‌ನತ್ತ ಹೊರಟರು. ಸೆಪ್ಟೆಂಬರ್ ೯ರಂದು ಈ ದಳ ಬಟಿಸ್ಟಾ ಸೈನ್ಯದ ಕಾಪು ಪಡೆಗೆ ಸಿಕ್ಕಿಹಾಕಿಕೊಂಡು ಪ್ರಯಾಸದಿಂದ ತಪ್ಪಿಸಿಕೊಂಡಿತು. ಆದರೆ ದಳದ ಸುಳಿವು ಸಿಕ್ಕಿದ್ದರಿಂದ ಬಟಿಸ್ಟಾ ಸೈನ್ಯ ಇವರನ್ನು ಬೆನ್ನಟ್ಟಿ ಬಂತು. ವಿಪರೀತದ

ಕಾಲ್ನಡಿಗೆ, ಆಹಾರದ ಕೊರತೆ, ಅನಾರೋಗ್ಯ, ಇವುಗಳಿಂದಾಗಿ ದಳದಲ್ಲಿ ನಿರುತ್ಸಾಹ ಹೆಚ್ಚಿತು. ಒಮ್ಮೆ ದಳವನ್ನು ಬಟಿಸ್ಟಾ ಸೈನ್ಯ ಸುತ್ತುವರಿದು ತಡೆದಾಗ ಅಲ್ಲಿ ನೀರು ಸಹ ದೊರೆಯುವ ಸಂಭವವಿರಲಿಲ್ಲ. ಮುತ್ತಿಗೆಯನ್ನು ಮುರಿದು ಪೊರೋನ್ ಹಾದಿ ಹಿಡಿಯುವುದು ಭಯಂಕರ ಕಷ್ಟದ ಕೆಲಸವಾಯಿತು. ಜೊತೆಗೆ ಭಾರಿ ಮಳೆ ಜೇರೆ. ಆಸ್ತಮಾದಿಂದ ಕುಗ್ಗಿಹೋದ ಚೆ ಒಮ್ಮೆ ಕುಸಿದುಬಿದ್ದ. ಆತನ ಪ್ರಾಣವೇ ಹೋಯಿತೆಂದು ದಳ ತವಕಿಸಿತ್ತು. ಅಷ್ಟಾದರೂ ತನ್ನ ಹೊರೆ ಮತ್ತು ಜವಾಬ್ದಾರಿಯನ್ನು ಕಡಿಮೆ ಮಾಡಿಕೊಳ್ಳದೆ ದಳದ ಗೌರವ ಸಂಪಾದಿಸಿದ. ಕ್ಯೂಬಾಕ್ಕೆ ಬಂದು ಅತ್ಯಂತ ಮಹತ್ವದ ಘಳಿಗೆಯಲ್ಲಿ ಕುಸಿದು ಬೀಳುವಂತಾಯಿತೇ ಎಂದು ಮರುಗಿದ್ದ ಚೆ ತನ್ನೆಲ್ಲ ಇಚ್ಛಾಶಕ್ತಿಯನ್ನೂ ಕ್ರೋಢೀಕರಿಸಿ ಬಲವಾಗಿ ಹುಂಕಾರ ಮಾಡಿದ.

ಅಧ್ಯಾಯ ೫

ಕದನ

ಸಿಯೆರ್ರಾ ಮೇಸ್ಟ್ರಾದಿಂದ ಚೆ ನೇತೃತ್ವದ ದಳವು ಸುಮಾರು ೬೦೦ ಕಿಲೋಮೀಟರುಗಳ ದೂರವನ್ನು ಕ್ರಮಿಸಿತ್ತು; ಸುಮಾರು ಒಂದೂವರೆ ತಿಂಗಳ ಕಾಲ ಸತತವಾಗಿ ಬಟಿಸ್ಟಾ ಸೈನ್ಯದ ತುಕಡಿಗಳ ಮಧ್ಯೆ ನುಸುಳುತ್ತಾ ಬಂದಿತ್ತು. ಮತ್ತೆ ಪರ್ವತ ಪ್ರದೇಶ ಬಂದರೆ ಸಾಕೆನಿಸಿತ್ತು. ಹೀಗಿರುವಾಗ ಅಕ್ಟೋಬರ್ ೧೬ರಂದು (೧೯೫೮ರಲ್ಲಿ) ದಳವು ಎಸ್ಕಾಂಬ್ರೆ ಪರ್ವತ ಶ್ರೇಣಿಯನ್ನು ತಲುಪಿದ್ದು ಬಂಡಾಯಗಾರರಿಗೆ ನಿಟ್ಟುಸಿರಿಡುವ ಸಮಯವಾಗಿತ್ತು. ಅಷ್ಟು ವಿಮಾನಗಳು ಮತ್ತು ಅಷ್ಟು ದೊಡ್ಡ ಸೈನ್ಯ ಹೊಂದಿದ್ದ ಬಟಿಸ್ಟಾ ಎಂಟನೇ ದಳವನ್ನು ಮಧ್ಯೆ ಎಲ್ಲೂ ತಡೆದು ನುಚ್ಚು ನೂರು ಮಾಡಲಾಗಲಿಲ್ಲವೆಂದರೆ ಕ್ಯೂಬಾದ ಜನತೆ ಕ್ರಾಂತಿಯ ಪರವಾಗಿ ಎಂತಹ ಭಾವನೆಯನ್ನು ಹೊಂದಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಕ್ಯೂಬಾದ ರೈತರು ದಳದ ಮುನ್ನಡೆಗೆ ಯಾವ ಅಡಚಣೆಯೂ ಉಂಟಾಗದಂತೆ ಸಹಾಯ ಹಸ್ತ ನೀಡಿದ್ದರು.

ಎಸ್ಕಾಂಬ್ರೆ ಪರ್ವತ ಶ್ರೇಣಿಯ ಸಮೀಪ ಎಲ್ ಪೆಡ್ರೆರೋ ಎಂಬಲ್ಲಿ ಅಲೇಡಾ ಮಾರ್ಚ್ ಎಂಬ ಯುವತಿಯನ್ನು ಚೆ ಭೇಟಿ ಮಾಡಿದರು. ಜುಲೈ ೨೬ರ ಚಳುವಳಿಯ ಭೂಗತ ಕಾರ್ಯಕರ್ತೆಯಾಗಿದ್ದ ಈಕೆ ಸೈನಿಕ ದಳದಲ್ಲಿ ಭರ್ತಿಯಾದಳು. ಈ ಪರ್ವತ

ಶ್ರೇಣಿಯ ಆಸುಪಾಸಿನಲ್ಲಿ ಹತ್ತಾರು ಬೇರೆ ಬೇರೆ ತಂಡಗಳು ಬಟಿಸ್ಟಾ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿದ್ದವು. ಅವುಗಳ ಪೈಕಿ ಒಂದೆರಡು ಮಾತ್ರ ಕ್ರಾಂತಿಕಾರಿಗಳಿಗೆ ಸಹಕಾರ ನೀಡಲು ಒಪ್ಪಿದ್ದವು. ಇನ್ನುಳಿದವು ಬಟಿಸ್ಟಾನನ್ನು ವಿರೋಧಿಸುವುದಕ್ಕಿಂತ ತೀವ್ರವಾಗಿ ಕ್ರಾಂತಿಕಾರಿ ದಳವನ್ನು ವಿರೋಧಿಸಲು ಹೇಸುತ್ತಿರಲಿಲ್ಲ. ಮೆನೋಯೋ ಎಂಬೊಬ್ಬ ತಂಡ ನಾಯಕನಂತೂ ಇಡೀ ಪರ್ವತ ಶ್ರೇಣಿ ಅವನ ಖಾಸಗಿ ಆಸ್ತಿಯೆಂಬಂತೆ ನಡೆದುಕೊಂಡ. ಚೆ ದಳವನ್ನು ಆ ಶ್ರೇಣಿಗೆ ಬಿಟ್ಟುಕೊಳ್ಳುವುದಿಲ್ಲವೆಂದು ಅಡ್ಡಿಯೊಡ್ಡಿದ. ಚೆ ಪ್ರತಿಪಾದಿಸಿದ್ದ ಮತ್ತು ಸಣ್ಣ ರೈತರು ಸ್ವಾಗತಿಸಿದ್ದ ಭೂ ಸುಧಾರಣೆಯ ಅಂಶಗಳು ಮೆನೋಯೋಗೆ ಸರ್ವಥಾ ದುಷ್ಟವೆನಿಸಿದ್ದುವು, ಬಟಿಸ್ಟಾನನ್ನು ಮುರಿಸುತ್ತಾ ಜೊತೆಗೆ ಇಂತಹವನನ್ನೂ ಎದುರುಹಾಕಿಕೊಂಡು ಚೆ ಮುನ್ನಡೆಯಬೇಕಾಗಿತ್ತು.

ನವೆಂಬರ್ ಮತ್ತು ಡಿಸೆಂಬರ್‌ನ ಎರಡು ವಾರಗಳನ್ನು ಪರ್ವತದಲ್ಲೇ ಕಳೆದು ಮೂರನೆಯ ವಾರದಲ್ಲಿ ಸಾಂಟಾ ಕ್ಲಾರಾದ ವಿಮೋಚನೆಗೆ ಪೂರ್ವಭಾವಿಯಾಗಿ ಲಾಸ್ ವಿಲಾಸ್‌ನ ಕೆಲವು ಬಟಿಸ್ಟಾ ಭದ್ರಕೋಟೆಗಳಿಗೆ ಲಗ್ಗೆಯಿಡಲು ಚೆ ತನ್ನ ದಳವನ್ನು ಅಣಿಗೊಳಿಸಿದ. ಡಿಸೆಂಬರ್ ೧೬ರಂದು ಫೋಮೆಂಟೋ ಎಂಬ ಪಟ್ಟಣದ ಮುತ್ತಿಗೆ ಹಾಕಲಾಯಿತು. ೧೪೧ ಮಂದಿ ಬಟಿಸ್ಟಾ ಸೈನಿಕರು ಸೆರೆ ಸಿಕ್ಕಿದರು. ಬೇಕಾದಷ್ಟು ಮದ್ದು-ಗುಂಡುಗಳೂ ಚೆ ವಶಕ್ಕೆ ಬಂದವು. ನಂತರ ೨೧ರಂದು ಕಬಾಯ್‌ಗುವಾನ್ ಪಟ್ಟಣವನ್ನು ವಶಪಡಿಸಿಕೊಳ್ಳಲಾಯಿತು. ಈ ಪಟ್ಟಣದಲ್ಲಿ ನಡೆದ ಕದನದಲ್ಲಿ ಚೆ ತನ್ನ ಎಡಗೈಯನ್ನು ಮುರಿದುಕೊಂಡ ಮತ್ತು ಹಣೆಯಲ್ಲಿ ದೊಡ್ಡ ಗಾಯ ಮಾಡಿಕೊಂಡ. ಅದನ್ನು ಲೆಕ್ಕಿಸದೆ ರಣರಂಗದಲ್ಲಿ ಹೋರಾಡಿ ಅನೇಕರನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾದ. ಹೀಗೆ ಸೆರೆ ಸಿಕ್ಕಿದವರನ್ನು ನಿಶ್ಯಸ್ತ್ರಗೊಳಿಸಿ ಬಿಟ್ಟುಬಿಡುವುದು ಫಿಡೆಲ್ ತಂಡವು ಯಾವಾಗಲೂ ಅನುಸರಿಸುತ್ತಿದ್ದ ಕ್ರಮ.

ಅವನ್ನೇ ಚೆ ಕೂಡ ಪಾಲಿಸುತ್ತಿದ್ದ. ಈ ಸಂದರ್ಭದಲ್ಲಿ ಚೆ ದಳಕ್ಕೆ ಒಬ್ಬ ಅಸಾಧಾರಣ ವ್ಯಕ್ತಿ ಸೇರ್ಪಡೆ ಹೊಂದಿದ. ಲಾಸ್ ವಿಲಾಸ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ನುನೇಜ್ ಜಿಮೆನೇಜ್ ಎಂಬುವರೇ ಆ ವ್ಯಕ್ತಿ. ಸಾಮ್ರಾಜ್ಯಶಾಹಿ ದಬ್ಬಾಳಿಕೆಯ ಪರಿಣಾಮಗಳನ್ನು ಕುರಿತ ಅವರ ಪುಸ್ತಕಗಳನ್ನು ಬಟಿಸ್ಟಾ ಸರ್ಕಾರ ನಿಷೇಧಿಸಿತ್ತು. ಜುಲೈ ೨೬ರ ಚಳುವಳಿಗೆ ಈತ ಅನೇಕ ವಿಧಗಳಲ್ಲಿ ತನ್ನ ಕಾಣಿಕೆ ಸಲ್ಲಿಸಿದ್ದು ಈಗ ಅಂತಿಮ ಹೋರಾಟಕ್ಕೆ ಸೈನಿಕನಾಗಿ ಬಂದು ಸೇರಿದ್ದ. ಕ್ರಾಂತಿಯ ನಂತರದಲ್ಲಿ ಇವರು ಕ್ಯೂಬಾದ ವಿಜ್ಞಾನ ಅಕಾಡೆಮಿಯ ಅಧ್ಯಕ್ಷರಾಗಿದ್ದರು, ಕೃಷಿ ಸಂಶೋಧನಾ ಸಂಸ್ಥೆಯ ನಿರ್ದೇಶಕರೂ ಆಗಿದ್ದರು.

ಡಿಸೆಂಬರ್ ೨೨ ರಂದು ಸಾಂಟಾ ಕ್ಲಾರಾದಿಂದ ಕೇವಲ ೩೫ ಕಿಲೋ ಮೀಟರ್ ದೂರದಲ್ಲಿದ್ದ ಪ್ಲಾಸೆಟಾಸ್ ನಗರದ ವಿಮೋಚನೆಗಾಗಿ ಕದನ ಆರಂಭವಾಯಿತು. ಈ ನಗರದ ಪ್ರಜೆಗಳ ಮನವೊಲಿಸಲು ಚೆ ಸ್ವಾಭಾವಿಕವಾಗಿಯೇ ಪ್ರಾಧ್ಯಾಪಕ ಜಿಮೆನೇಜ್‌ರನ್ನು ಬಳಸಿಕೊಂಡ, ಇಡೀ ಕ್ರಾಂತಿಕಾರಿ ಹೋರಾಟದ ಹಿನ್ನೆಲೆ, ಉದ್ದೇಶ ಮತ್ತು ಭವಿಷ್ಯವನ್ನು ಕುರಿತಂತೆ ಜಿಮೆನೇಜ್ ಪ್ರಖರವಾದ ಒಂದು ಹೇಳಿಕೆಯನ್ನು ಸಿದ್ಧಪಡಿಸಿದರು. ಅದನ್ನು ಚೆ ಅನುಮೋದಿಸಿ ಬಾನುಲಿಯಲ್ಲಿ ಬಿತ್ತರಿಸಿದರು. ನಗರವು ಚೆ ದಳದ ವಶಕ್ಕೆ ಬಂದ ಮೇಲೆ ಬಟಿಸ್ಟಾ ಸೈನ್ಯವು ನಗರದ ಮೇಲೆ ವಿಮಾನಗಳಿಂದ ಬಾಂಬ್ ದಾಳಿ ನಡೆಸಿತು. ಚೆ ದಳವು ಒಬ್ಬ ನಾಗರಿಕನನ್ನೂ ಕೊಂದಿರಲಿಲ್ಲ; ಬಟಿಸ್ಟಾ ಸೈನ್ಯವು ನೂರಾರು ನಾಗರಿಕರನ್ನು ಒಮ್ಮೆಗೇ ಆಹುತಿ ತೆಗೆದುಕೊಂಡಿತು.

ಪ್ಲಾಸೆಟಾಸ್ ನಂತರ ಅದಕ್ಕಿಂತಲೂ ದೊಡ್ಡನಗರ ಸ್ಯಾಂಕ್ಟಿ ಸ್ಪಿರಿಟಸ್‌ನತ್ತ ಚೆ ದಳ ಹೊರಟಿತು. ಎರಡು ದಿನಗಳ ಸತತ ಕದನದಲ್ಲಿ ಮತ್ತೆ ಕ್ರಾಂತಿಕಾರಿ ಗೆರಿಲ್ಲಾಗಳು ವಿಜಯಿಗಳಾದರು. ಅಲ್ಲಿಂದ ರೆಮಿಡಿಯೋಸ್, ಕಿಬಾರಿಯೆನ್ ಬಂದರು, ಸ್ಯಾಂಟೋ ಡೊಮಿಂಗೋ, ಎಸ್ಪೆರಾಂಜಾ ಇತ್ಯಾದಿ ಪಟ್ಟಣಗಳನ್ನು ಬಟಿಸ್ಟಾ ಸೈನ್ಯದಿಂದ ಸುಲಭ

ವಾಗಿ ಕಸಿದುಕೊಳ್ಳಲಾಯಿತು. ಇನ್ನುಳಿದದ್ದು ರಾಜಧಾನಿ ಸಾಂಟಾ ಕ್ಲಾರಾ ಒಂದೇ. ಆ ನಗರದ ಹಾದಿಯಲ್ಲಿ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಇತ್ತು. ಪ್ರಾಧ್ಯಾಪಕ ಜಿಮೆನೇಜ್‌ರ ನೇತೃತ್ವದಲ್ಲಿ ಸೈನಿಕರು ಅಲ್ಲಿಗೆ ಹೋದಾಗ ಅವರಿಗೆ ವಿಶೇಷಾದರಗಳಿಂದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಸ್ವಾಗತ ಕೋರಿದರು ಮಾತ್ರ ಅನೇಕರು ಸೈನ್ಯದೊಟ್ಟಿಗೆ ಸಾಂಟಾ ಕ್ಲಾರಾದತ್ತ ಚಲಿಸಿದರು. ಚೆ ಕ್ಯಾಂಪಸ್ಸನ್ನು ತಲುಪಿದ್ದು ಡಿಸೆಂಬರ್ ೨೮ರ ಬೆಳಿಗ್ಗೆ ಸುಮಾರು ಆರು ಗಂಟೆಗೆ, ಅಂದೇ ಮಧ್ಯಾಹ್ನದ ವೇಳೆಗೆ ಸೈನ್ಯವು ರಾಜಧಾನಿಯ ಬಳಿಯ ಕ್ಯಾಪಿರೊ ಬೆಟ್ಟವನ್ನು ತಲುಪಿತು. ಅತಿ ಹೆಚ್ಚು ಪ್ರಮಾಣದ ಸೈನ್ಯವನ್ನು ಬಟಿಸ್ಟಾ ಇಲ್ಲಿ ನೆಲೆಗೊಳಿಸಿದ್ದ ಅಲ್ಲಿಯ ಸೈನಿಕರ ಬಳಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಹೇರಳವಾಗಿದ್ದುವು. ಚೆ ನೇತೃತ್ವದ ಎಂಟನೆಯ ದಳ ಇದನ್ನೆದುರಿಸುವ ಸಾಹಸ ಮಾಡುವುದೇ ಅಸಹಜವಾಗಿರುತ್ತಿತ್ತು. ಆದರೆ ವಾತಾವರಣ ಕ್ರಾಂತಿಕಾರಿಗಳ ಪರವಾಗಿತ್ತು. ಬಟಿಸ್ಟಾ ಸೈನಿಕರಿಗೆ ಕದನದಲ್ಲಿ ಭಾಗಿಗಳಾಗಲು ಸ್ಫೂರ್ತಿಯೇ ಉಳಿದಿರಲಿಲ್ಲ. ಶರಣಾಗುವುದೊಂದೇ ಅವರು ಅರಸುತ್ತಿದ್ದ ಮಾರ್ಗ. ಹೇಳಿಕೊಳ್ಳಬಹುದಾದ ಹೋರಾಟವನ್ನೇನೂ ಮಾಡದೆ ಬಟಿಸ್ಟಾ ಸೈನ್ಯ ತನ್ನ ಸರಂಜಾಮನ್ನು ಅಲ್ಲಲ್ಲೇ ಬಿಟ್ಟು ನಗರದತ್ತ ಹಿಂದಕ್ಕೆ ಸರಿಯಿತು. ಸೈನಿಕರನ್ನು ಕರೆತರುತ್ತಿದ್ದ ಶಸ್ತ್ರಸಜ್ಜಿತ ರೈಲೊಂದನ್ನು ಬಂಡಾಯಗಾರರು ಉರುಳಿಸಿ ಅವರ ಮೇಲೆ ಉಗ್ರವಾದ ದಾಳಿ ನಡೆಸಿದರು: ಇವರಲ್ಲಿ ಪಾಲ್ಗೊಂಡ ಬಂಡಾಯಗಾರರ ಒಟ್ಟು ಸಂಖ್ಯೆ ಹದಿನೆಂಟು! ನಾನ್ನೂರಕ್ಕೂ ಹೆಚ್ಚು ಸೈನಿಕರು ಮತ್ತು ಅಧಿಕಾರಿಗಳು ಅವರಿಗೆ ಶರಣಾದರು. ಕೈದಿಗಳನ್ನು ಕಿಬಾರಿಯೆನ್ ಬಂದರಿಗೆ ಸಾಗಿಸಲು ಮೂರು ಬಂಡಾಯಗಾರರ ಕಾಲಾಳುಗಳು ಸಾಕಾಗಿತ್ತು. ಅವರಲ್ಲಿ ಒಬ್ಬರು ಜಿಮೆನೇಜ್. ದಾರಿಯುದ್ದಕ್ಕೂ ಜನರ ಸ್ವಾಗತ. ಕೈದಿಗಳನ್ನು ಶಪಿಸುತ್ತಿದ್ದ ಜನರು

ಉದ್ರಿಕ್ತರಾಗಿ ಅವರ ಮೇಲೆ ದಾಳಿ ನಡೆಸುವುದನ್ನು ತಡೆಯುವುದೇ ಬಂಡಾಯಗಾರರಿಗೆ ಕಷ್ಟವಾಯಿತು.

ಸಾಂಟಾ ಕ್ಲಾರಾ ನಗರದ ರಕ್ಷಣೆಯು ಕರ್ನಲ್ ಕ್ಯಾಸಿಲಾಸ್ ಲುಂಸೋಯೆಯ್ ಎಂಬುವನ ಜವಾಬ್ದಾರಿಯಾಗಿತ್ತು. ಬಟಿಸ್ಟಾಗೆ ಅವನಲ್ಲಿ ಅತೀವ ನಂಬಿಕೆ ಇತ್ತು. ಅನೇಕ ಕಾರ್ಮಿಕರನ್ನು ಸ್ವತಃ ಗುಂಡಿಕ್ಕಿ ಕೊಂದಿದ್ದ ಪಾತಕಿ ಇವನು. ನಗರದ ವಿಮೋಚನೆಗಾಗಿ ಚೆ ನೇತೃತ್ವದ ದಳ ಮುನ್ನುಗ್ಗುತ್ತಿದ್ದಂತೆ ಇವನು ಪರಾರಿಯಾಗಲು ಯತ್ನಿಸಿ ವಿಫಲನಾದ. ಬಂಡಾಯಗಾರರ ಗುಂಡಿಗೆ ಇವನು ತುತ್ತಾದ. ಆಗ ಕರ್ನಲ್ ಹೆರ್ನಾಂಡಿಜ್ ಎಂಬುವನು ಸೈನ್ಯಾಧಿಕಾರಿಯಾಗಿ ನೇಮಕಗೊಂಡ. ಡಿಸೆಂಬರ್ ೨೮ ರಂದು ಇಡೀ ದಿನ ನಗರದಲ್ಲಿ ಘೋರ ಸೆಣಸಾಟ ನಡೆಯಿತಾದರೂ ಬಹುತೇಕ ಜನ ಬಂಡಾಯಗಾರರ ಪರವಾಗಿ ನಿಂತು ಬಟಿಸ್ಟಾ ಸೈನ್ಯಕ್ಕೆ ಮಣ್ಣು ಮುಕ್ಕಿಸಿದರು. ಇನ್ನೂ ಎರಡು ದಿನಗಳ ಕಾಲ ಕದನ ಮುಂದುವರಿಯಿತು. ಆಗಲೂ ನಗರದ ಮೇಲೆ ವಿಮಾನಗಳಿಂದ ಬಾಂಬುಗಳನ್ನು ಬಟಿಸ್ಟಾ ಸೈನ್ಯವು ಲೆಕ್ಕವಿಲ್ಲದಷ್ಟು ಸುರಿಸಿತು. ಜನವರಿ ೧, ೧೯೫೯ ರಂದು ಮಧ್ಯಾಹ್ನದ ವೇಳೆಗೆ ಕರ್ನಲ್ ಹೆರ್ನಾಂಡಿಜ್‌ಗೆ ಜಿಮೆನೇಜ್ ಎಚ್ಚರಿಕೆ ನೀಡುತ್ತಿದ್ದರು. "ಇನ್ನರ್ಧ ಗಂಟೆಯಲ್ಲಿ ಶರಣಾಗದಿದ್ದರೆ ಗುಂಡು ಹಾರಿಸುತ್ತೇವೆ," ಎಂದು. ಆ ಅರ್ಧ ಗಂಟೆ ಕಳೆಯುವುದರೊಳಗೆ ಬಟಿಸ್ಟಾ ಕ್ಯೂಬಾವನ್ನು ಬಿಟ್ಟು ಡೊಮಿನಿಕನ್ ಗಣರಾಜ್ಯಕ್ಕೆ ಓಡಿಹೋದನೆಂಬ ವಾರ್ತೆಯು ಹವಾನಾದಿಂದ ಬಂತು. ಅವನೊಡನೆ ಇನ್ನೂ ೧೨೪ ಮಂದಿ ತಲೆಮರೆಸಿಕೊಂಡು ಕಂಬಿ ಕಿತ್ತಿದ್ದರು. ಓಡಿ ಹೋಗುವಾಗ ಬಟಿಸ್ಟಾ ತನ್ನ ಅಧಿಕಾರವನ್ನು ಕ್ಯಾಂಟಿಲೋಗೆ ವರ್ಗಾಯಿಸಿದ್ದ. ಆದರೆ ಇವನ ಅಧಿಕಾರ ೨೪ ಗಂಟೆಯೂ ಉಳಿಯಲಿಲ್ಲ. ಆದಾಗ್ಯೂ, ಸಾಂಟಾ ಕ್ಲಾರಾದ ಸೈನ್ಯಾಧಿಕಾರಿಯು ಚೆ ಜೊತೆ ಸಮಾಲೋಚಿಸಿಯೇ ಶರಣಾಗುವುದಾಗಿ ಪಟ್ಟು ಹಿಡಿದ. ಹೊಸ ವರ್ಷ ಜನತೆಗೆ ಹೊಸ ಹರ್ಷ ತಂದಿತು. ಫಿಡೆಲ್

ನೇತೃತ್ವದ ಗೆರಿಲ್ಲಾ ಯುದ್ಧ ಸಮರ್ಪಕವಾಗಿ ಪೂರ್ಣಗೊಂಡಿತ್ತು. ಸರ್ವಾಧಿಕಾರದ ಪತನವಾಗಿ ಬಂಡಾಯಗಾರರ ರಾಜ್ಯ ಅಸ್ತಿತ್ವಕ್ಕೆ ಬರುವುದರಲ್ಲಿತ್ತು. ಹೊಸ ವರ್ಷದ ಮೊದಲ ದಿನ ಮಧ್ಯಾಹ್ನ ಎರಡು ಗಂಟೆಗೆ ಸಾಂಟಾ ಕ್ಲಾರಾ ಮತ್ತು ತನ್ಮೂಲಕ ಲಾಸ್ ವಿಲಾಸ್ ಪ್ರಾಂತ್ಯ ಸಂಪೂರ್ಣವಾಗಿ ಚೆ ದಳದ ವಶಕ್ಕೆ ಬಂದಿತು.

ಸ್ಯಾಂಟಿಯಾಗೋ ವಶಪಡಿಸಿಕೊಳ್ಳಲು ಸಿದ್ಧತೆ ನಡೆಸುತ್ತಿದ್ದ ಫಿಡೆಲ್ ದೂರವಾಣಿಯಲ್ಲಿ ಮಾತನಾಡಿ ಹವಾನಾ ಕಡೆಗೆ ಎಂಟನೆಯ ದಳ ಹೊರಡಬೇಕೆಂದು ಚೆಗೆ ಸೂಚಿಸಿದ. ಅಲ್ಲೂ ದಾರಿಯುದ್ದಕ್ಕೂ ಸಂಭ್ರಮದ ಸ್ವಾಗತ ಕಾದಿತ್ತು. ೧೯೫೯ರ ಜನವರಿ ೨ರಂದು ದಳ ಹವಾನಾವನ್ನು ಪ್ರವೇಶಿಸಿದ್ದಲ್ಲದೆ ಹತ್ತಿರದ ಕಬಾನಾ ಕೋಟೆಯ ಮೇಲೆ ಹತೋಟಿಯನ್ನೂ ಸ್ಥಾಪಿಸಿಕೊಂಡಿತು. ಕ್ಯೂಬಾದ ವಿಮೋಚನೆ ಯಶಸ್ವಿಯಾಗಿತ್ತು ಮತ್ತು ಗ್ರಾನ್ಮಾದಲ್ಲಿ ಬಂದಿದ್ದವರ ಆಶಯ ಪೂರ್ಣವಾಗಿ ಫಲಕಾರಿಯಾಗಿತ್ತು. ಸಾಮ್ರಾಜ್ಯಶಾಹಿಯನ್ನು ಸೋಲಿಸಲು ಸಾಧ್ಯವೆಂಬುವನ್ನು ದಕ್ಷಿಣ ಅಮೆರಿಕಾ ರಾಷ್ಟ್ರಗಳಿಗೆ ಕಾರ್ಯತಃ ಅದನ್ನು ಮಾಡಿತೋರಿಸಿ ಹುರುಪಿನ ಸಂದೇಶವೊಂದನ್ನು ಕ್ಯೂಬಾ ಬಿತ್ತರಿಸಿತ್ತು. ವಿಶ್ವಾದ್ಯಂತ ಹರ್ಷದ ಅಲೆಗಳು ಸ್ವಯಂಸ್ಫೂರ್ತಿಯಿಂದ ಮೆರೆದವು. ಮಾರನೆಯ ದಿನ ನ್ಯಾಯಾಧೀಶ ಮ್ಯಾನುಯೆಲ್ ಉರುಟಿಯಾ ಎಂಬುವರು ಕ್ಯೂಬಾ ಗಣರಾಜ್ಯದ ಅಧ್ಯಕ್ಷರಾಗಿ ಕೆಲಸ ನಿರ್ವಹಿಸುವರೆಂದು ಸ್ಯಾಂಟಿಯಾಗೋದಲ್ಲಿ ಘೋಷಿಸಲಾಯಿತು. ಅಂದೇ ಚಿಲಿಯ ಸಮಾಜವಾದಿ ಪಕ್ಷದ ನಾಯಕ ಸಾಲ್ವಡಾರ್ ಅಲೆಂಡೆ ಹವಾನಾ ಮೂಲಕ ಪ್ರಯಾಣಿಸುತ್ತಿದ್ದಾಗ ಕಬಾನಾದಲ್ಲಿ ಚೆಯೊಡನೆ ಹಲವು ವಿಷಯಗಳನ್ನು ಕುರಿತಂತೆ ದೀರ್ಘವಾಗಿ ಚರ್ಚೆ ನಡೆಸಿದರು. (೧೯೭೩ರಲ್ಲಿ ಇವರು ಚಿಲಿಯ ಅಧ್ಯಕ್ಷರಾಗಿದ್ದಾಗ ಸಾಮ್ರಾಜ್ಯಶಾಹಿಯ ಕರಾಳ ಹಸ್ತ ಇವರ ಹತ್ಯೆ ನಡೆಸಿತು.) ನಿರಂತರ, ನಿರ್ದಯ ರೋಗದಿಂದ ನರಳುತ್ತಿದ್ದಾಗಲೂ ಮಹೋನ್ನತ ಕರ್ತವ್ಯಗಳನ್ನು ನಿಭಾಯಿಸುತ್ತ

ಬಂದಿದ್ದ" ಚೆ ಬಗ್ಗೆ ಅಲೆಂಡೆ ಮೆಚ್ಚುಗೆಯ ಮಾತನ್ನಾಡಿದರು. ಹೊಸ ಸರ್ಕಾರದಲ್ಲಿ ಫಿಡೆಲ್ ಇನ್ನೂ ಭಾಗಿಯಾಗಿರಲಿಲ್ಲ. ಆದರೆ ಚೆ ಮತ್ತು ಕ್ಯಾಮಿಲೊ ಮಿಲಿಟರಿ ಅಧಿಕಾರಿಗಳಾಗಿ ಕಾರ್ಯಭಾರ ನಿರ್ವಹಿಸಲು ಒಪ್ಪಿಕೊಂಡಿದ್ದರು.

ಫಿಡೆಲ್ ಕ್ಯಾಸ್ಟ್ರೋ ಹವಾನಾಕ್ಕೆ ಆಗಮಿಸಿದ್ದು ಜನವರಿ ಎರಂದು ಜನ ಅಸಾಧಾರಣ ಸಂಖ್ಯೆಯಲ್ಲಿ ಸೇರಿ ಆತನಿಗೆ ಸ್ವಾಗತ ಕೋರಿದರು. ಮಾರನೆಯ ದಿನ ಚೆ ತಾಯಿ ಸಿಲಿಯಾ ಬ್ಯೂನಸ್ಐರಿಸ್‌ನಿಂದ ಹವಾನಾಕ್ಕೆ ಬಂದು ಸೇರಿದಳು. ಹಿಲ್ಡಾ ಒಪ್ಪಿಗೆ ಕೊಟ್ಟಿರುವುದರಿಂದ ಅಲೇಡಾ ಮಾರ್ಚ್‌ಳನ್ನು ತಾನು ಮದುವೆಯಾಗುವುದಾಗಿ ತಾಯಿಗೆ ಚೆ ತಿಳಿಸಿದ. ಗ್ರಾನ್ಮಾ ಹಾಗೂ ಜುಲೈ ೨೬ರ ಚಳುವಳಿಯ ಕಾರ್ಯಕ್ರಮಗಳನ್ನು ಜಾರಿಗೆ ತರುವ ಅಗಾಧ ಜವಾಬ್ದಾರಿ ಗೆರಿಲ್ಲಾ ನಾಯಕರಿಗಿತ್ತು. ಹಿಂದಿನ ಸರ್ವಾಧಿಕಾರದ ಸರ್ಕಾರಿ ಯಂತ್ರವನ್ನು ನಿರ್ಮೂಲನ ಮಾಡಿ ಕ್ರಾಂತಿಕಾರಿ ಯೋಜನೆಗಳ ಅನುಷ್ಠಾನಕ್ಕೆ ತಕ್ಕುದಾದ ಹೊಸ ವ್ಯವಸ್ಥೆಯನ್ನು ರೂಪಿಸುವ ಕೆಲಸವೂ ಇತ್ತು. ಬಟಿಸ್ಟಾ ಸರ್ಕಾರವಿದ್ದಾಗ ಸೈನ್ಯಕ್ಕೆ ತರಬೇತಿ ನೀಡಲು ಅಮೆರಿಕಾದ ಅಧಿಕಾರವರ್ಗ ಕ್ಯೂಬಾದಲ್ಲಿ ತುಂಬಿಕೊಂಡಿತ್ತು. ಮೊದಲು ಅವರಿಗೆ ಎತ್ತಂಗಡಿ ಮಾಡಿಸಬೇಕಾದ್ದು ಅನಿವಾರ್ಯವಾಗಿತ್ತು. ಅವರು ತರಬೇತಿ ನೀಡಿದ್ದ ಬಟಿಸ್ಟಾ ಸೈನ್ಯ ತತ್ತರಿಸಿ ಬಿದ್ದುಹೋಗಿತ್ತು; ಇನ್ನು ಕ್ಯೂಬಾದಲ್ಲಿ ಅವರಿಗೇನು! ಕೆಲಸವಿತ್ತು. ಏಳು ವರ್ಷಗಳ ಅಧಿಕಾರಾವಧಿಯಲ್ಲಿ ಬಟಿಸ್ಟಾ ಸರ್ಕಾರ ಸುಮಾರು ಇಪ್ಪತ್ತು ಸಾವಿರ ಕ್ಯೂಬನ್ನರನ್ನು ಕೊಂದಿತ್ತು, ದೇಶವನ್ನು ಅಮೆರಿಕಾಕ್ಕೆ ಪರಭಾರೆ ಮಾಡಿತ್ತು, ಮತ್ತು ಕಾನೂನು ಎಂಬುದನ್ನು ಗಾಳಿಗೆ ತೂರಿತ್ತು, ಆದರೆ ಇದರಲ್ಲಿ ಭಾಗವಹಿಸಿದ್ದ ದೊಡ್ಡ ಹುದ್ದೆಗಳ ಮರಿಷ್ಠರನ್ನು ಶಿಕ್ಷಿಸಲು ಹೊಸ ಸರ್ಕಾರವು ಕ್ರಾಂತಿಕಾರಿ ನ್ಯಾಯಾಲಯಗಳನ್ನು ರಚಿಸಿದಾಗ ಪ್ರತಿಗಾಮಿ ಪತ್ರಿಕೆಗಳು ಮಾನವೀಯತೆಯ ದೃಷ್ಟಿಯಿಂದ ಅವರನ್ನೆಲ್ಲಾ ರಕ್ಷಿಸಬೇಕೆಂದು ಒತ್ತಾಯಿಸಲಾರಂಭಿ

ಸಿದವು. ಈ ವರಿಷ್ಠರನ್ನೆಲ್ಲಾ ಇಟ್ಟಿದ್ದುದು ಕ್ಯೂಬಾನಾದಲ್ಲಿ ಮತ್ತು ಆ ದುರ್ಗದ ಅಧಿಕಾರಿ ಚೆ ಗೆವಾರ. ಅಮೆರಿಕಾದ ಪತ್ರಿಕೆಗಳು ಹಾಗೂ ಕ್ಯೂಬಾದ ಬಟಿಸ್ಟಾ ಪರವಾದ ಪತ್ರಿಕೆಗಳು ಆತನ ವಿರುದ್ಧ ಸಮರ ಸಾರಿದವು. ಅವನನ್ನು "ಮಾಸ್ಕೋದ ಪ್ರತಿನಿಧಿ", "ಕಮ್ಯುನಿಸ್ಟ್ ಸಾಮ್ರಾಜ್ಯದ ಪಕ್ಕಾರ" ಎಂದೆಲ್ಲಾ ಜರೆಯುಲಾಯಿತು.

ಜನರ ಮಧ್ಯೆ ಬೆಳೆದಿದ್ದ ಭಾವನೆ ಈ ದೃಷ್ಟಿಗೆ ಭಿನ್ನವಾಗಿತ್ತು. ಆತನ ಭಾಷಣಗಳಿಗೆ ಸಹಸ್ರಾರು ಮಂದಿ ಸೇರಿ ಅವನ ಕ್ರಾಂತಿಯ ಉದ್ದೇಶವನ್ನು ಸ್ಪಷ್ಟಪಡಿಸಿದ್ದನ್ನು ಮೆಚ್ಚಿಕೊಂಡಿದ್ದರು. ಜೋಸೆ ಮಾರ್ತಿಯ ಪರಂಪರೆಗೆ ಸೇರಲು ಈತ ಫಿಡೆಲ್‌ನ ಇತರ ಅನುಯಾಯಿ ಗಳಂತೆ ಅರ್ಹನೆಂದು ಅವರ ತೀರ್ಮಾನವಾಗಿತ್ತು. ತಾನು ದಕ್ಷಿಣ ಅಮೆರಿಕಾದ ಪ್ರಜೆಯೆಂದೂ ಯಾವುದೇ ಕ್ಯೂಬಾದ ಪ್ರಜೆಗಿಂತ ಕಡಿಮೆ ದೇಶಭಕ್ತಿಯುವನಲ್ಲವೆಂದೂ ಚೆ ಪದೇ ಪದೇ ಹೇಳುತ್ತಿದ್ದ. ಈ ಉಜ್ವಲ "ಸ್ವಾತಂತ್ರ್ಯ ದ್ವೀಪ" ತನ್ನ ತಾಯ್ನಾಡಿಗಿಂತ ಭಿನ್ನವಲ್ಲವೆಂಬ ದನ್ನು ಕ್ರಿಯೆಯಿಂದ ಸಾಬೀತು ಮಾಡಿದ್ದ ಚೆ ಬಗ್ಗೆ ಜನಾಭಿಪ್ರಾಯ ಒಲವಿನದಾಗಿತ್ತು. ಹವಾನಾದಲ್ಲಿ ಜನಸ್ತೋಮವನ್ನುದ್ದೇಶಿಸಿ ಮೊದಲ ಬಾರಿಗೆ ಭಾಷಣ ಮಾಡುವಾಗ ಫಿಡೆಲ್ ಮುಕ್ತವಾಗಿ ಚೆನನ್ನು ಅಭಿನಂದಿಸಿ ದ್ದರು ಮತ್ತು ಶ್ಲಾಘಿಸಿದ್ದರು, ಫೆಬ್ರವರಿ ೯ ರಂದು ಬಂಡಾಯ ಸೈನ್ಯದ ನಾಯಕರು ಚೆಗೆ ಕ್ಯೂಬಾದ ಪೌರತ್ವವನ್ನು ಘೋಷಿಸಿ ಕ್ರಾಂತಿಯ ಜಯಕ್ಕೆ ಬಹುಪಾಲು ಸಹಾಯಹಸ್ತ ನೀಡಿದ್ದ ಕ್ಯೂಬಾದ ರೈತವರ್ಗ ಬೇರೆಲ್ಲ ವರ್ಗಗಳಿಗಿಂತಲೂ ಹೆಚ್ಚಾಗಿ ಇದನ್ನು ಸ್ವಾಗತಿಸಿತು. ಕೃಷಿ ಸುಧಾರಣಾ ಕ್ರಮವನ್ನು ರೂಪಿಸುವವನು ಚೆ ಅಲ್ಲದೆ ಮತ್ತಾರೂ ಆಗಲಾರರೆಂದು ಈ ವರ್ಗದ ಅಭಿಪ್ರಾಯುವಾಗಿತ್ತು. ರಾಷ್ಟ್ರದ ಅರ್ಧ ದಷ್ಟು ಜಮೀನು ಕೇವಲ ಎರಡು ಸಾವಿರ ಭೂಮಾಲಿಕರ ಆಸ್ತಿ ಯಾಗಿದ್ದ ಅಂದಿನ ಸಂದರ್ಭದಲ್ಲಿ ಚೆ ಎದುರಿಸಬೇಕಾಗಿದ್ದ ಸವಾಲು ಗಂಭೀರವಾಗಿತ್ತು. ಇದಲ್ಲದೆ ವಿದೇಶಿ ಸ್ವಾಮ್ಯದಲ್ಲಿದ್ದ ಜಮೀನು ಸಹ

ಕಡಿಮೆಯೇನಿರಲಿಲ್ಲ. ಇದಕ್ಕೆಲ್ಲಾ ಚಾಲನೆ ನೀಡಲು ಫಿಡೆಲ್ ನಾಯಕತ್ವ ಅಗತ್ಯವಾಗಿತ್ತು. ೧೯೫೯ರ ಫೆಬ್ರುವರಿ ೧೬ರಂದು ಆತ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ. ಆ ವೇಳೆಗಾಗಲೆ ನೂತನ ಕ್ಯೂಬಾ ನಾಯಕತ್ವಕ್ಕೆ ಗೌರವ ಸೂಚಿಸಿ ಸೋವಿಯೆತ್ ಒಕ್ಕೂಟವು ಕ್ಯೂಬಾಕ್ಕೆ ರಾಜ್ಯತಾಂತ್ರಿಕ ಮಾನ್ಯತೆಯನ್ನು ನೀಡಿತ್ತು. ರಾಜ್ಯತಾಂತ್ರಿಕ ಸಂಬಂಧ ಸ್ಥಾಪಿಸಿಕೊಂಡು ರಾಯಭಾರಿಯನ್ನು ಕಳಿಸಲು ಮಾತ್ರ ಮೇ ತಿಂಗಳವರೆಗೆ ಕಾಯಬೇಕಾಯಿತು. ಈ ಸಂಬಂಧಗಳನ್ನು ಚುರುಕುಗೊಳಿಸುವ ಕೆಲಸ ಕೂಡ ಚೆ ಪಾಲಿಗೆ ಬರುವುದಿತ್ತು. ಕ್ರಾಂತಿಯ ತರುವಾಯದಲ್ಲಿ ಪುರುಸೊತ್ತಿಲ್ಲದಷ್ಟು ಕೆಲಸದ ಹೊರೆ ಹೊರಲು ಇಡೀ ಬಂಡಾಯ ನಾಯಕತ್ವ ಸಿದ್ಧವಾಗಿತ್ತು. ಚೆ ಇದಕ್ಕೆ ಅಪವಾದವಾಗುವ ಪ್ರಶ್ನೆಯೇ ಇರಲಿಲ್ಲ.

ಅಧ್ಯಾಯ ೬

ವ್ಯಕ್ತಿತ್ವ

ಇಂದಿನ ನಮ್ಮ ಯಾವುದಾದರೂ ವೃತ್ತಪತ್ರಿಕೆಯನ್ನು ವಿಶ್ಲೇಷಿಸಿ ನೋಡಿದರೆ, ವಿಶೇಷತಃ ಅದು ಇಂಗ್ಲಿಷ್ ಪತ್ರಿಕೆಯಾಗಿದ್ದರೆ, ವಿದೇಶಿ ಬಾತ್ಮೀದಾರರು ಮಾಡಿರುವ ವರದಿಗಳು ಅಥವಾ ಬರೆದಿರುವ ಲೇಖನಗಳು ವಿಪರೀತವಾಗಿರುವುದು ಗೋಚರವಾಗುತ್ತದೆ. ದಕ್ಷಿಣ ಆಫ್ರಿಕಾ ಬಗ್ಗೆ "ವಾಷಿಂಗ್ಟನ್ ಪೋಸ್ಟ್" ಪ್ರಕಟಿಸಿದ ಲೇಖನ ಇಲ್ಲಿ ನಮ್ಮ ಪತ್ರಿಕೆಯೊಳಕ್ಕೆ ತೂರಿಕೊಳ್ಳುತ್ತದೆ. ಅದು ಅಮೆರಿಕಾದ ದೃಷ್ಟಿ ಕೋನದಿಂದ ಬರೆಯಲಾದದ್ದೆಂದು ಏಕೆ ತಿಳಿಯುವುದಿಲ್ಲವೋ ! ಭಾರತದ ಪತ್ರಿಕಾಕರ್ತನೊಬ್ಬ ದಕ್ಷಿಣ ಆಫ್ರಿಕಾ ಬಗ್ಗೆ ಆ ರಾಷ್ಟ್ರದ ಪ್ರಜೆಯ ಹಿತದ ದೃಷ್ಟಿಯನ್ನು ಮನಸ್ಸಿನಲ್ಲಿರಿಸಿಕೊಂಡು ಅಥವಾ ಭಾರತ ಮತ್ತು ದಕ್ಷಿಣ ಆಫ್ರಿಕಾಗಳ ನಡುವೆ ಎಂತಹ ಸಂಬಂಧವಿರಬೇಕೆಂಬುದನ್ನು ಗಮನಿಸಿ ಒಂದು ಲೇಖನ ಬರೆಯಬಾರದೆ ? ಆದರೆ ವಸ್ತುಸ್ಥಿತಿಯೇ ಬೇರೆ. "ನ್ಯೂಯಾರ್ಕ್ ಟೈಂಸ್", "ಲಾಸ್ ಏಂಜಲೀಸ್ ಟೈಮ್ಸ್", "ದಿ ಗಾರ್ಡಿಯನ್" ಇತ್ಯಾದಿ ಪತ್ರಿಕೆಗಳ ಲೇಖನಗಳು ನಮ್ಮ ಓದುಗರಿಗೆ ಹಳಸಿದ ಅನ್ನವಾಗಿ ಉಣಬಡಿಸಲಾಗುತ್ತದೆ. ಮತ್ತು ತನ್ಮೂಲಕ ಆ ದೇಶಗಳ ದೃಷ್ಟಿಯೂ ನಮ್ಮ ದೃಷ್ಟಿಯೂ ಹೌದೆಂಬಂತೆ ನಡೆದುಕೊಳ್ಳುವ ಒಂದು ವರ್ಗ ಸೃಷ್ಟಿಯಾಗುತ್ತದೆ. ಆ ವರ್ಗಕ್ಕೆ ಬಂಡವಾಳಶಾಹಿ ವ್ಯವಸ್ಥೆ ಮತ್ತು ಸಾಮ್ರಾಜ್ಯಶಾಹಿ ಕುತಂತ್ರಗಳು

ಅನಿಷ್ಟವಾಗಿ ತೋರುವುದಿಲ್ಲ. ಇದರಿಂದಾಗಿ ನಮ್ಮ ಸಾಮಾಜಿಕ–ಆರ್ಥಿಕ ಆಶಯಗಳ ಪೂರೈಕೆಗೆ ಅಡ್ಡಿಯಾಗುವ ಸಾಧ್ಯತೆ ಹೆಚ್ಚುತ್ತದೆ.

ಚೆ ಚಿಕ್ಕವನಿದ್ದಾಗ ಅರ್ಜೆಂಟೈನಾದಲ್ಲಿದ್ದ ಪರಿಪಾಠವೂ ಇದೇ ಆಗಿತ್ತು. ವಿಶ್ವದ ಘಟನೆಗಳ ಪರಿಚಯ ಮಾಡಿಕೊಳ್ಳುತ್ತಲೇ ಅವುಗಳ ಚಿತ್ರವು ಅಮೆರಿಕಾದ ಹಿತಾಸಕ್ತಿಗಳ ಪರವಾಗಿ ಮೂಡಿ ಬರುತ್ತಿದ್ದು ದನ್ನು ಗ್ರಹಿಸಲು ಆ ವಯಸ್ಸಿನಲ್ಲೇ ಬೌದ್ಧಿಕ ಸಾಮರ್ಥ್ಯ ಮತ್ತು ಸಾಮಾಜಿಕ ಬದ್ಧತೆಯನ್ನು ತೋರ್ಪಡಿಸಿದವನು ಚೆ ಗವಾರ. ವಿಪುಲ ವಾದ ಸಂಪತ್ತಿನ ಮಧ್ಯೆ ಅನೇಕರು ಕಡುಬಡತನದಲ್ಲಿ ಬೆಂದುಹೋಗುವ ವಿಪರ್ಯಾಸವು ಕೇವಲ ಅರ್ಜೆಂಟೈನಾಕ್ಕೆ ಸೀಮಿತವಾಗಿರಲಿಲ್ಲ. ಇದೇಕೆ ವಿಶ್ವದ ಬಹುಭಾಗ ಈ ದುರವಸ್ಥೆಯನ್ನು ನಿರ್ಮೂಲನಗೊಳಿಸಿಲ್ಲ ? ಜನರ ಬದುಕನ್ನು ಹಸನಾಗಿಸುವುದು ಹೇಗೆ ? ಜನರ ರೋಗರುಜಿನ ಗಳಿಗೆ ಪರಿಣಾಮಕಾರಿ ಪರಿಹಾರ ಇಲ್ಲವೆ ? ಕೆಲವೇ ಜನರು ತಮ್ಮ ದಬ್ಬಾಳಿಕೆಯನ್ನು ನಡೆಸುತ್ತಿದ್ದರೆ ಅವನ್ನು ಬದಲಾಯಿಸಲು ಬರುವು ದಿಲ್ಲವೆ ? ರಾಷ್ಟ್ರೀಯ ಸ್ವಾತಂತ್ರ್ಯವನ್ನು ಸಾಮ್ರಾಜ್ಯಶಾಹಿಯ ಅಡಿ ಯಲ್ಲಿ ಮುಡಿಪಾಗಿಡಬೇಕೆ ?—ಇವು ಮತ್ತು ಇಂತಹ ನೂರಾರು ಪ್ರಶ್ನೆಗಳು ಯುವಕ ಚೆ ಗೆವಾರನಿಗೆ ಸದಾಕಾಲಕ್ಕೂ ಕಗ್ಗಂಟಾಗಿ ಉಳಿಯಲಿಲ್ಲ. ತನ್ನ ಅಧ್ಯಯನದಿಂದ, ಸುತ್ತಾಟದಿಂದ ಮತ್ತು ವೀಕ್ಷಣೆ ಯಿಂದ ಜಾಗ್ರತೆಯಾಗಿ ಸಾಮ್ರಾಜ್ಯಶಾಹಿಯ ಕುಟಿಲತೆ ಹಾಗೂ ಭಯಾನಕತೆಯನ್ನು ಮನಗಂಡು ಆ ಕರಾಳ ವ್ಯವಸ್ಥೆಯ ವಿರುದ್ಧ ಹೋರಾಡುವುದೇ ತನ್ನ ಜೀವನ ಧ್ಯೇಯವೆಂದು ಚೆ ಪರಿಗಣಿಸಿದ. ಒಂದು ರಾಷ್ಟ್ರದ ಸ್ವಾತಂತ್ರ್ಯ ಎಂಬುದಕ್ಕಿಂತಲೂ ಸಾಮ್ರಾಜ್ಯಶಾಹಿಯ ಕಪಿಮುಷ್ಟಿಯಿಂದ ವಿಮೋಚನೆ ಎಂಬುದು ಹೆಚ್ಚು ಪ್ರಸ್ತುತವಾಗಿ ಆತನಿಗೆ ಕಂಡುಬಂತು. ದಕ್ಷಿಣ ಅಮೆರಿಕಾ ದೇಶಗಳ ನಡುವಣ ಗಡಿ ರೇಖೆಗಳು ಈ ಕಾರಣದಿಂದಾಗಿ ಅವನ ದೃಷ್ಟಿಯಲ್ಲಿ ಅಳಿಸಿಹೋದವು.

ಕ್ಯೂಬಾ ವಿಮೋಚನೆಯ ನಂತರ ಆ ದೇಶದ ಪ್ರಜೆಯಾದ

ನಂತರವೂ ಗೆವಾರನಿಗೆ ತನ್ನ ಆಸಕ್ತಿಗಳನ್ನು ಆ ದೇಶಕ್ಕಷ್ಟೇ ಸೀಮಿತಗೊಳಿಸಲು ಸಾಧ್ಯವಾಗಲಿಲ್ಲ, ಮಂತ್ರಿಮಂಡಲಕ್ಕೆ ಸೇರಿದ ಮೇಲೆ ಕೂಡ ಮೊದಲಿನಂತೆಯೇ ನಿಗರ್ವಿಯಾಗಿ ಜನಗಳ ನಡುವೆ ಬೆರೆಯುವುದನ್ನು ಆತ ಮುಂದುವರಿಸಿದ, ತನ್ನ ಅವಶ್ಯಕತೆಗಳನ್ನು ಆಗಲೂ ಹೆಚ್ಚು ಮಾಡಿಕೊಳ್ಳಲಿಲ್ಲ. ಕ್ರಾಂತಿಯ ಹರಿಕಾರನಾಗಿ ಸರಳ ಜೀವನವನ್ನು ತನ್ನದನ್ನಾಗಿಸಿಕೊಳ್ಳುವುದು ಅವನ ಮಹತ್ವದ ಜವಾಬ್ದಾರಿಯೆಂದು ಗುರುತಿಸಿ ಎಷ್ಟೋ ವೇಳೆ ಕನಿಷ್ಠ ಸೌಲಭ್ಯಗಳನ್ನೂ ಆತ ನಿರಾಕರಿಸಿದ. ಅವನ ಅಪ್ತರು ಆಗಾಗ್ಗೆ ಹೇಳುತ್ತಿದ್ದುದುಂಟು : "ನಮ್ಮ ಚೆ ಮೂರು ದೌರ್ಬಲ್ಯಗಳನ್ನು ಮೀರಿ ನಿಲ್ಲಲಾರ : ಹೊಗೆಸೊಪ್ಪು, ಪುಸ್ತಕಗಳು ಮತ್ತು ಚದುರಂಗದಾಟ, ಇವೇ ಆ ದೌರ್ಬಲ್ಯಗಳು."

೧೯೫೯ರ ಮಾರ್ಚ್‌ನಲ್ಲಿ ಚೆ ಅಸ್ವಸ್ಥತೆಯಿಂದ ಟರರಾ ಎಂಬಲ್ಲಿದ್ದ ಒಂದು ದೊಡ್ಡ ಬಂಗಲೆಯಲ್ಲಿ ವಾಸಮಾಡುತ್ತಿದ್ದರು. ಹಿಂದಿನ ಬಟಿಸ್ಟಾ ಸರ್ಕಾರದ ಶ್ರೀಮಂತಿಕೆಯ ಬಂಗಲೆಗಳಲ್ಲಿ ಅದೊಂದು. ಕ್ರಾಂತಿನಾಯಕ ಅಂತಹ ಅರಮನೆಯಲ್ಲಿ ವಾಸಮಾಡುವುದು ಜನರಿಗೆ ಮೋಸಮಾಡಿದಂತೆ ಎಂಬರ್ಥ ಬರುವ ರೀತಿಯಲ್ಲಿ "ಕಾರ್ಟೆಲ್" ಎಂಬ ಪ್ರತಿಗಾಮಿ ಪಾಕ್ಷಿಕ ಪತ್ರಿಕೆ ಸೂಚ್ಯವಾಗಿ ಬರೆಯಿತು. ಲೇಖನ ಬರೆದವನು ಲಾನೋ ಮಾಂಟೆ ಎಂಬಾತ. ಬಟಿಸ್ಟಾ ಪರವಾಗಿ ಅವನು ಎಸಗಿದ್ದ ಕಾರ್ಯಗಳ ಬಗೆಗಿನ ದಾಖಲೆಗಳು ಹೊಸ ಸರ್ಕಾರದ ಬಳಿ ಇದ್ದುವಾದರೂ ಚೆ ಅವನ್ನು ಬಳಸಿಕೊಂಡು ಅವನ ಮೇಲೆ ಎರಗಿ ಹೋಗಲಿಲ್ಲ. ಬದಲಾಗಿ "ಕ್ರಾಂತಿ" ಎಂಬ ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆದು ಅದನ್ನು ಪ್ರಕಟಿಸುವಂತೆ ಕೋರಿದರು. ಅದರಲ್ಲಿದ್ದ ಕೆಲವು ಸಾಲುಗಳು ಹೀಗಿವೆ : "ನನಗೆ ಆರೋಗ್ಯ ಸ್ವಲ್ಪ ಕೆಟ್ಟಿದೆಯೆಂದು ನಿಮ್ಮ ಪತ್ರಿಕೆಯ ಓದುಗರಿಗೆ ತಿಳಿಸಬಯಸುತ್ತೇನೆ. ಜೂಜು ಇತ್ಯಾದಿಗಳಲ್ಲಿ ಕಾಲಕಳೆದಾಗಲಿ, ರಾತ್ರಿ ಅವೇಳೆಗಳಲ್ಲಿ ಕ್ಲಬ್ಬುಗಳಲ್ಲಿ ಕುಡಿ

ಯುವುದರಿಂದಾಗಲಿ ನಾನು ಅನಾರೋಗ್ಯ ತಂದುಕೊಂಡಿಲ್ಲ. ಕ್ರಾಂತಿಯ ಕ್ರಿಯೆಯಲ್ಲಿ ನನ್ನ ಕೈಲಾದಷ್ಟು ಭಾಗವಹಿಸಿದ್ದೇನೆ ಮತ್ತು ಅದರಿಂದ ನನ್ನ ಅನಾರೋಗ್ಯ ಸ್ವಲ್ಪ ಹೆಚ್ಚಾಗಿದೆ. ಹವಾನಾದಿಂದ ಸ್ವಲ್ಪ ದೂರದಲ್ಲಿ ವಾಸಿಸಬೇಕೆಂದು ವೈದ್ಯರು ನನಗೆ ಸಲಹೆ ನೀಡಿದ್ದಾರೆ. ಮುಟ್ಟುಗೋಲು ಹಾಕಿಕೊಂಡ ಆಸ್ತಿಯಲ್ಲಿ ಟರರಾ ಬಂಗಲೆಯನ್ನು ಸಂಬಂಧಪಟ್ಟ ಸಚಿವಾಲಯವು ಸದ್ಯಕ್ಕ ನನಗೆ ನೀಡಿದೆ. ಗುಣಮುಖ ನಾಗಿರುವುದಾಗಿ ವೈದ್ಯರು ಹೇಳುವವರೆಗೆ ಮಾತ್ರ ನಾನಿಲ್ಲಿರುತ್ತೇನೆ. ಕ್ರಾಂತಿಸೈನ್ಯದ ಯೋಧನಾಗಿ ನಾನು ಪಡೆಯುವ ಸಂಬಳ ೧೨೫ ಡಾಲರುಗಳು. ಒಂದು ಮನೆಯನ್ನು ಬಾಡಿಗೆಗೆ ಹಿಡಿಯಲು ನನಗೆ ಆರ್ಥಿಕ ಚೈತನ್ಯವಿಲ್ಲವಾದ್ದರಿಂದ ಬಟಿಸ್ಟಾ ಬೆಂಬಲಿಗನಿಗೆ ಸೇರಿದ್ದ ಬಂಗಲೆಯೊಂದರಲ್ಲಿ ನನಗೆ ಸದ್ಯಕ್ಕೆ ತಾವು ಮಾಡಿಕೊಟ್ಟಿದ್ದಾರೆ, ಅಷ್ಟೆ".

ಕ್ಯೂಬಾದ ಕ್ರಾಂತಿಯ ನಿಜ ಸ್ವರೂಪವು ಕ್ಯೂಬಾದವನಲ್ಲದವ ನೊಬ್ಬನು ಮೊದಲು ಸೈನಿಕನಾಗಿ, ಆಮೇಲೆ ಸಚಿವನಾಗಿ ಕಾರ್ಯ ನಿರ್ವಹಿಸಿದನೆಂಬುದರಿಂದಲೇ ತಿಳಿದುಬರುತ್ತದೆ. ಅದು ಅಂತರ ರಾಷ್ಟ್ರೀಯ ಸ್ವರೂಪದ ಕ್ರಾಂತಿ. ತತ್ವಶಃ ಸಾಮ್ರಾಜ್ಯಶಾಹಿ ವಿರೋಧದ ಕ್ರಾಂತಿ, ವಿಮೋಚನಾ ಸಮರದಲ್ಲಿ ಮೂಡಿಬಂದ ಕ್ರಾಂತಿ. ಚೆಗೆ ಸೀಮಿತವಾದ ರಾಷ್ಟ್ರೀಯ ಭಾವನೆಯ ಬಂಧನವಿರಲಿಲ್ಲ. ಕ್ರಾಂತಿಯ ತರುವಾಯದಲ್ಲಿ ಜರುಗಿದ ಒಂದು ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಆತ ಕಳಿಸಿದ ಸಂದೇಶದ ಒಂದು ಭಾಗ ಇದು: "ನೈಜವಾದ ಅಂತರರಾಷ್ಟ್ರೀಯತೆ ನಮ್ಮದಾಗಬೇಕು. ನಾವು ಹೋರಾಡುವುದು ಇಡೀ ಮನುಕುಲದ ಬಿಡುಗಡೆಗಾಗಿ ಪ್ರತೀಕದಂತಿರುವ ಶ್ರೇಷ್ಠ ಧ್ವಜ ದಡಿಯಲ್ಲಿ. ಇಂದಿನ ಸಶಸ್ತ್ರ ಹೋರಾಟರಂಗಗಳು ಬೇಕಾದಷ್ಟಿವೆ.— ವಿಯೆಟ್ನಾಂ, ವೆನಿಝೂಲ, ಗ್ವಾಟೆಮಾಲ, ಲಾವೋಸ್, ಗಿನಿ, ಕೊಲಂ ಬಿಯ, ಬೊಲಿವಿಯ ಈ ಯಾವುದೇ ದೇಶದ ಧ್ವಜದಡಿಯಲ್ಲಿ

ಹೋರಾಡಿ ಮಡಿಯುವುದು ಯಾವುದೇ ದೇಶದವನಿಗೂ ಶ್ರೇಯಸ್ಕರವೇ ಆಗಿರುತ್ತದೆ. ಅಲ್ಲಿ ಸುರಿಸುವ ಒಂದೊಂದು ಹನಿ ರಕ್ತವೂ ಒಂದು ವಿಶಿಷ್ಟ ಅನುಭವ. ತನ್ನ ದೇಶದ ವಿಮೋಚನಾ ಹೋರಾಟಕ್ಕೆ ಅವನನ್ನು ಇದು ಸಿದ್ಧಗೊಳಿಸುತ್ತದೆ. ಮುಂದಿನ ಪೀಳಿಗೆಗೆ ಈ ಅನುಭವವನ್ನು ವರ್ಗಾಯಿಸುವುದು ಉಚಿತವಾಗಿದೆ. ಒಂದೊಂದು ದೇಶ ವಿಮೋಚನೆಯಾದಾಗಲೂ ತನ್ನ ದೇಶದ ವಿಮೋಚನೆ ಹತ್ತಿರವಾಗುತ್ತಿದೆಯೆಂಬುದು ಸತ್ಯವಾದ ವಿಷಯ". ಈ ವರ್ಚಸ್ಸನ್ನು ಹೊಂದಿದ್ದ ಗೆವಾರನನ್ನು ಬರ್ಟ್ರೆಂಡ್ ರಸೆಲ್ ಒಮ್ಮೆ ವಿಯೆಟ್ನಾಂ ಹೋರಾಟದ ಬೆಂಬಲಕ್ಕಾಗಿ ಸಹಿ ಪಡೆಯಲು ಸಂಪರ್ಕಿಸಿದ್ದು ಸಹಜವಾಗಿದೆ. ರಸೆಲ್ ಸಮಿತಿ ಅವನನ್ನು ಸಂಪರ್ಕಿಸಿದ್ದು ಆತ ಮುಂದೆ ಬೊಲಿವಿಯಾದಲ್ಲಿ ಗೆರಿಲ್ಲಾ ಯೋಧನಾಗಿ ಸಂಚರಿಸುತ್ತಿದ್ದಾಗ. ಇಂತಹವನನ್ನು ಕ್ಯೂಬಾದ ಜನತೆ ತನ್ನಲ್ಲಿ ವಿಲೀನಗೊಳಿಸಿಕೊಂಡದ್ದರಲ್ಲಿ ಆಶ್ಚರ್ಯವೆಲ್ಲಿಯದು! ದಕ್ಷಿಣ ಅಮೆರಿಕಾದ ಯಾವ ದೇಶದಲ್ಲಿದ್ದಾಗಲೂ ಅಲ್ಲಿ ತಾನು ಪರಕೀಯನೆಂಬ ಭಾವನೆ ಒಮ್ಮೆಯೂ ಅವನಿಗೆ ಬರಲಿಲ್ಲವೆಂದು ಸ್ವತಃ ಅವನೇ ದಾಖಲಿಸಿದ್ದಾನೆ. ಎಲ್ಲಿಗೆ ಹೋದಾಗಲೂ ತಾನು ಅರ್ಜೆಂಟೈನಾದವನೂ ಹೌದೆಂಬ ಭಾವನೆಯೂ ಇರುತ್ತಿತ್ತಂತೆ.

"ಕ್ಯೂಬಾದಲ್ಲಿ ಸಮಾಜವಾದ ಮತ್ತು ಮಾನವ" ಎಂಬ ತನ್ನ ಪುಸ್ತಕದಲ್ಲಿ ಚೆ ಸ್ವಾನುಭವದಿಂದ ಹೇಳಿರುವ ಮಾತುಗಳಿವು "ಒಬ್ಬ ನಿಜವಾದ ಕ್ರಾಂತಿಕಾರಿಗೆ ಇರುವ ಬಲವಾದ ಭಾವನೆಯೆಂದರೆ ಪ್ರೀತಿ. ಈ ಗುಣವಿಲ್ಲದ ನೈಜ ಕ್ರಾಂತಿಕಾರನೊಬ್ಬನನ್ನು ಊಹಿಸಿಕೊಳ್ಳಲು ಸಹ ಸಾಧ್ಯವಿಲ್ಲ.....ತಮ್ಮ ಮಕ್ಕಳ ಮೊದಲ ತೊದಲುನುಡಿಗಳನ್ನು ಕೇಳಲು ಕ್ರಾಂತಿಕಾರರಿಗೆ ಅವಕಾಶವಿಲ್ಲದಿರಬಹುದು. ಅವರ ಪತ್ನಿಯರೂ ಕ್ರಾಂತಿಕಾರಿ ಉದ್ದೇಶದ ಸಾಫಲ್ಯಕ್ಕಾಗಿ ತ್ಯಾಗಕ್ಕೆ ಸಿದ್ಧವಿರಬೇಕಾಗುತ್ತದೆ. ಅವರಿಗೆ ಸ್ನೇಹಿತರಿರುವುದೇ ಕ್ರಾಂತಿಯಲ್ಲಿ ಅವರೊಡ

ನಿರುವ ಸಂಗಾತಿಗಳ ಮಧ್ಯೆ. ಕ್ರಾಂತಿಯ ಹೊರತಾಗಿ ಅವರಿಗೆ ಬೇರೆ ಜೀವನವಿಲ್ಲ."

ಕ್ರಾಂತಿಯೆಂಬುದು ಕೂಡ ಯಾರೋ ಕೆಲವು ಧೀರರು, ವೀರರು ಸೇರಿ ಮಾಡುವಂತಹುದಲ್ಲ. ಚೆ ಹೇಳುವಂತೆ ಕ್ರಾಂತಿಯ ಇತಿಹಾಸದಲ್ಲಿ ನಮಗೆ ಕಾಣಬರುವುದೆಲ್ಲಾ ಹಲವು ಸಾಮಾನ್ಯ ಮನುಷ್ಯರು ಮಾಡಿರುವ ಅಕೃತ್ರಿಮ ಪ್ರಯತ್ನಗಳೇ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರುವ ಶ್ರೇಷ್ಠತೆ ಮತ್ತು ಗರಿಮೆಗಳನ್ನು ಹೊರತರುವುದಷ್ಟೇ ನಮ್ಮ ಕೆಲಸ. ಹಾಗೆ ಮಾಡಿದಾಗ ಪ್ರತಿಯೊಬ್ಬ ವ್ಯಕ್ತಿಯೂ ಕ್ರಾಂತಿಕಾರನಾಗಿಯೇ ರಂಜಿಸುತ್ತಾನೆ." ಚೆ ಗೆವಾರ ಮತ್ತು ಗೆರಿಲ್ಲಾ ಯೋಧರ ಬಗ್ಗೆ ನಮ್ಮಲ್ಲಿ ಆಗಾಗ್ಗೆ ಒಂದು ತಪ್ಪು ಕಲ್ಪನೆ ಪ್ರಚಾರವಾಗುತ್ತದೆ. ಒಂದು ಹಿಡಿಯಷ್ಟು ಜನ ತ್ಯಾಗಿಗಳು, ವೀರರು, ಕ್ರಾಂತಿಕಾರರು ಹೋಗಿ ಕ್ಯೂಬಾವನ್ನು ವಿಮೋಚನೆಯತ್ತ ಕೊಂಡೊಯ್ದರು ಎಂಬುದು ಆ ಐತಿಹ್ಯ. ಈ ವೀರರಿಗೆ ರೈತ–ಕಾರ್ಮಿಕರ ಬೆಂಬಲವಿಲ್ಲದಿದ್ದಿದ್ದರೆ ಕ್ರಾಂತಿ ಹೇಗೆ ತಾನೆ ಸಾಧ್ಯವಾಗುತ್ತಿತ್ತು ? ಹಾಗೆ ಕೆಲವು ವೀರರಷ್ಟೇ ಕ್ರಾಂತಿಯನ್ನುಂಟುಮಾಡುವಂತಿದ್ದರೆ ಅದು ಬೊಲಿವಿಯಾದಲ್ಲಿ ಏಕೆ ಫಲಿಸಲಿಲ್ಲ ? ಸ್ವತಃ ಚೆ ಫಿಡೆಲ್ ಮತ್ತಿತರರಿಗೆ ತಮ್ಮಿಂದಷ್ಟೇ ಕ್ರಾಂತಿ ಉಂಟಾಗುತ್ತದೆಂಬ ಭ್ರಮೆ ಇರಲಿಲ್ಲ. ಜನರ ಒಲವು ಗಳಿಸದೆ ಕ್ರಾಂತಿಗೆ ಗೆಲುವಿಲ್ಲವೆಂಬುದು ಅವರ ಅನುಭವ ಮತ್ತು ಅಭಿಪ್ರಾಯ ಆಗಿತ್ತು. ಗೆರಿಲ್ಲಾ ಆಗಿ ಕಾದಾಡದಿದ್ದರೂ ಫ್ರಾಂಕ್ ಪೇಯಿಸ್‌ನಂಥವನು ಕ್ರಾಂತಿಕಾರಿಯೇ ಸರಿಯೆಂದು ಚೆ ಪದೇ ಪದೇ ಸ್ಪಷ್ಟಪಡಿಸುತ್ತಾರೆ. ಅಂತಹ ಸಂಘಟಕನಿಲ್ಲದೆ ಗೆರಿಲ್ಲಾ ಹೋರಾಟಕ್ಕೆ ಜನಬೆಂಬಲವೂ ಕೂಡಿಟ್ಟ ಬುತ್ತಿಯಾಗಿ ದೊರಕುವುದಿಲ್ಲ.

"ಕ್ಯೂಬಾದಲ್ಲಿ ಕ್ರಾಂತಿಕಾರಿ ಹೋರಾಟದ ನೆನಪುಗಳು" ಎಂಬ ತಮ್ಮ ಪುಸ್ತಕದಲ್ಲಿ ಚೆ ಇದನ್ನೆಲ್ಲಾ ಸಾರವತ್ತಾಗಿ ಪ್ರಸ್ತಾಪಿಸಿದ್ದಾರೆ. "ನಮ್ಮ ಗೆರಿಲ್ಲಾ ಸೈನ್ಯ ಎಂಥದೆಂದು ಎಲ್ಲರಿಗೂ ತಿಳಿದಿದೆ. ಅದರ

ಪರಿಣಾಮವಾಗಿ ಕೆಲವೊಮ್ಮೆ ಎಂತಹ ಬಲಿದಾನದಿಂದ ನಮ್ಮ ವಿಮೋಚನೆ ಸಾಧ್ಯವಾಯಿತೆಂಬುದನ್ನು ನಾವು ಮರೆಯುತ್ತೇವೆ. ಇಪ್ಪತ್ತು ಸಾವಿರ ಮಂದಿ ಇದಕ್ಕೆ ತಮ್ಮ ಪ್ರಾಣ ತೆತ್ತಿದ್ದಾರೆ. ಜನಸಮೂಹವು ದೊಡ್ಡ ಅಲೆಯಾಗಿ ಉಬ್ಬಿದೆ. ಆದರೆ ನಮ್ಮ ಯಶಸ್ಸಿಗೆ ಇನ್ನೂ ಬೇರೆ ಕಾರಣಗಳೂ ಇವೆ. ಬಟಿಸ್ಟಾ ಸರ್ವಾಧಿಕಾರವು ಜನಮರ್ದನದ ತನ್ನ ಘೋರನೀತಿಯಿಂದ ಜನರನ್ನು ಹೊಡೆದೆಬ್ಬಿಸಿತ್ತು. ಈ ಅಧಿಕಾರಕ್ಕೆ ಬೆಂಬಲ ನೀಡಿದವರಿಗೆ ವಿಶಿಷ್ಟ ಸೌಲಭ್ಯಗಳೂ ಇದ್ದವು. ಘರ್ಷಣೆ ಆರಂಭವಾದಾಗ ಸರ್ಕಾರದ ಯಾವ ಹಿಮ್ಮೆಟ್ಟಿಸುವ ಪ್ರಯತ್ನವೂ ಜನರ ರೋಷವನ್ನು ಕುಗ್ಗಿಸಲಿಲ್ಲ.... ಮೂಲಭೂತವಾಗಿ ಈ ಯುದ್ಧದಲ್ಲಿ ವಿಜಯ ಪ್ರಾಪ್ತಿಯಾದದ್ದು ಜನರಿಗೆ. ಅವರ ಮುಂಚೂಣಿಯಲ್ಲಿ ಸಶಸ್ತ್ರ ಯೋಧರಿದ್ದರು, ಅಷ್ಟೆ." ಇನ್ನೊಂದೆಡೆ ಚೆ ಹೇಳುತ್ತಾರೆ : "ವಿಮೋಚನಾ ಹೋರಾಟದಲ್ಲಿ ತೊಡಗಿರುವ ಜನಗಳಿಗೆ ಸಶಸ್ತ್ರ ಹೋರಾಟ ಒಂದೇ ಮಾರ್ಗವೆಂದು ನಾನು ತಿಳಿದಿದ್ದೇನೆ ಮತ್ತು ನನ್ನ ಈ ಅಭಿಪ್ರಾಯ ಸ್ಥಿರವಾದದ್ದು. ನಾನೊಬ್ಬ ಸಾಹಸಾನ್ವೇಷಿಯೆಂದು ಅನೇಕ ಮಂದಿ ಹೇಳುತ್ತಾರೆ. ಅವರು ಹೇಳುವುದು ಸರಿ. ಆದರೆ ನಿರ್ದಿಷ್ಟ ಬಗೆಯ ಸಾಹಸಾನ್ವೇಷಿ ನಾನು, ತಮ್ಮದು ಸರಿಯೆಂಬುದನ್ನು ತೋರಿಸಿಕೊಡಲು ಪ್ರಾಣವನ್ನೇ ಪಣಕ್ಕೊಡುವವರಂಥ ಜನರ ಪಾಲಿಗೆ ಸೇರಿದವನು ನಾನು." ಕ್ಯೂಬಾ ಬಿಟ್ಟು ಬೊಲಿವಿಯಾಕ್ಕೆ ತೆರಳುವಾಗ ತನ್ನ ಮಕ್ಕಳಿಗೆ ಬರೆದ ಕಾಗದದಲ್ಲಿ ಚೆ ಹೇಳಿದ್ದಿದು; "ನೀವು ಬೆಳೆದು ದೊಡ್ಡವರಾಗಬೇಕು. ಒಳ್ಳೆಯ ಕ್ರಾಂತಿಕಾರಿಗಳಾಗಬೇಕು. ಶ್ರದ್ಧೆಯಿಂದ ಅಭ್ಯಾಸ ಮಾಡಿರಿ. ನಿಸರ್ಗ ನಮ್ಮ ನಿಯಂತ್ರಣದಲ್ಲಿರುವಂತೆ ಮಾಡುವ ತಂತ್ರಜ್ಞಾನವನ್ನು ಕರಗತ ಮಾಡಿಕೊಳ್ಳಿರಿ. ನೆನಪಿರಲಿ, ಕ್ರಾಂತಿ ಅತ್ಯಂತ ಮುಖ್ಯವಾದದ್ದು ಮತ್ತು ವೈಯಕ್ತಿಕವಾಗಿ ನಮ್ಮಲ್ಲಿ ಪ್ರತಿಯೊಬ್ಬನೂ ಮುಖ್ಯವಾಗುವುದಿಲ್ಲ. ಅತಿಮುಖ್ಯ ವಿಷಯವೆಂದರೆ, ಜಗತ್ತಿನ ಯಾವ ಭಾಗದಲ್ಲೇ

ಅನ್ಯಾಯ ಸಂಭವಿಸಲಿ ಅದನ್ನು ಸರ್ವಥಾ ಸಹಿಸಕೂಡದು. ಇದು ಕ್ರಾಂತಿಕಾರಿಯ ಅತ್ಯಂತ ಪ್ರಮುಖ ಗುಣವಾಗಿರುತ್ತದೆ."

"ಗೌರವದಿಂದ ಮೃತಿ ಹೊಂದಲು ಜೊತೆಗಾರರು ಬೇಕಿಲ್ಲ."– ೧೯೫೭ರ ಡಿಸೆಂಬರ್‌ನಲ್ಲಿ ಕ್ಯೂಬಾದ ಜನತೆಯುನ್ನುದ್ದೇಶಿಸಿ ಫಿಡೆಲ್ ಹೊರಡಿಸಿದ್ದ ಪ್ರಣಾಲಿಕೆಯು ಕಡೆಯ ವಾಕ್ಯ ಇದು. "ನಾವು ಗೆಲ್ಲುತ್ತೇವೆ, ಇಲ್ಲವೆ ಮಡಿಯುತ್ತೇವೆ." ಇದು ಗ್ರಾನ್ಮಾದಲ್ಲಿ ಹೊರಟ ಕ್ರಾಂತಿಕಾರಿಗಳ ತೀರ್ಮಾನವಾಗಿತ್ತು. "ತಾಯಿನಾಡು, ಇಲ್ಲವೆ ಮರಣ" ಎಂಬುದು ಗೆರಿಲ್ಲಾಗಳ ಘೋಷಣೆಯಾಗಿತ್ತು. ಕ್ರಾಂತಿಕಾರಿ ಸೈನಿಕನಾಗಿ ಚೆ ಇವೆಲ್ಲ ವನ್ನೂ ಶ್ರದ್ಧೆಯಿಂದ ನಂಬಿ, ಆದರಂತೆ ನಡೆದುಕೊಂಡ ಎಂದೇ ಆತ ಉದಾತ್ತ ಜೀವಿಗಳ ಪಂಕ್ತಿಗೆ ಸೇರುವುದು.

ಅಧ್ಯಾಯ ೭

ಕೆಲಸ

ಕ್ಯೂಬಾದಲ್ಲಿ ಫಿಡೆಲ್ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಆಡಳಿತ ಸೂತ್ರ ವಹಿಸುವ ಜವಾಬ್ದಾರಿಯನ್ನು ಚೆ ಎಂದೂ ನಿರಾಕರಿಸಲಿಲ್ಲ. ಅಮೆರಿಕಾದ ಪ್ರಚೋದನೆಯಿಂದ ಪ್ಲಾಯ ಗಿರೋನ್ ಎಂಬಲ್ಲಿ ಕ್ಯೂಬಾದ ಮೇಲೆ ಉಗ್ರವಾದ ಆಕ್ರಮಣ ನಡೆಸಿ ಕ್ರಾಂತಿಕಾರಿ ಸರ್ಕಾರವನ್ನು ಬುಡಮೇಲು ಮಾಡುವ ಯತ್ನ ಜರುಗಿದಾಗ ಚೆ ಪ್ರತ್ಯಕ್ಷವಾಗಿ ಅಲ್ಲಿದ್ದು ಸೇನಾ ಕಾರ್ಯದಲ್ಲಿ ಭಾಗಿಯಾಗಿದ್ದರು. ಕ್ಯೂಬಾದಲ್ಲಿ ಸಮಾಜವಾದಿ ಕ್ರಾಂತಿ ಪಕ್ಷವು ಸ್ಥಾಪನೆಯಾದಾಗ ಚೆ ಅದರ ರಾಷ್ಟ್ರೀಯ ನಾಯಕ ಗಣದ ಸದಸ್ಯರಾದರು. ರಾಷ್ಟ್ರದ ಅನೇಕ ಆರ್ಥಿಕ ಆಯೋಗಗಳ ಸದಸ್ಯರಾಗಿದ್ದು ಕೈಗಾರಿಕೆ ಮತ್ತು ಕೃಷಿ ಎರಡೂ ಅನ್ಯೋನ್ಯವಾಗಿ ಬೆಳೆಯಲು ಹಾಗೂ ಆಧುನಿಕತೆಯತ್ತ ಚಲಿಸಲು ಆತ ಕಾರ್ಯಕ್ರಮಗಳನ್ನು ರೂಪಿಸಿದ. ವಿದೇಶಾಂಗ ವ್ಯವಹಾರಗಳ ಖಾತೆಯನ್ನು ನಿರ್ವಹಿಸುತ್ತಾ ಅನೇಕ ಸೈದ್ಧಾಂತಿಕ ಚರ್ಚೆಗಳನ್ನು ನಡೆಸಿ ಮಿತ್ರರಾಷ್ಟ್ರಗಳನ್ನು ಸಾಮ್ರಾಜ್ಯಶಾಹಿಯ ಕುತಂತ್ರಗಳನ್ನು ಎದುರಿಸುವತ್ತ ಪ್ರೇರೇಪಿಸಿದ.

೧೯೬೦ರ ಅಕ್ಟೋಬರ್‌ನಲ್ಲಿ ಕ್ಯೂಬಾದ ಆರ್ಥಿಕ ನಿಯೋಗವೊಂದರ ಪ್ರಮುಖನಾಗಿ ಚೆ ಸಮಾಜವಾದಿ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿ ಹಲವು ಒಪ್ಪಂದಗಳನ್ನು ಮಾಡಿಕೊಳ್ಳಲು ಕಾರಣನಾದ. ಈ

ಅವಧಿಯಲ್ಲಿ ಸೋವಿಯೆತ್ ಒಕ್ಕೂಟ, ಜರ್ಮನ್ ಪ್ರಜಾಪ್ರಭುತ್ವ ವಾದಿ ಗಣರಾಜ್ಯ, ಚೀನ, ಉತ್ತರ ಕೊರಿಯಾ, ಜೆಕೋಸ್ಲೋವಾಕಿಯಾ ಇತ್ಯಾದಿ ರಾಷ್ಟ್ರಗಳಿಗೆ ಭೇಟಿ ನೀಡಿ ಕ್ಯೂಬಾದ ಸೈದ್ಧಾಂತಿಕ ನೀತಿಯನ್ನು ವಿವರವಾಗಿ ತಿಳಿಯ ಹೇಳಿದ. ಇದಕ್ಕೆ ಮುಂಚೆ ೧೯೫೯ರ ಜೂನ್‌ನಿಂದ ಸುಮಾರು ಮೂರು ತಿಂಗಳ ಕಾಲ ಭಾರತವೂ ಸೇರಿದಂತೆ ಹತ್ತಾರು ರಾಷ್ಟ್ರಗಳಲ್ಲಿ ಅಧಿಕೃತ ಪ್ರವಾಸ ಕೈಗೊಂಡು ನೂತನ ಕ್ಯೂಬಾದ ವಿದ್ಯಮಾನಗಳನ್ನು ವಿವರಿಸಿ ರಾಜ್ಯ ತಾಂತ್ರಿಕ ಸಂಬಂಧಗಳನ್ನೇರ್ಪಡಿಸಿ ಕೊಳ್ಳುವುದರಲ್ಲಿ ಅವರು ಯಶಸ್ವಿಯಾಗಿದ್ದರು. ಈ ಪ್ರವಾಸದಿಂದ ಹಿಂದಿರುಗಿದಾಗ ಕೃಷಿ ಸುಧಾರಣಾ ಸಂಸ್ಥೆಯ ಔದ್ಯೋಗಿಕ ವಿಭಾಗದ ಮುಖ್ಯಸ್ಥನಾಗಿ ಕೆಲಸ ಮಾಡಲು ನೇಮಿಸಲಾಯಿತು. ಅದಾದ ಮೇಲೆ ಕ್ಯೂಬಾದ ಆರ್ಥಿಕ ಖಾತೆಯ ಮಂತ್ರಿಯಾಗಿ ರಾಷ್ಟ್ರೀಯ ಬ್ಯಾಂಕಿನ ಮುಖ್ಯಸ್ಥರಾದರು. ೧೯೬೧ರಲ್ಲಿ ಅವರು ಕೈಗಾರಿಕಾ ಸಚಿವರಾದರು. ಇದರೊಟ್ಟಿಗೆ ಕೇಂದ್ರೀಯ ಯೋಜನಾ ಮಂಡಲಿಯ ಸ್ಥಾಪನೆಗಾಗಿಯೂ ಅವರು ದುಡಿದರು.

ಚೆಗೆ ನೀಡಲಾದ ಜವಾಬ್ದಾರಿಗಳ ಪಟ್ಟಿಯನ್ನು ನೋಡಿದಾಗ ಒಂದು ಅನುಮಾನವು ತಮಾಷೆಗಾಗಿಯಾದರೂ ಮೂಡಬಹುದು ; ಯಾವ ಖಾತೆಯನ್ನೂ ಸರಿಯಾಗಿ ನಿರ್ವಹಿಸಲಿಲ್ಲವೆಂದು ಈತನನ್ನು ಒಂದರಿಂದ ಇನ್ನೊಂದಕ್ಕೆ ಯಾವಾಗಲೂ ವರ್ಗಾಯಿಸಲಾಗುತ್ತಿತ್ತೇ ? ವಸ್ತುಸ್ಥಿತಿ ಹಾಗಿರಲಿಲ್ಲ. ಒಂದೊಂದು ವಿಭಾಗದಲ್ಲೂ ನಿರ್ದಿಷ್ಟವಾದ ಕೆಲಸವೊಂದನ್ನು ಆಗು ಮಾಡಲು ಜವಾಬ್ದಾರಿಯನ್ನು ಅವರಿಗೆ ಕೊಡಲಾಗುತ್ತಿತ್ತು. ಯಾವ ಅಂಜಿಕೆಯೂ ಇಲ್ಲದೆ ಸ್ಪಷ್ಟವಾಗಿ ರಾಷ್ಟ್ರೀಯ ನೀತಿಯನ್ನು ಜಾರಿಗೊಳಿಸಲು ಚೆಯಷ್ಟು ಮುಕ್ತವಾಗಿ ಹೆಜ್ಜೆ ಹಾಕುವವರು ಬೇರೆ ಬಹಳಷ್ಟು ಮಂದಿ ಇರಲಿಲ್ಲವೆಂದು ಇದರರ್ಥ.

೧೯೬೨ರಲ್ಲಿ ಒಂದು ಪ್ರಾಂತ್ಯದ ಸೇನಾ ಮುಖ್ಯಸ್ಥರಾಗಿದ್ದಾಗ ಆಕಸ್ಮಿಕವಾಗಿ ಪಿಸ್ತೂಲನ್ನು ಎತ್ತಿಹಾಕಿ ಚೆ ಒಂದು ಗುಂಡೇಟನ್ನು

ತಾಕಿಸಿಕೊಂಡರು. ಇದರಿಂದ ಗಾಯಗೊಂಡ ಚೆ ಬಗ್ಗೆ ಅಮೆರಿಕಾದ ಪತ್ರಿಕೆಗಳಲ್ಲಿ ಸ್ವಾರಸ್ಯಕರವಾದ ಊಹಾಪೋಹಗಳು ಹಲವು ದಿನಗಳ ಕಾಲ ವಿಜೃಂಭಿಸಿದವು. ಫಿಡೆಲ್ ಕ್ಯಾಸ್ಟ್ರೋ ಜೊತೆ ಚೆ ಗೆವಾರನ ಸಂಬಂಧಗಳು ಮುದುಡಿಕೊಂಡಿದ್ದರಿಂದ ಹತಾಶನಾಗಿ ಚೆ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿ ವಿಫಲನಾದನೆಂಬುದು ಈ ಊಹಾಪೋಹಗಳ ಕೇಂದ್ರ ಬಿಂದುವಾಗಿತ್ತು. ಚೆ ಬಗ್ಗೆ ಈ ರೀತಿಯ ಕತೆಗಳನ್ನು ಕಟ್ಟು ವುದು ಪ್ರತಿಗಾಮಿ ಮಾಧ್ಯಮಗಳ ಹವ್ಯಾಸವಾಗಿತ್ತು. ಸಾಮ್ರಾಜ್ಯ ಶಾಹಿಯ ಕಟ್ಟಾವಿರೋಧಿಯ ಬಗೆಗಲ್ಲದೆ ಇನ್ನಾರ ವಿರುದ್ಧ ಹೀಗೆ ವಿಷ ಕಾರಲು ಸಾಧ್ಯವಿದೆ !

೧೯೬೪ರ ಡಿಸೆಂಬರ್‌ನಲ್ಲಿ ಕ್ಯೂಬಾದ ಪ್ರತಿನಿಧಿಯಾಗಿ ವಿಶ್ವ ಸಂಸ್ಥೆಯ ಸಭೆಯಲ್ಲಿ ಚೆ ಮಾತನಾಡಿ ಕ್ಯೂಬಾದ ವಿರುದ್ಧ ಸಾಮ್ರಾಜ್ಯ ಶಾಹಿ ಅಮೇರಿಕಾ ಕೈಗೊಂಡಿದ್ದ ಅಘೋಷಿತ ಯುದ್ಧವನ್ನು ನೇರವಾಗಿ ಖಂಡಿಸಿ ಕ್ಯೂಬಾ ಯಾವತ್ತೂ ಶಾಂತಿಗಾಗಿ ಹೋರಾಡುವುದೆಂದು ವಚನ ವಿತ್ತರು. ಅಲಿಪ್ತ ದೇಶಗಳ ಸಾಲಿನಲ್ಲಿ ತನ್ನ ಸ್ಥಾನವನ್ನು ಗುರುತಿಸಿ ಕೊಳ್ಳಲು ಕ್ಯೂಬಾ ಎಂದೂ ಹಿಂಜರಿಯುವುದಿಲ್ಲವೆಂದೂ ಆ ಭಾಷಣ ದಲ್ಲಿ ಚೆ ತಿಳಿಸಿದ್ದರು. ವಿಶ್ವಸಂಸ್ಥೆಯ ಅಧಿವೇಶನದ ನಂತರ ಮತ್ತೆ ಮೂರು ತಿಂಗಳ ಪ್ರವಾಸ ಕೈಗೊಂಡು ಕೆನಡಾ, ಐರ್ಲೆಂಡ್, ಅಲ್ಜೀರಿಯಾ, ಮಾಲಿ, ಕಾಂಗೋ, ಗಿನಿ. ಘಾನಾ, ತಾನ್‌ಜಾನಿಯಾ, ಈಜಿಪ್ಟ್ ಇತ್ಯಾದಿ ರಾಷ್ಟ್ರಗಳಿಗೆ ಭೇಟಿ ಕೊಟ್ಟು ಕ್ಯೂಬಾಕ್ಕೆ ಅಂತರ ರಾಷ್ಟ್ರೀಯವಾಗಿ ಮಾನ್ಯತೆ ದೊರಕಿಸಿಕೊಡಲು ಚೆ ಶ್ರಮಿಸಿದ. ಈ ಪ್ರವಾಸ ಮುಗಿಸಿ ಹಿಂದಿರುಗಿದಾಗ ಹವಾನಾದ ವಿಮಾನ ನಿಲ್ದಾಣದಲ್ಲಿ ಸ್ವತಃ ಫಿಡೆಲ್ ಆತನನ್ನು ಬರಮಾಡಿಕೊಂಡರು. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಜೊತೆ ಸಂಪರ್ಕ ಬೆಳೆಸಬೇಕೆಂಬ ಚೆ ಆಶಯ ಕಾರಣಾಂತರ ಗಳಿಂದ ಕೈಗೂಡಿರಲಿಲ್ಲ.

ಇದಾದ ಕೆಲ ಕಾಲಾನಂತರ ಕ್ಯೂಬಾದಿಂದ ನಿರ್ಗಮಿಸಲು ಚೆ

ತೀರ್ಮಾನಿಸಿದ್ದಿರಬೇಕು. ಹಠಾತ್ತನೆ ಆತ ಕಾಣೆಯಾದ. ಫಿಡೆಲ್ ಮತ್ತು ಇನ್ನಿತರ ಮೂರು-ನಾಲ್ಕು ಜನಗಳಿಗಲ್ಲದೆ ಆತನ ಸುಳಿವು ಬೇರಾರಿಗೂ ಸಿಗುವಂತಿರಲಿಲ್ಲ. ಫಿಡೆಲ್‌ಗೆ ದೀರ್ಘ ಪತ್ರ ಬರೆದು ಆತ ಕ್ಯೂಬಾದಿಂದ ಹೊರಬಿದ್ದಿದ್ದ. ೧೯೬೫ರ ಮೇ ತಿಂಗಳಲ್ಲಿ ಚೆನ ತಾಯಿ ಮಗ ಎಲ್ಲಿ ಹೋದನೋ ಯಾವಾಗ ಫೋನಿನಲ್ಲಿ ಸಂಭಾಷಣೆ ನಡೆಸುತ್ತಾನೋ ಎಂಬ ನಿರೀಕ್ಷೆಯಲ್ಲಿ ಮರಣ ಹೊಂದಿದಳು. ಆಗ್ಗೆ ಆಗಲೆ ಚೆ ಹವಾನಾದಿಂದ ಬಹಳ ದೂರ ಹೋಗಿಯಾಗಿತ್ತು. ೧೯೬೭ರಲ್ಲಿ ಚೆ ಬರೆದ ಒಂದು ಪತ್ರ ತಂದೆ ಡಾನ್ ಅರ್ನೆಸ್ಟೋಗೆ ಬಂತು. "ಬೇಗ ಬಂದು ಕಾಣುವೆ ಎಂದಿಗೂ ಬರಲಾಗದೆ ಹೋದರೆ....", ಎಂದು ಪತ್ರದ ಕೊನೆಯಲ್ಲಿತ್ತು.

ಅಧ್ಯಾಯ ೮

ಬಂಡಾಯ

ಏಪ್ರಿಲ್ ೧೯೬೫ರಲ್ಲಿ ಚೆ ಬರೆದಿದ್ದ ಪತ್ರದಲ್ಲಿ ಫಿಡೆಲ್‌ಗೆ ಹೇಳಿದ್ದ ಮಾತುಗಳು ಭಾಗಶಃ ಹೀಗಿವೆ: "ಹತ್ತು ಹಲವು ವಿಷಯಗಳು ನನ್ನ ಸ್ಮೃತಿಪಟಲದಲ್ಲಿ ಸುಳಿಯುತ್ತವೆ: ಮರಿಯಾ ಆಂಟೋನಿಯಾ ಅವರ ಮನೆಯಲ್ಲಿ ನಾವು ಭೇಟಿಯಾದದ್ದು, ನಿಮ್ಮನ್ನು ಸೇರಿಕೊಳ್ಳಲು ಆಹ್ವಾನ, ತಯಾರಿಯಲ್ಲಿ ನಾವು ಕಳೆದ ತುಡಿತದ ದಿನಗಳು, ಇತ್ಯಾದಿ.... ವಿಜಯದ ಹಾದಿಯಲ್ಲಿ ಅಸು ನೀಗಿದವರೆಷ್ಟೋ....ಕ್ಯೂಬಾದ ಕ್ರಾಂತಿಗೆ ನನ್ನ ಕಾಣಿಕೆಯನ್ನು ಯಥಾಶಕ್ತಿ ನೀಡಿದ್ದೇನೆ. ಈಗ ನಿನಗೆ, ನನ್ನ ಸಂಗಾತಿಗಳಿಗೆ ಮತ್ತು ಜನಕ್ಕೆ ವಿದಾಯ ಹೇಳುವ ಸಮಯ ಬಂದಿದೆ. ನೀವೆಲ್ಲಾ ನನ್ನವರಾಗಿದ್ದೀರಿ. ಔಪಚಾರಿಕವಾಗಿ ರಾಷ್ಟ್ರೀಯ ನಾಯಕತ್ವದಲ್ಲಿ ನನ್ನೆಲ್ಲ ಸ್ಥಾನಗಳನ್ನೂ ತ್ಯಜಿಸುತ್ತಿದ್ದೇನೆ. ನನ್ನ ಮಂತ್ರಿ ಪದವಿ, ಸೈನ್ಯದಲ್ಲಿ ಮೇಜರ್ ಸ್ಥಾನ ಮತ್ತು ಕ್ಯೂಬಾದ ಪೌರತ್ವ....ವಿಶ್ವದ ಬೇರೆ ದೇಶಗಳಲ್ಲಿ ನನ್ನ ಅಳಿಲು ಸೇವೆ ಸಲ್ಲಿಸಬೇಕೆಂದು ಮನಸ್ಸಾಗುತ್ತಿದೆ. ನಾನು ಅದನ್ನು ಮಾಡಬಲ್ಲೆ. ನೀನಾದರೋ ಕ್ಯೂಬಾದ ಅಧ್ಯಕ್ಷನಾಗಿ ಅನೇಕ ಜವಾಬ್ದಾರಿಗಳನ್ನು ಹೊತ್ತಿದ್ದೀಯೆ. ನಾವೀಗ ನಮ್ಮ ನಮ್ಮ ದಾರಿಗಳನ್ನು ಹಿಡಿಯೋಣ. ಆದರೂ ಒಂದಂಶವನ್ನು ಒತ್ತಿ ಹೇಳಬಯಸುತ್ತೇನೆ. ಇಲ್ಲಿಂದ ಹೋಗುವಾಗ ಸಂತೋಷ, ವ್ಯಥೆಗಳೆರಡೂ ನನ್ನನ್ನಾವರಿಸಿವೆ...... ನನ್ನನ್ನು

ಮಗನಂತೆ ನೋಡಿಕೊಂಡ ಜನರನ್ನು ಬಿಟ್ಟುಹೋಗುತ್ತಿದ್ದೇನೆ. ಅದು ನನಗೆ ಅತೀವ ದುಃಖದ ಸಂಗತಿ. ನೀನು ಕಲಿಸಿದ ನಂಬಿಕೆಯನ್ನು ಬೇರೆ ಹೋರಾಟ ರಂಗಗಳಿಗೆ ನಾನೀಗ ಕೊಂಡೊಯ್ಯುವೆ.. ಎಲ್ಲೇ ಆಗಲಿ ಸಾಮ್ರಾಜ್ಯಶಾಹಿ ವಿರುದ್ಧ ಸೆಣಸುವುದು ಕರ್ತವ್ಯ. ಇದು ಬೇರೆಲ್ಲ ದುಃಖದ ಭಾವನೆಗಳನ್ನೂ ಅಳಿಸಿಹಾಕುತ್ತದೆ....ನಾನೆಲ್ಲೇ ಇದ್ದರೂ ಕ್ಯೂಬಾದ ಕ್ರಾಂತಿಕಾರನೊಬ್ಬನ ಜವಾಬ್ದಾರಿಯನ್ನು ನೆನೆದು ಅದರಂತೆ ನಡೆದುಕೊಳ್ಳುವೆ. ಹೆಂಡತಿ, ಮಕ್ಕಳಿಗೆ ಏನೊಂದು ಸಂಪತ್ತನ್ನೂ ಬಿಡದೆ ಹೋಗುತ್ತಿರುವುದಕ್ಕೆ ನನಗೇನೂ ಅಳುಕಿಲ್ಲ. ಅದು ಹಾಗಿರುವುದೇ ಸರಿ. ಅವರಿಗೋಸ್ಕರ ನಾನೇನನ್ನೂ ಬೇಡುವುದಿಲ್ಲ. ರಾಜ್ಯವು ಅವರ ಜೀವನ, ವಿದ್ಯಾಭ್ಯಾಸಗಳಿಗೆ ಸಾಕಷ್ಟು ನೆರವು ನೀಡುತ್ತದೆಂಬ ಭರವಸೆ ನನಗಿದೆ....ವಿಜಯದತ್ತ ಸದಾ ಮುನ್ನುಗ್ಗೋಣ ತಾಯಿನಾಡು ಇಲ್ಲವೆ ಮರಣ".

ಚೆ ಗೆವಾರ ಎಲ್ಲಿ ಹೋದನೆಂಬುದರ ಬಗ್ಗೆ ಫಿಡೆಲ್ ಸಾಕಷ್ಟು ಕಾಲ ಬಹಿರಂಗವಾಗಿ ಏನನ್ನೂ ಹೇಳಲಿಲ್ಲ. ತಮ್ಮಿಬ್ಬರ ಸಂಬಂಧ ಮೊದಲಿಗಿಂತಲೂ ಉತ್ತಮವಾಗಿತ್ತೆಂದು ಮಾತ್ರ ಹೇಳಿ ಯಾವ ವಿರಸದಿಂದಲೂ ಚೆ ನಾಪತ್ತೆಯಾಗಿಲ್ಲವೆಂದು ಸ್ಪಷ್ಟಪಡಿಸಿದರು. ಆದರೂ ಅಲ್ಲಲ್ಲಿ ಗುಸುಗುಸು ಮಾತು ಕೇಳಿಬರುತ್ತಿತ್ತು. ೧೯೬೫ರ ಅಕ್ಟೋಬರ್‌ನಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪನಾ ಅಧಿವೇಶನದಲ್ಲಿ ಚೆ ಅನುಪಸ್ಥಿತಿಯನ್ನು ನೆನೆದು ಆತ ಬರೆದಿದ್ದ ಪತ್ರವೊಂದನ್ನು ಬಹಿರಂಗಗೊಳಿಸಿದರು. ಅದೇ ಏಪ್ರಿಲ್ ೧೯೬೫ರ ಪತ್ರ. ಆದರೆ ಚೆ ಬೊಲಿವಿಯಾಕ್ಕೆ ತೆರಳಿದ್ದನೆಂದು ಹೇಳಲಿಲ್ಲ. ಬಹುಶಃ ಅದು ಅವರಿಗೂ ಪೂರ್ಣವಾಗಿ ತಿಳಿದಿದ್ದೋ ಇಲ್ಲವೋ! ಅಂತೂ ಸಾಕಷ್ಟು ಕಾಲ ತೀವ್ರವಾಗಿ ಆಲೋಚಿಸಿ ಚೆ ಈ ತೀರ್ಮಾನ ಕೈಗೊಂಡಿದ್ದಿರಬೇಕು. ಬೊಲಿವಿಯಾದ ಸನ್ನಿವೇಶವು ಆತನನ್ನು ಅಲ್ಲಿಗೆ ಸೆಳೆಯಿತೆಂದು ತೋರುತ್ತದೆ. ಮೊದಲ ಬಾರಿ ಆತನು ಆ ದೇಶಕ್ಕೆ ಹೋಗಿದ್ದುದು ೧೯೫೩ರಲ್ಲಿ. ಈಗ ಮತ್ತೆ

ಅಲ್ಲಿಗೆ ಪ್ರಯಾಣಿಸಿದ್ದ. ಆದರೆ ಯಾರಿಗೂ ತಿಳಿಯದಂತೆ. ಅವರ ಬೊಲಿವಿಯಾದ ದಿನಚರಿ ಲಭ್ಯವಿರುವುದು ೧೯೬೬ರ ನವೆಂಬರ್ ೭ರಿಂದ ೧೯೬೭ರ ಅಕ್ಟೋಬರ್ ೭ರವರೆಗೆ. ಅಂದರೆ ಹನ್ನೊಂದು ತಿಂಗಳ ಅವಧಿಯದು ಮಾತ್ರ. ಏಪ್ರಿಲ್ ೧೯೬೫ರಿಂದ ನವೆಂಬರ್ ೧೯೬೬ರವರೆಗೆ ಏನು ಸಿದ್ಧತೆ ಮಾಡಿಕೊಳ್ಳುತ್ತಾ ಚೆ ಎಲ್ಲಿದ್ದಿರಬಹುದೆಂಬುದು ನಿರ್ದಿಷ್ಟವಾಗಿ ತಿಳಿದುಬಂದಿಲ್ಲ.

ರಿಕಾರ್ಡೊ (ಅಥವಾ ಚಿಂಚು) ಕ್ಯೂಬಾದವನು. ಈತ ಸಿಯೆರಾಮೇಸ್ಟ್ರಾದಲ್ಲಿ ಕ್ಯಾಪ್ಟನ್ ಪದವಿಯಲ್ಲಿದ್ದು ಹೋರಾಟ ನಡೆಸಿದ್ದವನು. ೧೯೬೩ರಲ್ಲಿ ಕೊಲಂಬಿಯಾದ ರಹದಾರಿ ಪತ್ರ ಪಡೆದು ಬೊಲಿವಿಯಾ ಪ್ರವೇಶಿಸಿದ್ದ. ೧೯೬೬ರಲ್ಲಿ ಲಾ ಪಾಜ್‌ಗೆ ಬಂದಿದ್ದವನು ಅರ್ಜೆಂಟೈನಾ ಗಡಿಗೆ ಹತ್ತಿರದಲ್ಲಿ ರಹಸ್ಯ ಶಿಬಿರವೊಂದನ್ನು ಸಿದ್ಧಗೊಳಿಸಿದ್ದ. ಬೊಲಿವಿಯಾದ ಇಂಟಿ ಮತ್ತು ಕೊಕೋ ಪೆರೆಡೊ ಮೊದಲೇ ರಿಕಾರ್ಡೊಗೆ ಪರಿಚಿತರು. ಇಬ್ಬರೂ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರು. ಪೊಂಬೊ ಮತ್ತು ತುಮಾ ಎಂಬಿಬ್ಬರು ಕ್ಯೂಬನರು ಬೊಲಿವಿಯಾ ಪ್ರವೇಶಿಸಿದರು. ತಾನ್ಯಾ ಎಂಬೊಬ್ಬಾಕೆಯೂ ಇವರೊಡನೆ ಸಂಪರ್ಕ ಬೆಳೆಸಿದರು. ಗೆರಿಲ್ಲಾ ಕಾರ್ಯಾಚರಣೆಗೆ ತರಬೇತಿ ನೀಡಲು ಒಂದು ನೆಲೆಯನ್ನು ಹುಡುಕುವುದು ಇವರ ಮೊದಲ ಕೆಲಸವಾಗಿತ್ತು. ಅವರು ಆಯ್ಕೆ ಮಾಡಿದ ಪ್ರದೇಶ ಗಿಡಗಂಟಿಗಳಿಂದ ತುಂಬಿದ್ದು ಅಮೆರಿಕಾದ ತೈಲ ಕಂಪನಿಯೊಂದು ಅದರ ಹತ್ತಿರದಲ್ಲೇ ಇತ್ತು. ಅಲ್ಲಿಯ ಕೆಲಸಗಾರರ ಸಹಕಾರ ದೊರಕಿಸಿಕೊಳ್ಳುವ ಉದ್ದೇಶವೂ ಇವರಿಗಿತ್ತು. ಕೊಕೋ ಪೆರೆಡೊ ಒಂದು ಪಶು ಸಂಗೋಪನಾ ಕ್ಷೇತ್ರವನ್ನು ಖರೀದಿಸಿದ. ಅದರ ಹೆಸರು ಕಲಾಮಿನಾ ರ್ಯಾಂಚ್. ನಂತರ ಕ್ಯೂಬಾದ ಪಾಚೋ ಮತ್ತು ಫ್ರಾನ್ಸಿನ ರೆಜಿ ಡೆಬ್ರೆ ಕೂಡ ಬಂದು ಕೂಡಿಕೊಂಡರು. ನವೆಂಬರ್‌ನಲ್ಲಿ ಚೆ ಕೂಡ ಬೊಲಿವಿಯಾಕ್ಕೆ ಫರ್ನಾಂಡಿಸ್ ಎಂಬ ಹೆಸರಿನಲ್ಲಿ ಉರುಗ್ವೆಯ ರಹದಾರಿ

ಪತ್ರದ ಸಹಾಯದಿಂದ ಬಂದಿಳಿದ. ೧೯೬೭ರ ಜನವರಿ ವೇಳೆಗೆ ಚೆ ಜೊತೆಯಲ್ಲಿ ಕ್ಯೂಬಾದಲ್ಲಿ ಸೈನಿಕನಾಗಿದ್ದ ಕ್ಯಾಪ್ಟನ್ ಆರ್ಲಾಂಡೋ ತಮಾಯೋ ಮತ್ತು ಬೊಲಿವಿಯಾದ ಇನ್ನೂ ಮೂವರು ಬಂದು ಸೇರಿಕೊಂಡರು. ಈಗ ಒಟ್ಟು ಮೂವತ್ತಕ್ಕೂ ಹೆಚ್ಚು ಮಂದಿ ಶಿಬಿರದಲ್ಲಿದ್ದರು.

ಬೊಲಿವಿಯಾದ ಕಮ್ಯುನಿಸ್ಟ್ ನಾಯಕ ಮೋಂಜೆ ಗುಟ್ಟಾಗಿ ಶಿಬಿರಕ್ಕೆ ಬಂದು ಚೇಯೊಡನೆ ಸಹಕಾರ ತಂತ್ರ ಕುರಿತು ಚರ್ಚೆ ನಡೆಸಿದ. ತಾನು ಗೆರಿಲ್ಲಾಗಳನ್ನು ಸಂಘಟಿಸದಿದ್ದರೂ ಪಕ್ಷದ ಸದಸ್ಯರು ಗೆರಿಲ್ಲಾ ಯೋಧರಾಗಿ ಸೇರಲು ಅಡ್ಡಿಯಿಲ್ಲವೆಂದು ಪಕ್ಷದ ಪರವಾಗಿ ಆತ ಆಶ್ವಾಸನೆ ಕೊಟ್ಟ. ಅಂತೆಯೇ ಅವನೊಡನೆ ಬಂದಿದ್ದ ಮೂವರಲ್ಲಿ ದಿವಿನೋ ಎಂಬಾತ ಘಟಕದಲ್ಲೇ ಉಳಿದ. ಇಷ್ಟೆಲ್ಲಾ ಯೋಜನೆಗಳನ್ನು ಸಿದ್ಧಪಡಿಸುತ್ತಿದ್ದ ವೇಳೆಗೆ ಅವರ ಶಿಬಿರದ ಮೇಲೆ ಸುತ್ತಮುತ್ತಲ ಜನ ಗುಮಾನಿಯಿಂದ ಕಣ್ಣು ಹಾಯಿಸಿದರು. ವಿಷಯ ಪೊಲೀಸರಿಗೂ ಮುಟ್ಟಿರಬೇಕು. ಸಿಯೆರ್ರಾ ಮೇಸ್ಟ್ರಾದಿಂದ ಭಿನ್ನವಾಗಿ ಇಲ್ಲಿ ಸ್ಥಳೀಯ ಜನ ಗೆರಿಲ್ಲಾಗಳ ಬಗ್ಗೆ ಉದಾಸೀನ ಮನೋಭಾವ ತಾಳಿದರೇ ವಿನಾ ಅವರೊಟ್ಟಿಗೆ ನಿಂತು ಬೆಂಬಲ ಸೂಚಿಸುವ ಮಟ್ಟಕ್ಕೇರಲಿಲ್ಲ.

ಈ ಸಂದರ್ಭದಲ್ಲಿ ಬೊಲಿವಿಯಾದ ರಾಜಕೀಯ ಪರಿಸ್ಥಿತಿ ಹೇಗಿತ್ತು ? ಮೊದಲಿಗೆ ಕ್ಯೂಬಾ ಜೊತೆ ರಾಜ್ಯತಾಂತ್ರಿಕ ಸಂಬಂಧ ಬೆಳೆಸಿದ್ದ ಬೊಲಿವಿಯಾ ಅಮೆರಿಕಾದ ಒತ್ತಡದಿಂದಾಗಿ ಅದನ್ನು ಕಡಿದು ಹಾಕಿತು. ಅದು ನಡೆದದ್ದು ೧೯೬೪ರ ಆಗಸ್ಟ್‌ನಲ್ಲಿ. ಇನ್ನೆಲ್ಲಿ ಬೊಲಿವಿಯಾ ಸಹ ಕ್ಯೂಬಾದ ಹಾದಿ ಹಿಡಿದೀತೋ ಎಂಬ ಆತಂಕ ಒಂದು ಕಡೆಯಾದರೆ ಆ ದೇಶದ ಸಂಪತ್ತು ಕೈತಪ್ಪಿ ಹೋಗಬಹುದೆಂಬ ಚಿಂತೆ ಇನ್ನೊಂದು ಕಡೆ. ಹೀಗಾಗಿ ಅಮೆರಿಕಾ ಸರ್ಕಾರವು ಸ್ಥಳೀಯ ಮಿಲಿಟರಿ ಅಧಿಕಾರಿಗಳಿಗೆ ಬೆಂಬಲ ನೀಡಿ ಪ್ರಜಾಪ್ರಭುತ್ವ ರೀತ್ಯಾ

ರಾಷ್ಟ್ರನಾಯಕ ಪಟ್ಟಕ್ಕೇರಿದ್ದ ಕಾರ್ಮಿಕ ನಾಯಕರನ್ನು ಬಲಿ ತೆಗೆದು ಕೊಂಡಿತು. ಬೊಲಿವಿಯಾದಲ್ಲಿ ರೇನೆ ಬ್ಯಾರಿಯೆಂಟೋಸ್ ಎಂಬ ಸೈನ್ಯಾಧಿಕಾರಿ ರಾಜ್ಯಯಂತ್ರವನ್ನು ತನ್ನ ಅಧೀನಕ್ಕೆ ತೆಗೆದುಕೊಂಡಿದ್ದ. ಇಂತಹ ಸರ್ವಾಧಿಕಾರಿಯನ್ನು ಕೆಳಗಿಳಿಸಿ ಜನತೆಗೆ ಮತ್ತೆ ಮಾನ್ಯತೆ ತಂದುಕೊಡುವುದು ಚೆ ಉದ್ದೇಶವಾಗಿತ್ತು. ಬೊಲಿವಿಯಾವನ್ನು ಆಯ್ಕೆ ಮಾಡಿಕೊಳ್ಳಲು ಕೂಡ ಇದು ಕಾರಣವಾಗಿತ್ತು.

ಕಾರ್ಯತಂತ್ರವನ್ನು ರೂಪಿಸಿಕೊಳ್ಳುತ್ತಾ ತಾನ್ಯಾಳನ್ನು ಸರ್ಕಾರದ ಉಚ್ಚ ಅಧಿಕಾರಿಗಳೊಂದಿಗೆ, ಕಡೆಗೆ ಬ್ಯಾರಿಯೆಂಟೋಸ್ ಜೊತೆ ಸಹ ಬೆರೆಯುವಂತೆ ಚೆ ಪ್ರೇರೇಪಿಸಿದ. ಶಿಕ್ಷಣ ಸಚಿವಾಲಯ ದಲ್ಲಿ ಉದ್ಯೋಗಸ್ಥೆಯಾಗಿದ್ದುಕೊಂಡು ಉನ್ನತ ಅಧಿಕಾರಿಗಳ ಮಧ್ಯೆ ನುಸುಳಿಕೊಂಡಿದ್ದ ಆಕೆ ರಹಸ್ಯವಾಗಿ ಚೆ ಗುಂಪಿನೊಡನೆಯೂ ಸಂಪರ್ಕ ಇರಿಸಿಕೊಂಡಿದ್ದಳು. ಈ ಮಧ್ಯೆ ಚೆ ಘಟಕದ ತರಬೇತಿ ಸ್ಥಾನವಾಗಿದ್ದ ಕಲಾಮಿನಾವನ್ನು ಸುತ್ತಮುತ್ತಲ ಜನ ಸಂಶಯದಿಂದ ನೋಡಲು ಆರಂಭವಾದಾಗ ಅಲ್ಲಿ ಕೆಲವೇ ಸಾಮಾನುಗಳನ್ನು ಬಿಟ್ಟು ಮಿಕ್ಕವುದ್ದ ನ್ನೆಲ್ಲಾ ಬೇರೆಡೆಗೆ ಸಾಗಿಸಿದ್ದರು. ಶಿಬಿರದಲ್ಲಿ ನಾಲ್ಕೈದು ಮಂದಿ ಉಳಿದುಕೊಂಡು ಉಳಿದವರು ಪರ್ವತಪ್ರದೇಶದತ್ತ ಸಾಗಿದರು. ಆ ಪ್ರದೇಶದ ಪರಿಚಯವೇ ಇರದಿದ್ದ ಇವರಿಗೆ ಕಾಡುಗಳಲ್ಲಿ ಹಾದಿ ತಪ್ಪುವುದು ವಾಡಿಕೆಯಾಯಿತು. ಸ್ಥಳೀಯ ಜನರೊಡನೆ ಸಂಭಾಷಣೆ ಸಾಧ್ಯವಾಗಲಿಲ್ಲ ಮತ್ತು ಸಾಧ್ಯವಾದಾಗಲೂ ಪ್ರಯೋಜನವಾಗಲಿಲ್ಲ. ದುಷ್ಕರವಾದ ನಡಿಗೆ; ಬೆನ್ನ ಮೇಲೆ ಭಾರದ ಹೊರೆ, ಒಪ್ಪತ್ತೂಟಕ್ಕೂ ತೊಂದರೆ ಮತ್ತು ಇವೆಲ್ಲದರ ಜೊತೆಗೆ ಕ್ಯೂಬಾದವರ ಹಾಗೂ ಬೊಲಿವಿಯಾದವರ ನಡುವೆ ಸಂಶಯ, ಕಿತ್ತಾಟ-ಎಲ್ಲಾ ಸೇರಿ ಗೆರಿಲ್ಲಾ ಸೈನಿಕರು ಹತಾಶೆಯ ಅಂಚಿಗೆ ತಳ್ಳಲ್ಪಟ್ಟಿದ್ದರು.

ಬೆಟ್ಟದಲ್ಲಿ ಒಂದು ಶಿಬಿರವನ್ನು ಮಾಡಿಕೊಂಡಾಗಲೂ ಅಲ್ಲಿ ಆಹಾರ ದಕ್ಕಿಸಿಕೊಳ್ಳಲು ಪರ್ಯಾಪ್ತವಿರಲಿಲ್ಲ. ಬದಲಾಗಿ ಬೊಲಿವಿಯಾ

ಸೈನ್ಯದ ತುಕಡಿಯೊಂದು ಈ ಸ್ಥಳವನ್ನು ಪತ್ತೆಹಚ್ಚಿ ಸುತ್ತುವರಿಯು ತ್ತಿತ್ತು. ಅಲ್ಲಿಂದ ತಪ್ಪಿಸಿ ಹೋಗುವಾಗ ಕಾರ್ಲೋಸ್ ಎಂಬೊಬ್ಬ ಗೆರಿಲ್ಲಾ ನೀರು ಪಾಲಾದ. ಘಟಕದ ಅನೇಕ ಸರಂಜಾಮುಗಳೂ ಆಯುಧಗಳೂ ನೀರು ಪಾಲಾದವು. ನಲವತ್ತೆಂಟು ದಿನ ಅಲೆದಾಡಿ ಮಾರ್ಚ್ ೧೯ ರಂದು ಘಟಕವು ಮೂಲ ಶಿಬಿರಕ್ಕೆ ವಾಪಸ್ಸಾಯಿತು. ಬೇಹುಗಾರಿಕೆ ವಿಮಾನವೊಂದು ಇವರ ತಲೆಯ ಮೇಲೆಯೇ ಹಾರಾಡು ತ್ತಿತ್ತು! ಡೆಬ್ರೆ, ತಾನ್ಯಾ, ನೆಗ್ರೋ ಮುಂತಾದವರು ಶಿಬಿರದಲ್ಲಿ ಚೆಗಾಗಿ ಕಾದು ಕುಳಿತಿದ್ದರು. ವ್ಯಾಪಕಚರ್ಚೆಯ ನಂತರ ಶಿಬಿರ ವನ್ನು ಖಾಲಿ ಮಾಡಿ ಸಂಘರ್ಷಕ್ಕಿಳಿಯಬೇಕೆಂದು ನಿಶ್ಚಯವಾಯಿತು.

೧೯೬೭ರ ಮಾರ್ಚ್ ೨೦ ರಂದು ಮೊದಲ ಸಂಘರ್ಷದಲ್ಲಿ ಗೆರಿಲ್ಲಾ ಘಟಕವು ಒಂದು ಚಿಕ್ಕ ಸೈನಿಕ ದಳವನ್ನು ಸೋಲಿಸಿ ಅದರ ಶಸ್ತ್ರಾಸ್ತ್ರಗಳನ್ನೆಲ್ಲಾ ವಶಪಡಿಸಿಕೊಂಡಿತು. ಇದರಿಂದ ಇಡೀ ಸೈನ್ಯವು ಎಚ್ಚರಗೊಂಡಿತು. ಆದರೆ ಗೆರಿಲ್ಲಾಗಳಿಗೆ ಅಷ್ಟು ಬೃಹತ್ತಾದ ಸೈನ್ಯ ವನ್ನೆದುರಿಸಲು ಸಾಮರ್ಥ್ಯವಿರಲಿಲ್ಲ. ಏಪ್ರಿಲ್ ೧೦ ರಂದು ಮತ್ತೆ ಎರಡು ಕದನಗಳಾಗಿ ಅವುಗಳಲ್ಲೂ ಗೆರಿಲ್ಲಾಗಳು ವಿಜಯ ಪಡೆದರು. ಅದರಲ್ಲೂ ಒಬ್ಬ ಅಸು ನೀಗಿದ್ದ. ಈ ಸನ್ನಿವೇಶದಲ್ಲಿ ಕೂಡ ರೈತಾಪಿ ಜನ ಗೆವಾರನ ಘಟಕದ ಜೊತೆ ಸಂಬಂಧವಿರಿಸಿಕೊಳ್ಳಲು ನಿರಾಕರಿಸಿದರು. ಚೆ ತನ್ನ ದಿನಚರಿಯಲ್ಲಿ ಏಪ್ರಿಲ್ ೧೭ರಂದು ಹೀಗೆ ಉಲ್ಲೇಖಿಸಿದ : "ನಾವು ಸಂಧಿಸಿದ ರೈತರ ಪೈಕಿ ಸೈಮನ್ ಎಂಬುವನೊಬ್ಬನೇ ನಮಗೆ ಬೆಂಬಲ ಸೂಚಿಸಿದ್ದು. ಆದರೆ ಅವನೂ ಹೆದರಿದ್ದಾನೆ. ಇನ್ನೊಬ್ಬ ವಿಡೇಸ್ ಎಂಬುವವನಿದ್ದಾನೆ. ಅವನು ಅಪಾಯಕಾರಿಯಾಗಬಲ್ಲ. ಈ ಪ್ರದೇಶದ ಶ್ರೀಮಂತ ರೈತ ಅವನು".

ಇದಾದ ಕೆಲವೇ ದಿನಗಳಲ್ಲಿ ಡೆಬ್ರೆ, ರಾತ್ ಮತ್ತು ಬುಸ್ಟೋಸ್ ಘಟಕ ಬಿಟ್ಟುಹೋದರು ಮತ್ತು ಮಾರನೆಯ ದಿನವೇ ಪೊಲೀಸರಿಗೆ ಸೆರೆ ಸಿಕ್ಕಿದರು. ಇದರಿಂದಾಗಿ ಕ್ಯೂಬಾ ಜೊತೆ ಸಂಪರ್ಕವೂ ಕಡಿದು

ಬಿದ್ದಂತಾಯಿತು. ಆದಾಗ್ಯೂ, ಮೇ ತಿಂಗಳಲ್ಲಿ ನಡೆದ ಇನ್ನೆರಡು ಕದನಗಳಲ್ಲಿ ಗೆರಿಲ್ಲಾಗಳು ಸೈನ್ಯದ ತುಕಡಿಗಳನ್ನು ಸೋಲಿಸಿದರು. ಜನರ ಪ್ರತಿಕ್ರಿಯೆ ಮಾತ್ರ ಮೊದಲಿನಂತೆಯೇ ಮುಂದುವರಿಯಿತು. ನಗರಗಳಲ್ಲಿ ಇವರ ಪರವಾಗಿ ರಾಜಕೀಯ ಆಂದೋಲನಗಳನ್ನು ಸಂಘಟಿಸುವುದಾಗಿ ಹೇಳಿದ್ದ ನಾಯಕರಿಂದ ಯಾವ ಪ್ರಯೋಜನವೂ ಕಂಡು ಬರಲಿಲ್ಲ. ಆಗಸ್ಟ್ ೭ರಂದು ದಿನಚರಿಯಲ್ಲಿ ಚೆ ದಾಖಲಿಸಿದ್ದದು : "ನನ್ನ ಅಸ್ತಮಾ ತೀವ್ರವಾಗುತ್ತಿದೆ ಮತ್ತು ಔಷಧವೆಲ್ಲಾ ಮುಗಿಯುತ್ತಾ ಬಂದಿದೆ. ನಕಹ್ವಾಸುಗೆ ಒಂದು ಗುಂಪನ್ನು ರವಾನಿಸುವ ಬಗ್ಗೆ ನಾಳೆ ತೀರ್ಮಾನ ಕೈಗೊಳ್ಳಬೇಕು. ಗೆರಿಲ್ಲಾ ತಂಡವನ್ನು ರಚಿಸಿ ಇಂದಿಗೆ ಸರಿಯಾಗಿ ಒಂಭತ್ತು ತಿಂಗಳುಗಳಾದವು. ಮೊದಲು ಆರು ಮಂದಿಯಲ್ಲಿ ಇಬ್ಬರು ಸತ್ತಿದ್ದಾರೆ, ಒಬ್ಬ ನಾಪತ್ತೆಯಾಗಿದ್ದಾನೆ ಮತ್ತು ಇಬ್ಬರು ಗಾಯಗೊಂಡಿದ್ದಾರೆ".

ರೆಜಿ ಡೆಬ್ರೆಯು ಪೋಲೀಸರಿಗೆ ಸಿಕ್ಕಿದ ನಂತರ ಗೆರಿಲ್ಲಾಗಳ ಪರಿಸ್ಥಿತಿ ಬಹಳವಾಗಿ ಬಿಗಡಾಯಿಸಿತ್ತು. ಅವರ ಎಲ್ಲ ಚಲನವಲನಗಳು ಹಾಗೂ ಯೋಜನೆಗಳ ಬಗ್ಗೆ ಆತ ಸಂಪೂರ್ಣವಾಗಿ ಮಾಹಿತಿ ಕೊಟ್ಟು ಬಿಟ್ಟಿದ್ದ. ಕ್ಯೂಬಾದ ಕ್ರಾಂತಿಯನ್ನು ಕುರಿತು ಪುಸ್ತಕ ಬರೆದಿದ್ದುದು ಮತ್ತು ಕ್ರಾಂತಿಯುಂಟುಮಾಡುವ ವಿಧಾನದಲ್ಲೇ ಕ್ರಾಂತಿಯುಂಟಾಗಿದ್ದಿತೆಂದು ಪ್ರತಿಪಾದಿಸುವ ಇನ್ನೊಂದು ಪುಸ್ತಕವನ್ನು ಬರೆದಿದ್ದುದು ಅವನ ಖ್ಯಾತಿಗೆ ಕಾರಣವಾಗಿತ್ತು. ಬೊಲಿವಿಯಾದ ಸನ್ನಿವೇಶವನ್ನು ಸಮೀಕ್ಷಿಸುವಲ್ಲಿ ಚೆ ಒಂದು ರೀತಿಯ ರೊಮ್ಯಾಂಟಿಕ್ ಆಗಿದ್ದರೆ ಅವನನ್ನು ಸೇರಿಕೊಂಡ ಡೆಬ್ರೆ ಇನ್ನೊಂದು ವಿಧದಲ್ಲಿ ಚೇಗಿಂತಲೂ ಹೆಚ್ಚು ರೊಮ್ಯಾಂಟಿಕ್ ಆಗಿದ್ದ. ಪೋಲೀಸರು ದಸ್ತಗಿರಿ ಮಾಡಿದ ಮೇಲೆ ಆದೆಲ್ಲಾ ಕರಗಿಹೋಗಿ ಎಲ್ಲ ವಾಸ್ತವಾಂಶಗಳನ್ನೂ ಬಿಚ್ಚಿ ಕೊಟ್ಟಿದ್ದ. (ಇನ್ನೂ ಅಮೇಲಿನ ಈತನ ಚರಿತ್ರೆ ಬಹಳ ವಿಸ್ಮಯಕರವಾದ್ದು. ಸಾಮ್ರಾಜ್ಯಶಾಹಿಯ ಅಂಗಸಂಸ್ಥೆಗಳೊಡನೆ ಸಂಬಂಧ

ಬೆಳೆಸಿ ಕ್ರಾಂತಿಯ ಕಲ್ಪನೆಯನ್ನು ಸ್ವೇಚ್ಛೆಯಿಂದ ಬದಲಾಯಿಸಿದ). ತಾನ್ಯಾ ಗೆರಿಲ್ಲಾಗಳೊಡನೆ ಸಂಪರ್ಕವಿಟ್ಟುಕೊಂಡಿದ್ದುದು ಬಹಿರಂಗ ವಾದ ಮೇಲೆ ಆಕೆ ಕ್ರಾಂತಿಯ ಚಟುವಟಿಕೆಗಳಲ್ಲಿ ಆಸಕ್ತಿ ಕಳೆದು ಕೊಂಡಳು.

ಬ್ಯಾರಿಯೆಂಟೋಸ್‌ನ ಸೈನ್ಯದಿಂದ ಸುತ್ತುವರಿಯಲ್ಪಟ್ಟಿದ್ದ ಚೆ ಘಟಕದ ಸ್ಥೈರ್ಯ ಕುಗ್ಗಿಹೋಗಿತ್ತು. ಅಂಗಾಲಿನಲ್ಲಿ ಒಂದು ಗಾಯ ವಾಗಿ ತೀವ್ರ ಬಾಧೆಯಿಂದ ಬಳಲಿದ್ದ ಚೆ ಈಗ ಜ್ವರಕ್ಕೂ ತುತ್ತಾದ. ಆ ಕುರುವಿನ ಕೀವನ್ನು ತೆಗೆಯುವುದೇ ಒಂದು ಸಾಹಸವಾಯಿತು. ಇದೇ ಸಂದರ್ಭದಲ್ಲಿ ಕ್ಯೂಬಾ ದಕ್ಷಿಣ ಅಮೆರಿಕಾ ಸೌಹಾರ್ದತಾ ಸಂಘವನ್ನು ರಚಿಸಲು ಒಂದು ಸಮ್ಮೇಳನ ಕರೆದಿತ್ತು. ಬೊಲಿವಿಯಾ ಪ್ರತಿನಿಧಿಗಳು ಅಲ್ಲಿ ಭಾಗವಹಿಸಿದ್ದರು. ಸಭೆ ನಡೆದ ವೇದಿಕೆಯ ಮೇಲೆ ಚೆ ಗೆವಾರನ ಭಾವಚಿತ್ರವೊಂದನ್ನು ಇಡಲಾಗಿತ್ತು. ಆದರೆ ಸ್ವತಃ ಚೆ ಯಾವ ಬೆಂಬಲವೂ ಇಲ್ಲದೆ ಬೊಲಿವಿಯಾದಲ್ಲಿ ನಲುಗಿಹೋಗುತ್ತಿದ್ದ. ಆತನ ಸಂದೇಶ ಮಾತ್ರ ಸೌಹಾರ್ದತಾ ಸಮ್ಮೇಳನಕ್ಕೆ ಸ್ಫೂರ್ತಿ ತಂದು ಕೊಟ್ಟಿತು. ದಕ್ಷಿಣ ಅಮೆರಿಕಾದ ಪ್ರತಿಯೊಂದು ದೇಶವೂ ವಿಯೆಟ್ನಾಂ ಆಗಬೇಕೆಂದೂ ಅಲ್ಲೆಲ್ಲಾ ಸಾಮ್ರಾಜ್ಯಶಾಹಿಗೆ ಸ್ಮಶಾನ ರಚಿಸಿಕೊಡ ಬೇಕೆಂದೂ ಚೆ ಸಂದೇಶದ ಸಾರಾಂಶವಾಗಿತ್ತು. ಈ ಸಮ್ಮೇಳನವು ಅಮೆರಿಕಾವನ್ನು ಕೆರಳಿಸಿತ್ತು. ಅಮೆರಿಕಾದ ಭಂಟ ಬ್ಯಾರಿಯೆಂಟೋಸ್ ಹೇಳಿದ: "ಕ್ಯೂಬಾ ವಿರುದ್ಧ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಹಸ್ತಕ್ಷೇಪ ಮಾಡಲು ಸಹ ಅಂಜಬಾರದು."

ಎಲ್ಲಕ್ಕಿಂತ ಹೆಚ್ಚು ದುಗುಡಕ್ಕೆ ಕಾರಣವಾದದ್ದು ಬೊಲಿವಿಯಾದ ರೈತರ ಪ್ರತಿಕ್ರಿಯೆ. ಅವರು ಗೆರಿಲ್ಲಾಗಳಿಗೆ ಸಹಾಯ ಮಾಡುವು ದಂತಿರಲಿ, ನೇರವಾಗಿ ಅವರ ವಿರುದ್ಧ ನಿಂತು ಬ್ಯಾರಿಯೆಂಟೋಸ್‌ನ ಸೈನಿಕರಿಗೆ ಸಹಕಾರ ನೀಡಲಾರಂಭಿಸಿದ್ದರು. ಚೆ ಇನ್ನೂ ಸಾಕಷ್ಟು ಚೇತರಿಸಿಕೊಂಡಿರಲಿಲ್ಲ. ಅಸ್ತಮಾ ಔಷಧಿಯೂ ಮುಗಿದಿತ್ತು. ಒಂದೆಡೆ ಸ್ವಲ್ಪ ಔಷಧಿಯನ್ನು ಹುದುಗಿಸಿಟ್ಟಿದ್ದರು. ಅಲ್ಲಿಗೆ ಅವರು ತಲುಪುವ

ಮೊದಲೇ ಬೊಲಿವಿಯಾದ ಸೈನಿಕರು ಆ ಪ್ರದೇಶವನ್ನು ತಮ್ಮ ಕೈಗೆ ತೆಗೆದುಕೊಂಡಿದ್ದರು. ಇಷ್ಟರಲ್ಲಿ ಅಳಿದುಳಿದಿದ್ದ ಗೆರಿಲ್ಲಾಗಳ ಪೈಕಿ ಕೆಲವರು ಹೇಳಕೇಳದೆ ಓಡಿಹೋದರು.

೧೯೬೭ರ ಸೆಪ್ಟೆಂಬರ್ ೨೨ರಂದು ಕೊನೆಯ ಪ್ರಯತ್ನವಾಗಿ ಒಂದು ಚಿಕ್ಕ ಹಳ್ಳಿಯಲ್ಲಿನ ಬಡ ರೈತರನ್ನು ಕಂಡು ಚೆ ಮಾತನಾಡಿದರು. ಸಭೆಯಲ್ಲಿ ಇಂಟಿ ಕೂಡ ಮಾತನಾಡಿ ಶೋಷಣೆಯ ಸ್ವರೂಪವನ್ನು ಮನಮುಟ್ಟುವಂತೆ ವಿವರಿಸಿದ. ಇದೇ ಬಹುಶಃ ಚೆ ಬಹಿರಂಗವಾಗಿ ಕಾಣಿಸಿಕೊಂಡ ಕಡೆಯ ಬಾರಿಯಾಗಿದ್ದಿರಬೇಕು. ಈ ಹಳ್ಳಿಯಿಂದ ಘಟಕವು ೨೬ರಂದು ಹಿಗ್ವೇರಾ ಎಂಬ ಗ್ರಾಮಕ್ಕೆ ತೆರಳಿ ಅದನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಇಲ್ಲಿಂದ ಮುಂದೆ ಹೋದಾಗ ನೇರವಾಗಿ ಶತ್ರುಸೈನ್ಯದ ವ್ಯೂಹದಲ್ಲಿ ಸಿಲುಕಿಕೊಂಡಿತು. ಅಲ್ಲಿ ನಡೆದ ಕದನ ಗೆರಿಲ್ಲಾಗಳ ಪಾಲಿಗೆ ವಿನಾಶಕಾರಿಯಾಗಿತ್ತು. ಕೊಕೋ ಪೆರೆಡೊ ಸೇರಿದಂತೆ ಮೂವರು ಸತ್ತರು. ಇಬ್ಬರಿಗೆ ಭಾರಿ ಪೆಟ್ಟಾಯಿತು. ಇಬ್ಬರು ಬೊಲಿವಿಯನ್ನರು ಶತ್ರುವಿಗೆ ಶರಣಾದರು. ಇನ್ನುಳಿದವರು ಹೇಗೋ ಎಲ್ಲಿಗೋ ಓಡಿ ತಪ್ಪಿಸಿಕೊಂಡರು. ಚೆ ಗೆವಾರನ ದಿನಚರಿಯು ಅಂತ್ಯವಾಗುವುದು ಇದೇ ಸಮಯಕ್ಕೆ ೧೯೬೭ರ ಅಕ್ಟೋಬರ್ ೭ರಂದು. ಅದರ ಮಾರನೆಯ ದಿನ ಆತ ಬೊಲಿವಿಯಾ ಸೈನ್ಯಕ್ಕೆ ಸೆರೆ ಸಿಕ್ಕಿದ. ಹತ್ತಿರದ ಹಳ್ಳಿಯ ಶಾಲೆಯನ್ನು ಹಂಗಾಮಿಯಾಗಿ ಕಾರಾಗೃಹವನ್ನಾಗಿ ಪರಿವರ್ತಿಸಲಾಗಿತ್ತು. ಅವನನ್ನು ಗುಂಡಿಕ್ಕಿ ಕೊಂದದ್ದು ಅಲ್ಲೇ. ಆ ಸ್ಥಳದಲ್ಲಿ ಈಗ ಒಂದು ಸ್ಮಾರಕ ಹಾಗೂ ವಸ್ತುಸಂಗ್ರಹಾಲಯ ಇದೆ. ಶಾಲೆಯೂ ಅಲ್ಲೇ ನಡೆಯುತ್ತದೆ.

ಬ್ಯಾರಿಯೆಂಟೋಸ್ ಸೆಪ್ಟೆಂಬರ್ ೧೧ರಂದೇ ರೇಡಿಯೋ ಪ್ರಸಾರದಲ್ಲಿ ಚೆ ಆಗಲೇ ಮಡಿದಿದ್ದನೆಂದೂ ಆತನ ಕ್ರಾಂತಿಕಾರಿ ಹೋರಾಟದ ಸಮಾಚಾರಗಳೆಲ್ಲಾ ಶುದ್ಧ ಸುಳ್ಳೆಂದೂ ನುಡಿದು ಚೆ ಗೆವಾರಾಗೆ ಸಂಬಂಧಿಸಿದ ಪ್ರತೀತಿಗಳೆಲ್ಲಾ ಕೇವಲ ಪ್ರಚಾರವೆಂದು ಅಲ್ಲಗಳೆದಿತ್ತು.

ಆದರೂ "ಸತ್ತ ಅಥವಾ ಬದುಕಿರುವ ಚೆ ಗೆವಾರನನ್ನು" ಪತ್ತೆಹಚ್ಚಲು ಸಹಾಯಕವಾಗುವ ಯಾವುದೇ ಮಾಹಿತಿಯನ್ನು ದೊರಕಿಸಿಕೊಡುವ ವ್ಯಕ್ತಿಗೆ ಐವತ್ತು ಸಾವಿರ ಬೊಲಿವಿಯನ್ ಡಾಲರುಗಳ ಬಹುಮಾನ ನೀಡಲಾಗುವುದೆಂದು ಕೂಡ ಪ್ರಸಾರ ಮಾಡಲಾಗಿತ್ತು! ರೇಡಿಯೋ ದಲ್ಲಿ ಇದನ್ನೆಲ್ಲಾ ಕೇಳಿದ ಚೆ ತನ್ನ ಗೆರಿಲ್ಲಾ ಪಡೆಯ ಕೆಚ್ಚು ಹಾಗೂ ಸಾಮರ್ಥ್ಯವನ್ನು ಮೆಚ್ಚಿಕೊಂಡಿರಬೇಕು. ಅಕ್ಟೋಬರ್ ೭ರಂದು ಅವರು ಶತ್ರು ಸೈನ್ಯದಿಂದ ಸುತ್ತುವರಿಯಲ್ಪಟ್ಟಿದ್ದು ಮಧ್ಯಾಹ್ನ ಒಂದು ಗಂಟೆಗೆ. ಕತ್ತಲಾಗುವವರೆಗೂ ಹೇಗೂ ನಿಭಾಯಿಸಿದ್ದರೆ ರಾತ್ರಿಯಲ್ಲಿ ತಪ್ಪಿಸಿಕೊಳ್ಳಬಹುದಾಗಿತ್ತು. ಇಂಟಿ ಮತ್ತು ಕೊಕೋ ಒಂದು ಕಡೆ ದಿಟ್ಟತನದಿಂದ ಶತ್ರುಸೇನೆಯನ್ನು ತಡೆಹಿಡಿದಿದ್ದರು. ಗಾಯ ಗೊಂಡಿದ್ದ ಚೆ ಬಳಿಯಿದ್ದ ಎಂ–೨ ರೈಫಲ್ ಕೂಡ ನಿಷ್ಪ್ರಯೋಜಕ ವಾಗಿತ್ತು. ಅವನ ಇನ್ನೊಂದು ಪಿಸ್ತೂಲ್‌ನಲ್ಲಿ ಗುಂಡೇ ಇರಲಿಲ್ಲ. ಹೀಗಾಗಿ ಅವನು ಓಡಲಾಗದೆ ಸೆರೆಯಾದ. ಆದರೆ ಶರಣಾಗಲಿಲ್ಲ. ಯಾರ ಹೆಸರು ದಕ್ಷಿಣ ಅಮೆರಿಕಾದಲ್ಲಿ ಹರಡಿ ವಾಷಿಂಗ್‌ಟನ್ ಸರ್ಕಾರಕ್ಕೆ ಭೀತಿಯನ್ನುಂಟುಮಾಡಿತ್ತೋ ಮತ್ತು ಯಾರು ಬ್ಯಾರಿಯೆಂಟೋಸ್ ಸರ್ಕಾರಕ್ಕೆ ಹೃದ್ರೋಗ ಉಂಟುಮಾಡಿದ್ದನೋ ಅವನು ಕಾಲದಲ್ಲಿ ಲೀನನಾಗಿದ್ದ.

ಸೆರೆಯಾದ ಚೇನನ್ನು ಹಿಗೇರಸ್‌ಗೆ ಸಾಗಿಸಿದ್ದರು. ಅಲ್ಲಿಯ ಶಾಲೆ ಯಲ್ಲಿ ಅವನಿಗೆ ಪ್ರಶ್ನೆಗಳ ಸುರಿಮಳೆ. ತನ್ನನ್ನು ಸೆರೆಹಿಡಿದಿದ್ದ ಸೈನಿಕ ರೊಡನೆ ಸಂಭಾಷಿಸಲು ಅವನು ನಿರಾಕರಿಸಿದ. ಅವನನ್ನು ಒಬ್ಬ ಸೈನಿಕ ಹಾಗೂ ಒಬ್ಬ ಅಧಿಕಾರಿ ಏನೋ ಕೊಂಕು ಮಾತನಾಡಿ ರೇಗಿಸಿ ದರು. ಇಬ್ಬರ ಮುಖಗಳಿಗೂ ಮುಷ್ಟಿಯಿಂದ ಬಲವಾಗಿ ಗುದ್ದಿದ. ಲಾ ಪಾಜ್‌ನಲ್ಲಿ ಬ್ಯಾರಿಯೆಂಟೋಸ್ ಮತ್ತು ಇತರ ಸೇನಾಧಿಕಾರಿಗಳು ಸಭೆ ಸೇರಿ ಹಿಗೇರಸ್‌ನಲ್ಲೇ ಚೇನನ್ನು ಮುಗಿಸಿಬಿಡಬೇಕೆಂಬ ನಿರ್ಧಾರಕ್ಕೆ ಬಂದರು. ಅವನು ಬದುಕಿದ್ದರೆ ಇನ್ನು ವಿಚಾರಣೆಯಾಗಬೇಕು. ಅಲ್ಲಿ

ಅವನು ಉದ್ಬುದ್ಧದ ಭಾಷಣಗಳನ್ನು ಮಾಡುತ್ತಾನೆ. ಅಂತರ ರಾಷ್ಟ್ರೀಯವಾಗಿ ಒತ್ತಡ ಆರಂಭವಾಗುತ್ತದೆ. ಬೊಲಿವಿಯಾ ಸರ್ಕಾರದ ಪಾತಕಗಳು ವಿಶ್ವದಲ್ಲೆಲ್ಲಾ ಪ್ರಚಾರವಾಗುತ್ತವೆ. ಇದಕ್ಕಿದ್ದ ಒಂದೇ ಪರಿಹಾರವೆಂದರೆ ಕ್ರಾಂತಿಯ ಪತ್ರೀಕವಾಗಿ ಪ್ರಸಿದ್ಧನಾಗಿದ್ದ ಗೆವಾರನನ್ನು ಸದ್ದಿಲ್ಲದೆ ಗುಂಡಿಕ್ಕಿ ಕೊಲ್ಲುವುದು. ಅಮೆರಿಕಾದಲ್ಲಿ ತರಬೇತಿ ಪಡೆದಿದ್ದ ಮೇಜರ್ ಅಯೋರೋ ಮತ್ತು ಕರ್ನಲ್ ಸೆಲ್ನಿಚ್‌ಗೆ ಈ ಕೆಲಸ ವಹಿಸಲಾಯಿತು. ಇವರು ಹಿಗೇರಸ್ ತಲುಪುವ ವೇಳೆಗೆ ಚೆ ಜೊತೆ ಸೆರೆ ಸಿಕ್ಕಿದ್ದ ಇನ್ನಿಬ್ಬರು ಗೆರಿಲ್ಲಾಗಳನ್ನು ಸೈನಿಕರೇ ಕೊಂದುಹಾಕಿದ್ದರು. ಉಳಿದಿದ್ದವನು ಚೆ ಒಬ್ಬನೇ. ಅವನನ್ನು ಕೊಲ್ಲಿಸಿ ಮೆಕ್ಸಿಕೋವಿನ ತೈಲ, ಬ್ರೆಜಿಲ್‌ನ ಕಾಫಿ, ಚಿಲಿಯ ತಾಮ್ರ, ಇತ್ಯಾದಿಗಳನ್ನೆಲ್ಲಾ ತನ್ನಲ್ಲೇ ಉಳಿಸಿಕೊಳ್ಳಬಹುದೆಂಬುದು ಅಮೆರಿಕಾದ ಲೆಕ್ಕಾಚಾರವಾಗಿತ್ತು. ಕ್ಯೂಬಾದ ಸಕ್ಕರೆಯಂತೂ ಹೋಯಿತು: ಇನ್ನು ಇವಾದರೂ ಉಳಿಯಲಿ ಎಂಬುದು ಅವರ ಆಶಯ. ಬ್ಯಾರಿಯೆಂಟೋಸ್‌ಗೆ ತನ್ನ ಅಧಿಕಾರ ಉಳಿದರೆ ಸಾಕಾಗಿತ್ತು ; ದೇಶದ ಸಾರ್ವಭೌಮತ್ವದ ಪ್ರಶ್ನೆ ಅವನಿಗೆ ಗೌಣವಾಗಿತ್ತು. ಹೀಗಿರುವಾಗ ಮಾನವೀಯತೆಗೆ ಕುರುಹಾಗಿದ್ದ ಚೆ ಬಗ್ಗೆ ಬರ್ಬರತೆಯ ಮತ್ತು ದಾಸ್ಯದ ಚಿಹ್ನೆಯಾಗಿದ್ದ ಬ್ಯಾರಿಯೆಂಟೋಸ್‌ಗೆ ಗೌರವ ಹೇಗೆ ತಾನೆ ಇದ್ದೀತು !

ಚೆ ಸೆರೆಸಿಕ್ಕಿ ಶಾಲೆಯಲ್ಲಿ ಇಡಲ್ಪಟ್ಟಿದ್ದಾಗ ಬ್ಯಾರಿಯೆಂಟೋಸ್ ಸರ್ಕಾರದ ಅನೇಕರು ಅಲ್ಲಿಗೆ ಬಂದಿದ್ದರು. ಬೇಹುಗಾರಿಕೆ ವಿಭಾಗದ ಡಾ॥ ಗೊನ್ಸಾಲ್ವೆಸ್ ಸಹ ಅವರಲ್ಲಿ ಒಬ್ಬ. ಅತನೊಡನೆ ಅಮೆರಿಕೆಯ ಗೂಢಚಾರ ವಿಭಾಗದ ಪ್ರತಿನಿಧಿಗಳು ಬಂದಿದ್ದರು. ಶಾಲೆಯ ಒಬ್ಬ ಉಪಾಧ್ಯಾಯಿನಿಯೂ ಅಲ್ಲಿದ್ದಳು. ಆಕೆಯೊಡನೆ ಮಾತ್ರ ಚೆ ಸಂಭಾಷಣೆಗಿಳಿದ. ಕಪ್ಪುಹಲಗೆಯ ಮೇಲೆ ಬರೆಯಲಾಗಿದ್ದ ಸ್ಪ್ಯಾನಿಷ್ ಭಾಷೆಯ ಒಂದು ವಾಕ್ಯದಲ್ಲಿದ್ದ ಚಿಕ್ಕ ತಪ್ಪನ್ನು ಆಕೆಯ ಗಮನಕ್ಕೆ ತಂದ ಮತ್ತು ಕ್ಯೂಬಾದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಉಂಟಾಗುತ್ತಿದ್ದ

ಬದಲಾವಣೆಗಳ ಬಗ್ಗೆ ಮಾತನಾಡಿದ. ಗೊನ್ಸಾಲ್ವೆಸ್‌ನ ಪ್ರಶ್ನೆಯೊಂದಕ್ಕೆ ಚೆ ಹೇಳಿದ: "ನಾನು ಕ್ರಾಂತಿಯ ಅಮರತ್ವದ ಕುರಿತು ಆಲೋಚಿಸುತ್ತಿದ್ದೇನೆ." ಅದರ ಅರ್ಥ ಪೂರ್ಣವಾಗಿ ಗೊನ್ಸಾಲ್ವೆಸ್ ಗ್ರಹಿಸಿದನೋ ಇಲ್ಲವೋ ತಿಳಿಯದು, ಚೆ ಮನಸ್ಸಿನಲ್ಲಿದ್ದ ತುಮುಲ ಹಾಗೂ ದಾರ್ಢ್ಯ ಸ್ಪಷ್ಟವಿದೆ. ಕ್ರಾಂತಿಕಾರಿಯೊಬ್ಬ ಸೋಲಬಹುದು, ಸೆರೆಸಿಕ್ಕಬಹುದು, ಸಾಯಬಹುದು. ಸಾಯುವುದರಲ್ಲಿ ಅವನಿಗೆ ಶ್ರೇಯಸ್ಸಿದೆ, ಅಮರತ್ವವಿದೆ. ಅದಕ್ಕಿಂತಲೂ ಹೆಚ್ಚಾಗಿ ಅವನೊಬ್ಬನನ್ನು ಸಾಯಿಸುವುದರಿಂದ ಕ್ರಾಂತಿಯ ಬಿರುಗಾಳಿಯನ್ನು ತಡೆಗಟ್ಟಿದಂತೆ ಆಗುವುದಿಲ್ಲ, ಸಮಾಜದಲ್ಲಿರುವ ವೈರುಧ್ಯಗಳನ್ನು ಅಳಿಸಿ ಹಾಕಲು ಇನ್ನೊಬ್ಬ ಚೆ ಬರುತ್ತಾನೆ, ಮತ್ತೊಬ್ಬ ಚೆ ಬರುತ್ತಾನೆ ಬರುತ್ತಲೇ ಇರುತ್ತಾನೆ. ದೌರ್ಜನ್ಯ, ದಮನ, ದಾರುಣತೆ ಕೊನೆಯಾಗಿ ಮಾನವೀಯತೆ ಮನೆ ಮಾಡಿಕೊಳ್ಳುವವರೆಗೂ ಇದು ನಡೆಯುತ್ತಲೇ ಇರುತ್ತದೆ, ಮಾನವ ಜನಾಂಗದ ನಿಜವಾದ ಇತಿಹಾಸ ಪ್ರಾರಂಭವಾಗುವುದು ಆಮೇಲೆ.

ಕ್ಯೂಬಾದಲ್ಲಿ ಮೂವತ್ತು ದಿನಗಳ ಶೋಕಾಚರಣೆಗೆ ಕರೆ ಕೊಡಲಾಯಿತು. ಹಿಂದೊಮ್ಮೆ ಚೆ ಹೇಳಿದ್ದ ಮಾತುಗಳನ್ನು ರಾಷ್ಟ್ರ ಸ್ಮರಿಸಿತು: "ಇದು ನಮ್ಮ ಭವಿಷ್ಯದ ಕೆಲಸ—ಕ್ಯೂಬಾದ ಜನತೆಗೆ ತಮ್ಮ ಬಲದ ಕಲ್ಪನೆ ಬರುವಂತೆ ಮಾಡುವುದು ಮತ್ತು ಸಂವಿಧಾನದಲ್ಲಿ ನೀಡಲಾಗಿರುವ ವೈಯ್ಯಕ್ತಿಕ ಹಕ್ಕುಗಳು ಅಮೂಲ್ಯ ಸಂಪತ್ತೆಂಬ ಭರವಸೆ ದೊರಕಿಸಿಕೊಳ್ಳುವುದು. ಸಂಭ್ರಮದಿಂದ ನಾವು ಗಂಟೆಗಳನ್ನು ಬಾರಿಸುತ್ತಿದ್ದೇವೆ. ಅದಕ್ಕಿಂತಲೂ ಮುಖ್ಯವಾಗಿ ನಮಗೆ ದೊರಕಬೇಕಾದ್ದು ಸಂತೋಷದ ನಗೆ, ಆತಂಕವಿಲ್ಲದ ಜೀವನ. ಇವನ್ನು ಕಳೆದುಕೊಂಡ ಕ್ಯೂಬಾ ಮತ್ತೆ ಅವನ್ನು ಪಡೆಯಬೇಕು. ವಿಮೋಚನೆಯು ಆಗಲೇ ಅರ್ಥಪೂರ್ಣವಾಗುವುದು." ಸಾಮ್ರಾಜ್ಯಶಾಹಿಯು ಇಂದಿನ ದರ್ಪ ಫಿಡೆಲ್‌ನನ್ನು ಎತ್ತಿಹಾಕಬಹುದು, ಸಮಾಜವಾದಿ ವ್ಯವಸ್ಥೆಯನ್ನು ಬುಡ

ಮೇಲು ಮಾಡಬಹುದು, ಅಮೆರಿಕಾದ ಸರ್ಕಾರ ವಿಭಾಗವೊಂದರಂತೆ ಕೆಲಸ ನಿರ್ವಹಿಸುತ್ತಿರುವ ವಿಶ್ವಸಂಸ್ಥೆ ಅದನ್ನು ತಡೆಗಟ್ಟದಿರಬಹುದು, ಅವರ ಸದಸ್ಯರಾಷ್ಟ್ರಗಳು ಕೈಬಾಯಿ ಕಟ್ಟಿ ವೀಕ್ಷಕರಾಗಿ ಎಲ್ಲವನ್ನೂ ಅಸಡ್ಡೆಯಿಂದ ನೋಡುತ್ತಾ ಕುಳಿತುಕೊಳ್ಳಬಹುದು. ಆದರೆ "ತಾಯಿ ನಾಡು, ಇಲ್ಲವೆ ಮರಣ" ಎಂಬ ಘೋಷಣೆಯೊಂದಿಗೆ ಹೋರಾಟಕ್ಕಿಳಿದು ವಿಜಯಿಯಾದ ಕ್ಯೂಬಾ ತನ್ನ ಜುಲೈ ೨೬ರ ಚಳುವಳಿಯ ಸ್ಫೂರ್ತಿಯಿಂದ ಸಾಮ್ರಾಜ್ಯಶಾಹಿಯನ್ನೆದುರಿಸುತ್ತದೆಯೆಂಬ ಭರವಸೆ ಇಟ್ಟುಕೊಳ್ಳಬಹುದು ಕೂಡ. ಚೆ ಪರಂಪರೆಗೆ ಸೇರಿದವರು ಸಾಮ್ರಾಜ್ಯಶಾಹಿಯೆದುರು ಕಂಗಾಲಾಗುವುದಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ ಭಾರತದಂತಹ ರಾಷ್ಟ್ರಕ್ಕೆ ಚೆ ಸಂದೇಶವೇನಾದರೂ ಇದ್ದರೆ ಅದು ಇಷ್ಟೆ : "ಸಾಮ್ರಾಜ್ಯಶಾಹಿಯೆದುರು ಕಂಗಾಲಾಗಬೇಡಿ. ಭಾರತ ಬಿಟ್ಟು ತೊಲಗಿ ಎಂದವರು ನೀವು. ತಾಯಿನಾಡು. ಇಲ್ಲವೆ ಮರಣ ಎಂದವರು ನಾವು, ನಮ್ಮಂತಹವರು ಜೊತೆಗೂಡಿದರೆ ಸಾಮ್ರಾಜ್ಯಶಾಹಿಯನ್ನು ಅಳಿಸಿ ಹಾಕಬಹುದು, ಬನ್ನಿ. ಒಟ್ಟಿಗೆ ಹೆಜ್ಜೆ ಹಾಕೋಣ."

ಚೆ ತನ್ನದೇ ಆದ ಮಾರ್ಗವನ್ನು ಹಿಡಿದು ಮುಂದುವರಿದವನು. ಅದನ್ನು ವಿಮರ್ಶಿಸಿ ನಾವು ಸೂಕ್ತವಾದ ಹಾದಿಯನ್ನು ಸನ್ನಿವೇಶಕ್ಕೆ ತಕ್ಕಂತೆ ರೂಪಿಸಿಕೊಳ್ಳಬೇಕು. ಆದರೆ ಅವನ ಆಕಾಂಕ್ಷೆ ನಮ್ಮ ಆಕಾಂಕ್ಷೆಯಾಗಬೇಕು, ನಿಸ್ವಾರ್ಥತೆ, ಶೋಷಣೆಯ ವಿರುದ್ಧ ಕಳಕಳಿ, ಮಾನವನ ಸುಖ ಮತ್ತು ಅವನ ಭವಿಷ್ಯದ ಬಗ್ಗೆ ಅಪಾರವಾದ ಪ್ರೇಮ ಹಾಗೂ ತಡೆಯಲಾಗದ ಹುಮ್ಮಸ್ಸು ಇವೆಲ್ಲಾ ಚೆ ಗೆವಾರನಲ್ಲಿ ನಾವು ಕಾಣಬಹುದಾದ ಗುಣಗಳು. ವಿಶ್ವ ಜನಾಂಗದ ಅದಮ್ಯಶಕ್ತಿ ಮತ್ತು ಭಾವನೆಗಳ ಪ್ರತೀಕ ಚೆ ಗೆವಾರ ಎಂದೇ ಆತನನ್ನು "ಅದಮ್ಯ ಚೆ" ಎಂದು ಕರೆಯುವುದು. ●

ಗ್ರಂಥಋಣ :

೧. ಐ. ಲಾವ್ರೆತ್‌ಸ್ಕಿ : ಅರ್ನೆಸ್ಟೊಚೆ ಗೆವಾರ (ಇದು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಲಭ್ಯವಿದೆ)

೨. ಚೆ ಗೆವಾರ : ಕ್ಯೂಬದ ಕ್ರಾಂತಿಕಾರಿ ಸಮರದ ಸ್ಮೃತಿಗಳು (ಇಂಗ್ಲೀಷಿನಲ್ಲಿ)

೩. ಚೆ ಗೆವಾರ : ಬೊಲಿವಿಯಾದ ದಿನಚರಿ (ಇಂಗ್ಲೀಷಿನಲ್ಲಿ)

೪. ಫಿಡೆಲ್ ಕ್ಯಾಸ್ಟ್ರೋ : ಇತಿಹಾಸವು ನನ್ನನ್ನು ನಿರ್ದೋಷಿಯನ್ನಾಗಿಸುತ್ತದೆ (ಇಂಗ್ಲೀಷಿನಲ್ಲಿ)

೫. ರೆಜಿ ಡೆಬ್ರೆ : ಕ್ರಾಂತಿಯ ತಂತ್ರ (ಇಂಗ್ಲೀಷಿನಲ್ಲಿ)

೬. ಚೆ ಗೆವಾರ : ಗೆರಿಲ್ಲಾ ಯುದ್ಧತಂತ್ರ (ಇಂಗ್ಲೀಷಿನಲ್ಲಿ)


ಸಾಮಾಜಿಕ ಚಿಂತನ ಮಾಲೆ